# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಸೆಪ್ಟೆಂಬರ್ ೨೦೧೬ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೬ ಸಂಚಿಕೆ: ೨

**ಬೆಲೆ:** ಬಿಡಿ ಪ್ರತಿ: ರೂ. ೨೦/- ಪುಟ: ೨೦

**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೮೨ ೪೨೨೮೪ ***ಈ ಮೇಲ್:*** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಇಂದು ದೇಶಾದ್ಯಂತ ಹೆಚ್ಚಾಗುತ್ತಿರುವ ಅಂಡ-ಭಂಡ ದೇಶಭಕ್ತರು ಹುಚ್ಚೆದ್ದು ಕುಣಿಯುವಂತಹ ಸುದ್ದಿಯೊಂದು ಪ್ರಕಟವಾಗಿರುವುದನ್ನು ನೀವೆಲ್ಲ ಗಮನಿಸಿರಬಹುದು. ಆ ಸುದ್ದಿಯೆಂದರೆ, ನಮ್ಮ ದೇಶವೀಗ ಜಗತ್ತಿನ ಹತ್ತು ಶ್ರೀಮಂತ ದೇಶಗಳಲ್ಲಿ ಏಳನೇ ಸ್ಥಾನ ಪಡೆದಿದೆ ಎಂಬುದು. ಅದು ಇಟಲಿ, ಕೆನಡಾ ಮತ್ತು ಆಸ್ಟ್ರೇಲಿಯಾಗಳನ್ನೂ ಹಿಂದಿಕ್ಕಿ ಶ್ರೀಮಂತಿಕೆಯಲ್ಲಿ ದಾಪುಗಾಲುಗಳನ್ನಿಟ್ಟಿದೆ. ಈ ಪಟ್ಟಿ ಮಾಡುವಾಗ ಈ ದೇಶಗಳು ತಲೆ ಮೇಲೆ ಹೊತ್ತಿರುವ ಸಾಲದ ಹೊರೆಯನ್ನು ಸೇರಿಸಲಾಗಿಲ್ಲ ಎಂದೂ ಮೆಲ್ಲಗೆ ಹೇಳಲಾಗಿದೆ! ಅದೇನೇ ಇದ್ದರೂ ಈ ಸುದ್ದಿಯನ್ನು ಮೋದಿ ಸರ್ಕಾರದ ಸಾಧನೆ ಎಂದು ಹೇಳಿಕೊಂಡು ಕುಣಿಯಬಯಸುವವರ ಸಂಖ್ಯೆ ಇಂದು ಕಡಿಮೆ ಏನಲ್ಲ. ಏಕೆಂದರೆ ಇದು ದೇಶಭಕ್ತರ ಹುಚ್ಚು ಆವೇಶದ ಕುಣಿತದ ಕಾಲವಾಗಿದೆ.

ಆದರೆ ಈ ಸುದ್ದಿಯನ್ನು ಒಳಹೊಕ್ಕು ನೋಡಿದರೆ, ಈ ಸುದ್ದಿಯ ಒಡಲಲ್ಲಿನ ಭಾರತದ ಅಭಿವೃದ್ಧಿಯ ಇನ್ನೊಂದು-ಕುರೂಪಿ-ಮುಖ ಎದ್ದು ಕಾಣುತ್ತದೆ. ಅತ್ಯಂತ ಹೆಚ್ಚು ಬಡವರನ್ನು ಹೊಂದಿರುವ, ತೀವ್ರ ಅಪೌಷ್ಠಿಕತೆಯಿಂದ ನರಳುವ ಅತ್ಯಂತ ಹೆಚ್ಚು ಮಕ್ಕಳನ್ನು ಹೊಂದಿರುವ, ಬಹುಜನರಿಗೆ ಕನಿಷ್ಟ ವೈದ್ಯಕೀಯ ಸೌಲಭ್ಯವಾಗಲೀ, ಸ್ವಚ್ಛ ಕುಡಿಯುವ ನೀರಾಗಲೀ ಇನ್ನೂ ಒದಗದ ಸ್ಥಿತಿಯಲ್ಲಿರುವ ಮತ್ತು ಒಲಂಪಿಕ್ಸ್‌ನಲ್ಲಿ ಒಂದೆರಡು ಪದಕಗಳನ್ನು ಗೆಲ್ಲುವಲ್ಲೇ ಏದುಸಿರು ಬಿಡುವಂತಾಗುವ ಈ ದೇಶ ಜಗತ್ತಿನ ಹತ್ತು ಶ್ರೀಮಂತ ದೇಶಗಳಲ್ಲಿ ಒಂದು ಎಂದರೆ ನಿಜವಾಗಿಯೂ ಏನರ್ಥ? ಅಥವಾ ಜಗತ್ತಿನ ದೇಶಗಳ ಮಾನವ ಅಭಿವೃದ್ಧಿ ಸೂಚ್ಯಂಕಗಳ ಪಟ್ಟಿಯಲ್ಲಿ ಅತ್ಯಂತ ಕೆಳಗಿನ ಸ್ಥಾನದಲ್ಲಿರುವ ದೇಶವೊಂದು ಅತಿ ಶ್ರೀಮಂತ ದೇಶಗಳಲ್ಲೊಂದು ಎಂದು ಹೆಸರಿಸಲ್ಪಡುವ ವಿಪರ್ಯಾಸದ ಗುಟ್ಟಾದರೂ ಏನು?

ಈ ಗುಟ್ಟು ಏನೆಂದರೆ ಈ ದೇಶದ ಅಭಿವೃದ್ಧಿಯ ಲಾಭಗಳನ್ನೆಲ್ಲ ಕೆಲವೇ ಕೆಲವರು ತಮ್ಮದಾನ್ನಾಗಿಸಿಕೊಂಡು ದೇಶದ ಸಂಪತ್ತಿನ ಒಟ್ಟು ಮೊತ್ತವನ್ನು ಹೆಚ್ಚಿಸಿದ್ದಾರಷ್ಟೆ!. ಈವರೆಗಿನ ಸರ್ಕಾರಗಳು-ಅದು ಯುಪಿಎದ್ದೇ ಆಗಿರಲಿ ಅಥವಾ ಎನ್‌ಡಿಎದ್ದೇ ಆಗಿರಲಿ-ಬಡವರ, ವಂಚಿತರ ಪರ ಎಷ್ಟೇ ಸಹಾನೂಭೂತಿಯ ಮಾತಾಡಿದರೂ ಅದರ ಈ ಕಾರ್ಯಕ್ರಮಗಳು-ನಮ್ಮ ಸಿದ್ಧರಾಮಯ್ಯನವರ 'ಭಾಗ್ಯಾತಿ ಭಾಗ್ಯ'ಗಳ ಕಾರ್ಯಕ್ರಮಗಳೂ ಸೇರಿದಂತೆ-ತಕ್ಷಣಕ್ಕೆ ಕಣ್ಣೊರೆಸುವ ತತ್ಕಾಲೀನ ಕಾರ್ಯಕ್ರಮಗಳಷ್ಟೇ ಆಗಿವೆ. ಅಭಿವೃದ್ಧಿಯ ಹೂರಣವೆಲ್ಲ ಬಂಡವಾಳಿಗರ ಪಾಲಾಗಿದೆ. ಇಲ್ಲಿ ಮುಖ್ಯ ಪ್ರಶ್ನೆ, ಇದನ್ನು ಅಭಿವೃದ್ಧಿ ಎಂದು ಕರೆಯಬಹುದೇ ಎಂಬುದಾಗಿದೆ. ಅಭಿವೃದ್ಧಿ ಎಂದೇ ಆದರೆ, ಯಾರ ಮತ್ತು ಎಂತಹ ಅಭಿವೃದ್ಧಿ ಎಂದು ಕೇಳಬೇಕಾಗುತ್ತದೆ. ಇದರ ಹಿಂದಿರುವ ಆರ್ಥಿಕ ಮತ್ತು ಸಾಮಾಜಿಕ-ರಾಜಕೀಯ ನೀತಿಗಳನ್ನು ಪ್ರಶ್ನಿಸಬೇಕಾಗುತ್ತದೆ. ಅಭಿವೃದ್ಧಿಯ ಫಲಗಳ ಸಮಾನ ಹಂಚಿಕೆಯಾಗುವಂತಹ ರಾಜಕಾರಣಕ್ಕಾಗಿ ಆಗ್ರಹಿಸಬೇಕಾಗುತ್ತದೆ.

ಆದರೆ ಇಂದು ಜನಸಾಮಾನ್ಯರ ಲೌಕಿಕ ಹಿತಾಸಕ್ತಿಗಳ ಪ್ರಶ್ನೆಗಳನ್ನೇ ಕೇಳಲಾಗದಂತಹ ಭಾವಾವೇಶದ ರಾಜಕೀಯ ವಾತಾವರಣವನ್ನು ಸೃಷ್ಟಿಸಲಾಗಿದೆ. ಇದ್ದಕ್ಕಿದ್ದಂತೆ ಈ ದೇಶದಲ್ಲಿ ಜನರಿಗೆ ಸಂಬಂಧಪಟ್ಟ ಎಲ್ಲ ಮುಖ್ಯಪ್ರಶ್ನೆಗಳನ್ನೂ ಕೊಚ್ಚಿಕೊಂಡು ಹೋಗುವಂತಹ ಅಗ್ಗದ ದೇಶಭಕ್ತಿಯ ಹುಚ್ಚುಹೊಳೆ ಹರಿದಿದೆ. ಗೋರಕ್ಷಣೆಯ ಹೆಸರಿನಲ್ಲಿ ನಡೆದಿರುವ ಹಿಂಸಾಚಾರ ಮತ್ತು ಅನಾಚಾರಗಳನ್ನು ನೋಡಿ. ಈ ಬಗ್ಗೆ ಹಿಂದುತ್ವದ ಸರದಾರರೆನಿಸಿದ ಪ್ರಧಾನಿ ಮೋದಿಯವರಿಗೇ ಆತಂಕವುಂಟಾಗಿ ಗೋರಕ್ಷಣೆ ಎಂಬುದು ಧಾರ್ಮಿಕ ಎಲ್ಲೆಗಳನ್ನು ಮೀರಿ ಹೋಗಿರುವ ಒಂದು ದೊಡ್ಡ ದಂಧೆಯಾಗಿದೆ ಎಂದು ಹೇಳಬೇಕಾಗಿ ಬಂದಿದೆ. ಹಾಗೆ ಅವರು ಆತಂಕಿತರಾಗಿ ಹೇಳಿದ್ದು, ಗೋರಕ್ಷಣೆಯ ಹೆಸರಿನಲ್ಲಿ ದಲಿತರ ಮೇಲೆ ದಾಳಿಗಳು ಶುರುವಾಗಿ ಬಿಜೆಪಿ ಮತ ಬ್ಯಾಂಕ್ ಅಲ್ಲಾಡತೊಡಗಿದೆ ಎನಿಸಿದಾಗಲೇ ಹೊರತು ಮುಸ್ಲಿಮರ ಮೇಲೆ ದಾಳಿ ನಡೆದಾಗ ಅಲ್ಲ ಎಂಬುದು ಬೇರೆ ಮಾತು! (ಹಾಗೆ ನೋಡಿದರೆ ಮೋದಿ ಸರ್ಕಾರದ ಅವಧಿಯಲ್ಲೇ ಭಾರತದ ಗೋಮಾಂಸದ ರಫ್ತು ಪ್ರಮಾಣ ದುಪ್ಪಟ್ಟಾಗಿದೆ ಎಂದು ಹೇಳಲಾಗುತ್ತದೆ.) ಇನ್ನು ಮಾಜಿ ಸಂಸದೆ ರಮ್ಯಾ ಪಾಕಿಸ್ಥಾನದ ತಮ್ಮ ಪ್ರವಾಸದ ಅನುಭವವನ್ನು ಹಂಚಿಕೊಳ್ಳುತ್ತಾ ಹೇಳಿದ ಮಾತನ್ನು ದೇಶದ್ರೋಹ ಎಂದು ಪ್ರತಿಬಿಂಬಿಸಿ ಹಬ್ಬಿಸುತ್ತಿರುವ ರಂಪ ಮತ್ತು 'ಅಮ್ನೆಸ್ಟಿ ಇಂಟರ್‌ನ್ಯಾಷನಲ್'ನ ಸಭೆಯೊಂದರಲ್ಲಿ ಭಾರತೀಯ ಸೇನೆಯ ವಿರುದ್ಧ ಘೋಷಣೆಗಳನ್ನು ಕೂಗಲಾಯಿತೆಂದು ಹೇಳಿ ಹರಡುತ್ತಿರುವ ಅಶಾಂತಿಯ ಹಿಂದೆ ಇರುವುದು ಖಂಡಿತ ದೇಶಭಕ್ತಿಯಲ್ಲ. ಬದಲಿಗೆ ದೇಶಭಕ್ತಿ ಎಂಬ ಭಾವನೆಯ ರಾಜಕೀಯ ದುರುಪಯೋಗ.

ಪಾಕಿಸ್ತಾನದ ಜನತೆ ರಮ್ಯಾಗೆ ಸ್ನೇಹ ತೋರಿ ಉಪಚರಿಸಿದ್ದರೆ ಅದನ್ನು ಹೇಳಿಕೊಳ್ಳಲು ಅವರಿಗೆ ಸ್ವಾತಂತ್ರ್ಯವಿಲ್ಲವೆ? ಹಾಗಾದರೆ ಪಾಕಿಸ್ತಾನದ ಪ್ರಧಾನಿಯ ಹುಟ್ಟುಹಬ್ಬಕ್ಕೆ ಹೋಗಿ ಶುಭಾಶಯ ಹೇಳಿಬಂದ ನಮ್ಮ ಪ್ರಧಾನಿ ಮೋದಿಯವರ ವರ್ತನೆಯನ್ನು ಇವರು ಏನೆಂದು ಕರೆಯುವರು? ಕಾಶ್ಮೀರದಲ್ಲಿ ಭಾರತದ ಸೇನೆ ದೌರ್ಜನ್ಯವೆಸಗಿದ್ದರೆ ಅಲ್ಲಿನ ಪ್ರಜೆಗಳು ಅದನ್ನು ಪ್ರತಿಭಟಿಸಬಾರದೆಂದ ಮೇಲೆ ಕಾಶ್ಮೀರವನ್ನು ನಾವು ಒಂದು ವಸಾಹತು ಎಂದೇ ಪರಿಗಣಿಸಿದ್ದೇವೆ ಎನ್ನಬೇಕಾಗುತ್ತದೆ. 'ಅಮ್ನೆಸ್ಟಿ ಇಂಟರ್‌ನ್ಯಾಷನಲ್' ಅಥವಾ ಅದು ನಡೆಸಿದ ಸಭೆ ಭಾರತದ ವಿರುದ್ಧ ಘೋಷಣೆ ಕೂಗಿ ಈ ದೇಶದ ವಿರುದ್ಧ ಪಿತೂರಿ ನಡೆಸಿದ ಸಾಕ್ಷಿ ಇದ್ದರೆ ಅದು ಬೇರೆ ಮಾತು. ನನಗನ್ನಿಸುವಂತೆ ಇದೆಲ್ಲವೂ ನಡೆದಿರುವುದು ಮೋದಿ ಸರ್ಕಾರದ ಯಾವುದೇ ಸಾಧನೆ ಇಲ್ಲದ ಈವರೆಗಿನ ನಿರಾಶಾದಾಯಕ ಆಡಳಿತ, ವಿಶೇಷವಾಗಿ ಕಾಶ್ಮೀರದಲ್ಲಿ ಅದು ತನ್ನ ರಾಜಕೀಯ ಘಾತುಕತನದಿಂದಾಗಿ ಮಾಡಿಕೊಂಡಿರುವ ಗಂಭೀರ ಎಡವಟ್ಟುಗಳನ್ನು ಮುಚ್ಚಿಕೊಳ್ಳಲು ನಡೆಸಿರುವ ಅಬ್ಬರದ ರಾಜಕಾರಣವಷ್ಟೆ.

ಹಾಗೆ ನೋಡಿದರೆ ಇದೆಲ್ಲದರಿಂದ ಒಂದು ರೀತಿಯಲ್ಲಿ ಒಳ್ಳೆಯದೇ ಆಗಿದೆ. ಕರ್ನಾಟಕದಲ್ಲಿ ಸಂಘ ಪರಿವಾರದ ಸಂಘಟನೆಗಳು ಇತ್ತೀಚೆಗೆ ಹಿಂದುತ್ವದ ರಾಜಕಾರಣದ ಹೆಸರಿನಲ್ಲಿ ಕೊಲೆ, ಅಪಹರಣ, ಹಫ್ತಾ ವಸೂಲಿ ಇತ್ಯಾದಿ ಆರೋಪಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡು ಜನರ ಮನಸ್ಸಿನಲ್ಲಿ ಅವುಗಳ ಬಿಂಬ ವಿರೂಪಗೊಳ್ಳುತ್ತಿರುವ ಪರಿಯನ್ನೇ ಗಮನಿಸಿ. ಹಿಂದುತ್ವದ ರಾಜಕಾರಣ ತನ್ನನ್ನು ತಾನೇ ತಿಂದುಕೊಳ್ಳುವ ಹಂತ ಮುಟ್ಟಿದಂತಿದೆ. ಆದರೆ ಇಂತಹ ಸಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿ ಸಿದ್ಧರಾಮಯ್ಯನವರಾದರೂ ಏನು ಮಾಡುತ್ತಿದ್ದಾರೆ? ಹಠ ತೊಟ್ಟಂತೆ ಕೆಪಿಎಸ್‌ಸಿಗೆ ಶ್ಯಾಂಭಟ್‌ರನ್ನೇ ನೇಮಿಸುವಲ್ಲಿ ಯಶಸ್ವಿಯಾಗಿದ್ದಾರೆ! ಅದರ ಮುಂದುವರಿಕೆಯಾಗಿ ಪ್ರೊಬೇಷನರಿ ಅಧಿಕಾರಿಗಳನ್ನು ಸಂದರ್ಶನಕ್ಕೆ ಕರೆಯುವ ಅನುಪಾತವನ್ನು ೧:೩ರಿಂದ ೧:೫ಕ್ಕೆ ಹೆಚ್ಚಿಸಲು ಹೊರಟಿದ್ದಾರೆ. ಇದು ಹಿಂದುಳಿದ ಮತ್ತು ದಲಿತ ಅಭ್ಯರ್ಥಿಗಳಿಗೆ ಅನುಕೂಲವಾಗುತ್ತದೆ ಎಂಬ ಬೂಸಿ ಬೇರೆ ಬಿಟ್ಟಿದ್ದಾರೆ. ಈ ವರ್ಗಗಳಿಗೆ ಮೀಸಲಾತಿ ಇಷ್ಟಿಷ್ಟೆಂದು ನಿಗದಿಯಾಗಿರುವಾಗ ಅನುಪಾತ ಹೆಚ್ಚಿಸುವುದರಿಂದ ಇವರಿಗೆ ಹೆಚ್ಚಿನ ಅನುಕೂಲವಾಗುವುದಾರೂ ಹೇಗೆ? ಒಟ್ಟಿನಲ್ಲಿ ಸಿದ್ಧರಾಮಯ್ಯನವರು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಕರ್ನಾಟಕದ ಸಮಾಜವನ್ನೇ ಹಿಂದೆಂದೂ ಇಲ್ಲದಷ್ಟು ಅಪಾಯಕಾರಿಯಾಗಿ ಜಾತಿವಾರು ಒಡೆದಿಟ್ಟಿದ್ದಾರೆ. ಇದು ಸಾಲದೆಂಬಂತೆ ಪ್ರಗತಿಪರ ಚಿಂತಕರೆಂಬ ಸೋಗಿನಲ್ಲಿ ಇವರ ಕೆಲ ಚೇಲಾಗಳು 'ಯುವ ಅಹಿಂದ'ವೆಂಬ ಹೊಸ ಸಂಘಟನೆ ಕಟ್ಟಲು ಹೊರಟಿದ್ದಾರೆ. ಇವರಿಗೆ ಕೋಮುವಾದಿ ರಾಜಕಾರಣಕ್ಕೆ ಭ್ರಷ್ಟ ಕಾಂಗ್ರೆಸ್‌ವೊಂದೇ ಪರ್ಯಾಯದಂತೆ ಕಾಣುತ್ತಿರುವುದು, ತಮ್ಮ ನಾಯಕ ಸಿದ್ಧರಾಮಯ್ಯನವರಂತೆಯೇ ಇವರು ಮುಟ್ಟಿರುವ ರಾಜಕೀಯ ಅಧೋಗತಿಯ ದ್ಯೋತಕವಾಗಿದೆ

ಇದು ಪತ್ರಿಕೆಯ ಸದ್ಯಕ್ಕಾದರೂ ಕೊನೆಯ ಸಂಚಿಕೆ. ಈ ಸಂದರ್ಭದಲ್ಲಿ ಪತ್ರಿಕೆ ಈ ಐದು ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ಐದು ವಿಶೇಷ ಸಂಚಿಕೆಗಳೂ ಸೇರಿದಂತೆ ಒಟ್ಟು ೬೨ ಮೌಲಿಕ ಸಂಚಿಕೆಗಳನ್ನು ನೀಡಿದೆ ಎಂದು ಹೇಳಲು ಹೆಮ್ಮೆಯೆನಿಸುತ್ತದೆ. ಇದರ ಬಹುಪಾಲು ಕೀರ್ತಿ ನಾನು ಪ್ರತಿ ಸಂಚಿಕೆಯ ನನ್ನ ಯೋಜನೆಯಂತೆ ಕೋರಿದಾಗಲೆಲ್ಲ ಲೇಖನಗಳನ್ನು ಬರೆದು ಅಥವಾ ಅನುವಾದಿಸಿ ಕೊಟ್ಟ ಗೆಳೆಯರಿಗೆ ಮತ್ತು ಅವನ್ನು ಮೆಚ್ಚಿ ಪ್ರತಿಕ್ರಿಯಿಸಿದ ಪ್ರಜ್ಞಾವಂತ ಓದುಗರಿಗೆ ಸಲ್ಲುತ್ತದೆ. ನಿರ್ದಿಷ್ಟವಾಗಿ, ನಾನು ಕೋರಿದಾಗಲೆಲ್ಲ ಲೇಖನಗಳನ್ನು ಬಹು ಅಚ್ಚುಕಟ್ಟಾಗಿ ಕನ್ನಡಕ್ಕೆ ಅನುವಾದಿಸಿಕೊಟ್ಟ ಎಂ ರಾಜು ಮತ್ತು ಟಿ.ಎಲ್ ರೇಖಾಂಬ (ಪ್ರತಿ ಸಂಚಿಕೆಯ ಕರಡು ತಿದ್ದಿದವರು ಇವರೇ) ಅವರಿಗೆ ನನ್ನ ವಿಶೇಷ ನೆನಕೆಗಳನ್ನು ಹೇಳಲೇಬೇಕು. ಪತ್ರಿಕೆಗೆ ಚಂದಾದಾರರ ಭದ್ರ ಬುನಾದಿ ಹಾಕಿಕೊಟ್ಟಿದ್ದ ಗೆಳೆಯರಾದ ಜಿ.ಬಿ.ಶಿವರಾಜು, ಬಿ.ವಿ.ಸುರೇಂದ್ರ, ಅಪೂರ್ವ ಡಿ'ಸಿಲ್ವ, ಬಿ.ಶಿವಕುಮಾರ್, ಅಜ್ಜಪ್ಪ ಬಿರಡಿ, ಹಸನ್ ನಯೀಂ ಸುರಕೋಡ, ಡಿ.ಜಿ. ಪುಟ್ಟರಾಜು, ಎನ್.ಎಂ. ಕುಲಕರ್ಣಿ, ಕೆ.ಪಿ. ನಟರಾಜ್ ಮುಂತಾದ ಗೆಳೆಯರನ್ನೂ ಇಲ್ಲಿ ಸ್ಮರಿಸಬಯಸುತ್ತೇನೆ. ಹಾಗೇ ಪತ್ರಿಕೆ ಸುಮಾರು ಸಾವಿರ ಚಂದಾದಾರರಿಗೆ ಪ್ರತಿ ತಿಂಗಳೂ ಸಕಾಲದಲ್ಲಿ ಅಂಚೆಗೆ ಹೋಗುವಲ್ಲಿ ನನಗೆ ನೆರವಾದ ಗೆಳೆಯರಾದ ನಿಸಾರ್ ಅಹಮದ್, ಎಂ. ರಾಜು, ಶೇಖರ್ ಗೌಳೇರ್, ಟಿ.ಎಲ್ ರೇಖಾಂಬ ಮತ್ತು ಸವಿತಾ ನಾಗಭೂಷಣ ಅವರನ್ನೂ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಪತ್ರಿಕೆಯನ್ನು ನನ್ನ ಗಡಿಬಿಡಿಗಳ ನಡುವೆಯೂ ಅಂದವಾಗಿ ಮುದ್ರಿಸಿಕೊಟ್ಟ ಬೆಂಗಳೂರಿನ ಇಳಾ ಮುದ್ರಣಾಲಯ ಮತ್ತು ರಿಪ್ಲಿಕಾ ಆಫ್‌ಸೆಟ್ ಪ್ರಿಂಟರ್ಸ್‌ನ ಮಾಲಿಕ-ಸಿಬ್ಬಂದಿಯವರನ್ನೂ ಇಲ್ಲಿ ನೆನೆಯಬಯಸುತ್ತೇನೆ.

ಇನ್ನು ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಎರಡು ಲೇಖನ ಮಾಲೆಗಳ ಬಗ್ಗೆ ಎರಡು ಮಾತು. 'ನಮ್ಮ ಸಮಾಜವಾದಿಗಳು' ಶೀರ್ಷಿಕೆಯಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಅರವತ್ತಕ್ಕೂ ಹೆಚ್ಚು ಸಮಾಜವಾದಿ ನಾಯಕರನ್ನು ಪರಿಚಯಿಸಲಾಗಿದೆ. ಇನ್ನೂ ಹತ್ತಾರು ಇಂತಹ ವ್ಯಕ್ತಿತ್ವಗಳ ಪರಿಚಯ ಮಾಡಿಕೊಡಬೇಕಾಗಿದ್ದಾಗಲೇ ಪತ್ರಿಕೆ ನಿಲ್ಲುತ್ತಿರುವ ಬಗ್ಗೆ ನನಗೆ ವಿಷಾದವಿದೆ. ಮತ್ತಾರಾದರೂ ಬೇರೆ ವೇದಿಕೆಗಳಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಿಯಾರು ಎಂದು ನಂಬಿದ್ದೇನೆ

ಇನ್ನು 'ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ' ಈ ಸಂಚಿಕೆಯೊಂದಿಗೆ ಅವಸರಸರದಲ್ಲಾದರೂ ಪೂರ್ಣಗೊಂಡಿದೆ. ೪೭ ದೀರ್ಘ ಕಂತುಗಳಲ್ಲಿ ತಮ್ಮ ಪತಿ ಕೃಷ್ಣಪ್ಪನವರ ಹೋರಾಟದ ಬದುಕನ್ನು ತಾವು ಕಂಡಂತೆ ಕಟ್ಟಿಕೊಟ್ಟ ಶ್ರೀಮತಿ ಇಂದಿರಾ ಕೃಷ್ಣಪ್ಪನವರನ್ನು ಇಲ್ಲಿ ಅಭಿನಂದಿಸಬಯಸುತ್ತೇನೆ. ಕೃಷ್ಣಪ್ಪನವರ ಕುಟುಂಬದ ಆಪ್ತ ಗೆಳೆಯನೇ ಆಗಿದ್ದುಕೊಂಡು ಕೃಷ್ಣಪ್ಪನವರ ಹೋರಾಟದ ಬದ್ಧತೆ ಮತ್ತು ಸಂಘಟನಾ ಶಕ್ತಿಯನ್ನು ಹತ್ತಿರದಿಂದ ನೋಡಿದ್ದ ನನಗೆ ಈ ಪತ್ರಿಕೆಯಲ್ಲಿ ಈ ಲೇಖನ ಮಾಲೆಯನ್ನು ಪ್ರಕಟಿಸುವುದು ನನ್ನ ಧರ್ಮವೇ ಆಗಿತ್ತು.



ನಿಜ, ಕೃಷ್ಣಪ್ಪನವರ ಚಿಂತನೆ ಮತ್ತು ಸಂಘಟನೆಯ ರೀತಿ ನೀತಿಗಳ ಬಗ್ಗೆ ನನ್ನ ಕೆಲವು ಭಿನ್ನಾಭಿಪ್ರಾಯಗಳಿದ್ದವು. ಅಲ್ಲಿ ಅನೇಕ ವೈರುಧ್ಯಗಳನ್ನೂ ಗಮನಿಸಿದ್ದ ನಾನು ಆ ಬಗ್ಗೆ ಅವರೊಂದಿಗೆ ಹಲವು ಬಾರಿ ಜಗಳ ಕೂಡ ಆಡಿದ್ದೆ; ಅವರು ಬಿಎಸ್‌ಪಿ ಸೇರಿದಾಗ ಸ್ವಲ್ಪ ಕಾಲ ದೂರವೂ ಆಗಿದ್ದೆ. ಆದರೆ ಇವಾವುವೂ ನಮ್ಮ ನಡುವಣ ಪರಸ್ಪರ ಗೌರವ ಮತ್ತು ವೈಯಕ್ತಿಕ ಗೆಳೆತನಕ್ಕೆ ಅಡ್ಡಿ ಬರಲಿಲ್ಲ. ಇದಕ್ಕೆ ಪೂರಕ ಪಾತ್ರ ವಹಿಸಿದವರು, ಅವರಷ್ಟೇ ನನಗೆ ಮತ್ತು ನನ್ನ ಪತ್ನಿಗೆ ಆಪ್ತರಾಗಿದ್ದ ಅವರ ಪತ್ನಿ ಇಂದಿರಾ ಮತ್ತು ಮಕ್ಕಳಾದ ಶಾಲು ಮತ್ತು ಸೀಮಾ. ಇಂದಿರಾ ಅವರಂತೂ ಕೃಷ್ಣಪ್ಪನವರ ಬಾಳನ್ನು ಬೆಳಗಿದರಲ್ಲದೆ ಅವರ ಹೋರಾಟದ ಬದುಕಿನ ಸಕಲ ದಾಖಲೆಗಳನ್ನೂ ಜತನದಿಂದ ಕಾಪಿಟ್ಟುಕೊಂಡು ಬಂದು ಈ ಲೇಖನ ಮಾಲೆಗೊಂದು ಅಧಿಕೃತತೆ ಒದಗಿಸಿದ್ದಾರೆ. ಅವರ ಬರಹ ತನ್ನ ಪತಿಯ ಬಗೆಗಿನ ಪ್ರೀತಿ-ಅಭಿಮಾನಗಳನ್ನೂ ಮೀರಿ ಇನ್ನಷ್ಟು ವಸ್ತುನಿಷ್ಠ ಮತ್ತು ವಿಮರ್ಶಾತ್ಮಕವಾಗಿದ್ದರೆ ಚೆನ್ನಿತ್ತು ಅನಿಸಿದರೂ, ಸದ್ಯಕ್ಕೆ ಇಷ್ಟಾದರೂ ದಾಖಲಾಯಿತಲ್ಲಾ ಎಂಬ ಸಮಾಧಾನ ನನ್ನದು. ಇಂದಿರಾ ಅವರಿಗೆ ಮತ್ತೊಮ್ಮೆ ಧನ್ಯವಾದಗಳು.

ಕೊನೆಯ ಮಾತುಗಳು: ವಿಶೇಷಾಂಕದ ಜಾಹೀರಾತುಗಳಿಂದ ಬಂದಿರುವ ಮತ್ತು ಬರಬೇಕಿರುವ ಆದಾಯದ ಬಹುಪಾಲನ್ನು-ಸುಮಾರು ನಲವತ್ತು ಸಾವಿರ ರೂ.ಗಳನ್ನು- ವಿಶೇಷಾಂಕದ ಲೇಖಕರಿಗೆ ಸಂಭಾವನೆಯಾಗಿ ನೀಡಿದ್ದೇವೆ. ಹೆಚ್ಚುವರಿ ಚಂದಾ ಹಣ ನೀಡಿರುವ ಒಂದೆರಡು ಸಂಸ್ಥೆಗಳು ಮತ್ತು ಮೂರ್ನಾಲ್ಕು ಜನ ವ್ಯಕ್ತಿಗಳಿಗೆ ಆ ಹಣವನ್ನು ವಾಪಸು ಮಾಡಲಾಗುತ್ತಿದೆ. ಮುದ್ರಣ ವೆಚ್ಚ ತೀರಿದ ನಂತರ ಉಳಿಯಬಹುದಾದ ಹಣವನ್ನು ನಮ್ಮದೇ ಆದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನಕ್ಕೆ ನೀಡಲಾಗುವುದು. ಅಂದಹಾಗೆ ನಮ್ಮ ಈ ಪ್ರತಿಷ್ಠಾನದ ಈ ವರ್ಷದ ಸಮಾಜವಾದಿ ಅಧ್ಯಯನ ಶಿಬಿರ 'ಪರ್ಯಾಯ ಅಭಿವೃದ್ಧಿ ಮತ್ತು ರಾಜಕೀಯ ಮಾದರಿ'ಗಳನ್ನು ಕುರಿತಾಗಿದ್ದು ಅದು ಬರುವ ಅಕ್ಟೋಬರ್ ೧೫ ಹಾಗೂ ೧೬ರಂದು ಕುಪ್ಪಳ್ಳಿಯಲ್ಲಿ ನಡೆಯವುದು. ಆಸಕ್ತರು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳು:**9448238638, 9535651553** ಮತ್ತು **9480141984**

ಸಾಧ್ಯವಾದಾಗ ಮತ್ತೆ ಮುಖಾಮುಖಿಯಾಗೋಣ ನಮಸ್ಕಾರ.

**-ಸಂಪಾದಕ**

## ಮೈಸೂರಿನಲ್ಲಿ 'ಹೊಸ ಮನುಷ್ಯ ವಿಶೇಷಾಂಕ-೨೦೧೬ ಬಿಡುಗಡೆ ಸಮಾರಂಭ : ಒಂದು ವರದಿ




**ಆ**ಧುನಿಕತೆಯ ಹಪಾಹಪಿಯಿಂದ ಮನುಷ್ಯನನ್ನು ಮುಕ್ತಗೊಳಿಸಿ ಅವನನ್ನು ಹೊಸ ಮನುಷ್ಯನನ್ನಾಗಿ ರೂಪಿಸುವುದೇ ಸಮಾಜವಾದದ ಗುರಿಯಾಗಿದೆ ಎಂದು ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ನ್ಯಾ. ಎ.ಜೆ. ಸದಾಶಿವ ಹೇಳಿದರು. ಅವರು ಕಳೆದ ಆಗಸ್ಟ್ ಏಳರಂದು ಮೈಸೂರಿನ ರಂಗಾಯಣದ 'ಶ್ರೀರಂಗ' ವೇದಿಕೆಯಲ್ಲಿ ಸಮಾಜವಾದಿ ಅಧ್ಯಯನ ಕೇಂದ್ರ ಟ್ರಸ್ಟ್ ಆಯೋಜಿಸಿದ್ದ 'ಹೊಸ ಮನುಷ್ಯ' ಸಮಾಜವಾದಿ ಮಾಸಿಕದ ೨೦೧೬ರ ವಾರ್ಷಿಕ ವಿಶೇಷಾಂಕವನ್ನು ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

ವಿಶೇಷಾಂಕದಲ್ಲಿ ಮುಖ್ಯವಾಗಿ ಚರ್ಚೆಯಾಗಿರುವ ಗಾಂಧಿ-ಅಂಬೇಡ್ಕರ್ ನಡುವಣ ವಾಗ್ವಾದಗಳನ್ನು ಪ್ರಸ್ತಾಪಿಸಿದ ನ್ಯಾ, ಸದಾಶಿವ ಅವರು ದಲಿತರ ಮೇಲೆ ದೌರ್ಜನ್ಯ ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ಗಾಂಧಿ-ಅಂಬೇಡ್ಕರ್ ನಡುವೆ ವಿಚಾರ ಸಮನ್ವಯದ ಪ್ರಯತ್ನ ಆಗಬೇಕಿದೆ ಎಂದು ಅಭಿಪ್ರಾಯಪಟ್ಟರು

ರಾಜ್ಯ ಸಂಪನ್ಮೂಲ ಕೇಂದ್ರದ ನಿರ್ದೇಶಕ ಎಸ್.ತುಕಾರಾಂ ಅವರು ವಿಶೇಷಾಂಕದ ಬಗ್ಗೆ ಮಾತನಾಡಿ, ವಿಚಿತ್ರ ಮೀಟುವಿಕೆಯ ಅನುಭವವನ್ನು ಪತ್ರಿಕೆ ನೀಡುತ್ತದೆ ಎಂದರು. ಪತ್ರಿಕೆಯನ್ನು ಓದುತ್ತಿದ್ದಂತೆ ಗಾಂಧಿ-ಅಂಬೇಡ್ಕರ್ ಮಾತ್ರವಲ್ಲದೆ ನಮ್ಮ ಕಾಲದ ಚಿಂತಕರೂ, ಹೋರಾಟಗಾರರೂ ಆಗಿದ್ದ ಪೂರ್ಣಚಂದ್ರ ತೇಜಸ್ವಿ, ಯು.ಆರ್.ಅನಂತಮೂರ್ತಿ, ರಾಮದಾಸ್‌ರ ನೆನಪುಗಳು ಬಿಚ್ಚಿಕೊಳ್ಳುತ್ತವಲ್ಲದೆ ನಮ್ಮ ಕಾಲದ ಬಹುದೊಡ್ಡ ಹೋರಾಟಗಳಾದ ಸಮಾಜವಾದಿ, ದಲಿತ ಮತ್ತು ರೈತ ಚಳುವಳಿಗಳ ಚಿತ್ರಗಳು ನಮ್ಮ ಕಣ್ಮುಂದೆ ಹಾದುಹೋಗುತ್ತವೆ ಎಂದು ನುಡಿದರು. ಗುಣಕ್ಕೆ ಮುಖಮಾಡಿ ನಡೆಯುವಂತೆ ಮಾಡುವ ಲೇಖನಗಳು ಕಡಿಮೆಯಾಗುತ್ತಿರುವ, ಮನುಷ್ಯರ ಭಾವ ಪ್ರಪಂಚಕ್ಕೆ ಕೊಳ್ಳಿ ಇಡುವಂತಹ ಕೆಲಸಗಳು ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿರುವ ಇಂದಿನ ಸಂದರ್ಭದಲ್ಲಿ ಇಂತಹ ಪತ್ರಿಕೆಗಳನ್ನು ಉಳಿಸಿಕೊಳ್ಳಬೇಕಾದ, ಬೆಳೆಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದೂ ಅವರು ಅಭಿಪ್ರಾಯಪಟ್ಟರು.

ಹಿರಿಯ ಸಮಾಜವಾದಿ ಪ್ರೊ.ಬಿ.ಎನ್.ಶ್ರೀರಾಮ್ ಅಧ್ಯಕ್ಷತೆ ವಹಿಸಿದ್ದರು. 'ಹೊಸ ಮನುಷ್ಯ' ಪತ್ರಿಕೆಯ ಸಂಪಾದಕರಾದ ಡಿ.ಎಸ್.ನಾಗಭೂಷಣ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ರವಿಚಂದ್ರ ಚಿಕ್ಕೆಂಪಿಹುಂಡಿ ಕಾರ್ಯಕ್ರಮ ನಿರೂಪಿಸಿದರು.

(ವರದಿ: **ಬಿ.ರಾಜೇಶ್**)

# ನಮ್ಮ ಸಮಾಜವಾದಿಗಳು: ಸಜ್ಜನ ಹೋರಾಟಗಾರ ಕಿಷನ್ ಪಟ್ನಾಯಕ್



ಭಾರತದ ಸಮಾಜವಾದಿ ಚಳುವಳಿಯಲ್ಲಿ ಲೋಹಿಯಾ ನಿಧನಾನಂತರ ಚಿಂತನೆ ಮತ್ತು ಹೋರಾಟಗಳ ಒಂಟಿ ಪಯಣ ನಡೆಸಿ, ಪ್ರಧಾನ ಲಹರಿ ರಾಜಕೀಯ ಪಕ್ಷಗಳ ಮತ್ತು ಮಾಧ್ಯಮಗಳ ದೃಷ್ಟಿಗೇ ಬೀಳದೆ ಅಜ್ಞಾತರಂತೆ ಸಾವನ್ನಪ್ಪಿದ ಸಮಾಜವಾದಿ ನಾಯಕ ಕಿಷನ್ ಪಟ್ನಾಯಕ್, ಬಹುಶಃ ಲೋಹಿಯಾ ನಂತರ ಸಮಾಜವಾದಿಗಳಲ್ಲೇ ಅತ್ಯಂತ ಸೃಜನಶೀಲ ಮನಸ್ಸಿನ ಪ್ರತಿಭಾವಂತರಾಗಿದ್ದರು. ಕರ್ನಾಟಕದ ಯುವ ಸಮಾಜವಾದಿಗಳಿಗೆ ಮತ್ತು ದಲಿತ ಹಾಗೂ ರೈತ ಚಳುವಳಿಯ ನಾಯಕರು ಮತ್ತು ಕಾರ್ಯಕರ್ತರಿಗೆ ಹಿರಿಯ ಮಾರ್ಗದರ್ಶಿಯಾಗಿದ್ದ, 'ಕಿಷನ್‌ಜಿ' ಎಂದೇ ಎಲ್ಲರಿಂದ ಪ್ರೀತಿಪೂರ್ವಕ ಗೌರವಗಳೊಂದಿಗೆ ಕರೆಯಲ್ಪಡುತ್ತಿದ್ದ ಈ ನಾಯಕ ಕರ್ನಾಟಕದಲ್ಲಿ ಮಾತ್ರವಲ್ಲ, ಕಳೆದ ಐವತ್ತು ವರ್ಷಗಳಲ್ಲಿ ರಾಷ್ಟ್ರಾದ್ಯಂತ ವಿವಿಧ ರಾಜ್ಯಗಳಲ್ಲಿ ಸಾವಿರಾರು ಪಕ್ಷೇತರ ಯುವ ಸಮಾಜವಾದಿ ಕಾರ್ಯಕರ್ತರನ್ನು ಬೆಳೆಸಿ ಹೋಗಿದ್ದಾರೆ.

೧೯೩೦ರ ಜೂನ್ ೩೦ರಂದು ಒರಿಸ್ಸಾದ ಕಾಳಹಂಡಿ ಜಿಲ್ಲೆಯ ಭವಾನಿಪಟ್ನದಲ್ಲಿ ಪ್ರಾಥಮಿಕ ಶಾಲಾ ಮಾಸ್ತರರ ಮಗನಾಗಿ ಜನಿಸಿದ ಕಿಷನ್ ತಮ್ಮೂರಿನ ಶಾಲೆಯಲ್ಲೇ ಶಾಲಾಶಿಕ್ಷಣ ಮುಗಿಸಿ ಬೊಲಾಂಗಿರ್‌ನ ರಾಜೇಂದ್ರ ಕಾಲೇಜಿಗೆ ಸೇರಿದರು. ನಂತರ ತಮ್ಮ ತಾಯಿಯ ತಮ್ಮನ ನೆರವಿನೊಂದಿಗೆ ನಾಗಪುರಕ್ಕೆ ತೆರಳಿ ಅಲ್ಲಿನ ವಿಶ್ವವಿದ್ಯಾಲಯದಿಂದ ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಪಡೆದು ೧೯೫೧ರಲ್ಲಿ ಬೊಳಾಂಗಿರ್‌ಗೆ ಹಿಂದಿರುಗಿ ಸ್ವಲ್ಪ ಕಾಲ ಪ್ರೌಢಶಾಲಾ ಶಿಕ್ಷಕರಾಗಿ ಕೆಲಸ ಮಾಡಿದರು.

ಆದರೆ ಹುಟ್ಟು ಬಂಡಾಯ ಪ್ರವೃತ್ತಿಯವರಾದ ಕಿಷನ್ ತಮ್ಮ ಹುಟ್ಟು ಪ್ರದೇಶವಾದ ಕಾಳಹಂಡಿಯಲ್ಲಿ ಜನ ಹಸಿವಿನಿಂದ ಸಾಯುವ ದೃಶ್ಯಗಳನ್ನು ಕಂಡು ತಲ್ಲಣಿಸಿ ಆದಿವಾಸಿ ಜನರ ಶೋಷಣೆಯ ವಿರುದ್ಧ ಜನಸಂಘಟನೆಗೆ ತೊಡಗಿ ಬಹುಬೇಗ ಹೋರಾಟಗಾರನೆಂದು ಪ್ರಸಿದ್ಧಿ ಪಡೆದರು. ಈ ಸಂದರ್ಭದಲ್ಲಿ ಆಗಿನ ಒರಿಸ್ಸಾ ಕಾಂಗ್ರೆಸ್ಸಿನ ಅಧಿಪತಿಯಂತಿದ್ದ ಮುಖ್ಯಮಂತ್ರಿ ಬಿಜು ಪಟ್ನಾಯಕ್ ಅವರೊಂದಿಗೆ ನೇರ ಸಂಘರ್ಷಕ್ಕಿಳಿದು, ಅವರು ತೊಂದರೆಗೊಳಪಟ್ಟು ಆಗಿನ ಮದ್ರಾಸ್ ಪಟ್ಟಣ ಸೇರಿ ಸಣ್ಣಪುಟ್ಟ ಉದ್ಯೋಗ ಮಾಡಿಕೊಂಡಿದ್ದರು. ಆಗ ಅಲ್ಲಿ ತಮ್ಮ ಊರಿನ ಕೆಚ್ಚಿನ ಹೋರಾಟದ ಯುವಕ ಕಿಷನ್‌ರನ್ನು ಕಂಡ ಒರಿಸ್ಸಾ ಸಮಾಜವಾದಿ ಪಕ್ಷದ ನಾಯಕ ಸುರೇಂದ್ರ ದ್ವಿವೇದಿ ೧೯೫೫ರಲ್ಲಿ ಅವರನ್ನು ಹೈದರಾಬಾದ್‌ಗೆ ಒಯ್ದು ತಮ್ಮ ನಾಯಕ ರಾಮಮನೋಹರ ಲೋಹಿಯಾಗೆ ಪರಿಚಯ ಮಾಡಿಕೊಟ್ಟರು. ಅಲ್ಲಿಂದ ಆರಂಭವಾದ ಲೋಹಿಯಾ-ಕಿಷನ್‌ರ ಗುರು-ಶಿಷ್ಯ ಬಾಂಧವ್ಯ ೧೯೬೭ರಲ್ಲಿನ ಲೋಹಿಯಾರ ಸಾವಿನವರೆಗೂ ಅವಿಚ್ಛಿನ್ನವಾಗಿ ಮುಂದುವರೆಯಿತು.

ಹೈದರಾಬಾದ್‌ನಲ್ಲಿ ಲೋಹಿಯಾರ ಸಮಾಜವಾದಿ ಪಕ್ಷದ ಮುಖ್ಯ ಕಛೇರಿಯನ್ನೇ ತಮ್ಮ ನೆಲೆಯನ್ನಾಗಿ ಮಾಡಿಕೊಂಡ ಕಿಷನ್ ಬಹುಬೇಗ ತಮ್ಮ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ರಾಜಕೀಯ ಬೆಳವಣಿಗೆಗಳ ತಿಳುವಳಿಕೆಯ ಮೂಲಕ ಲೋಹಿಯಾರ ಗಮನ ಸೆಳೆದ ಪರಿಣಾಮವಾಗಿ ಪಕ್ಷದ ಮುಖವಾಣಿಯಾಗಿ ಆರಂಭಿಸಿದ್ದ 'ಮ್ಯಾನ್‌ಕೈಂಡ್' ಎಂಬ ಅಂತಾರಾಷ್ಟ್ರೀಯ ಪತ್ರಿಕೆಯ ಸಂಪಾದಕ ಬಳಗ ಸೇರಿದರು. ಜೊತೆಗೆ ಲೋಹಿಯಾರ ಪ್ರವಾಸ-ಪತ್ರ-ವ್ಯವಹಾರಗಳ ಉಸ್ತುವಾರಿಯನ್ನು ವಹಿಸಿಕೊಂಡರು. ೧೯೬೦ರ ದಶಕದಲ್ಲಿ ಮತ್ತೆ ಒರಿಸ್ಸಾಗೆ ಹೋಗಿ ಜನಸಂಘಟನೆಯಲ್ಲಿ ತೊಡಗಿಕೊಂಡ ಅವರು ಲೋಹಿಯಾರ ಪ್ರೇರಣೆ ಮೇರೆಗೆ ೧೯೬೨ರ ಸಾರ್ವತ್ರಿಕ ಚುನಾವಣೆಗಳಲ್ಲಿ ಸಂಭಲ್‌ಪುರ ಲೋಕಸಭಾ ಕ್ಷೇತ್ರದಿಂದ ಪ್ರಜಾ ಸೋಷಲಿಸ್ಟ್ ಪಕ್ಷದ ಅಭ್ಯರ್ಥಿಯಾಗಿ ನಿಂತು ಗೆದ್ದೂಬಿಟ್ಟರು! ಆಗ ಕಿಷನ್ ಮೂರನೇ ಲೋಕಸಭೆಗೆ ಆಯ್ಕೆಯಾದ ಅತ್ಯಂತ ಕಿರಿಯ ವಯಸ್ಸಿನ ಸಂಸದರಾಗಿದ್ದರು.

ಆ ಚುನಾವಣೆಗಳಲ್ಲಿ ತಮ್ಮ ಗುರು ಲೋಹಿಯಾ ಸೋತಿದ್ದರೂ, ಅವರ ನಾಯಕತ್ವದ ಸ್ಫೂರ್ತಿಯಲ್ಲಿ ಕಿಷನ್ ಲೋಕಸಭೆಯಲ್ಲಿ ಜನಪರ ಚರ್ಚೆಗಳನ್ನು ಎತ್ತಿದರು. ಪ್ರಧಾನಿ ನೆಹರೂರಂತಹ ನೆಹರೂರನ್ನೇ ಎದುರು ಹಾಕಿಕೊಂಡು ಅವರ ಗಮನ ಸೆಳೆದರು. ಲೋಹಿಯಾ ಎತ್ತಿದ ಭಾರತೀಯ ಪ್ರಜೆಯ ದಿನಕ್ಕೆರಡು ಆಣೆಗಳ ನಿಕೃಷ್ಟ ಸರಾಸರಿ ಆದಾಯ ಮತ್ತು ಅದಕ್ಕೆದುರಾಗಿ ನೆಹ್ರೂ ಅವರ ದುಬಾರಿ ಜೀವನ ಶೈಲಿ ಮತ್ತು ವೆಚ್ಚದ ಪ್ರಶ್ನೆಗಳನ್ನು ಲೋಕಸಭೆಯಲ್ಲಿ ಚರ್ಚೆಗೆ ತಂದವರೂ ಕಿಷನ್ ಪಟ್ನಾಯಕ್‌ರೇ. ಹೀಗೆ ಲೋಕಸಭೆಯಲ್ಲಿ ಅತ್ಯಂತ ದಿಟ್ಟ ಮತ್ತು ಚುರುಕಿನ ಮಾತುಗಾರಿಕೆಯ ಸದಸ್ಯರಾಗಿ ರಾಷ್ಟ್ರದ ಗಮನ ಸೆಳೆದಿದ್ದ ಕಿಷನ್ ಪಟ್ನಾಯಕ್ ೧೯೬೭ರ ಚುನಾವಣೆಗಳಲ್ಲಿ ಅದೇ ಕ್ಷೇತ್ರದಿಂದ ನಿಂತು ಸೋತದ್ದು ಮಾತ್ರ ವಿಪರ್ಯಾಸ. ಇದಕ್ಕೆ ಭಾರತದ ರಾಜಕಾರಣದ ವಿಚಿತ್ರ ಒಳಸುಳಿಗಳು ಎಷ್ಟು ಕಾರಣವೋ ಅಷ್ಟೇ ಕಾರಣ, ಆ ಚುನಾವಣೆಗಳಲ್ಲಿ ಲೋಹಿಯಾ ಆ ಕ್ಷೇತ್ರದಲ್ಲಿ ಗಣನೀಯ ಮುಸ್ಲಿಂ ಮತದಾರರಿದ್ದುದನ್ನು ಗಮನಿಸಿಯೂ ಸಮಾನ ನಾಗರಿಕ ಸಂಹಿತೆಯ ಪರವಾಗಿ ಪ್ರಚಾರ ಮಾಡಿದ್ದೂ ಒಂದು ಕಾರಣ ಎಂದು ಕಿಷನ್ ಹೇಳುತ್ತಾರೆ. ಆ ಬಗ್ಗೆ ಅವರಿಗೆ ವಿಷಾದವೇನೂ ಇಲ್ಲ ಎಂಬುದು ಬೇರೆ ಮಾತು.

ಅಲ್ಲಿಂದಾಚೆಗೆ ಬಹುಕಾಲ ಚುನಾವಣೆಗಳ ಗೋಜಿಗೆ ಹೋಗದ ಕಿಷನ್ ಸಮಾಜವಾದಿ ತಾತ್ವಿಕ ಚಿಂತನೆಯಲ್ಲಿ ಹೆಚ್ಚು ತೊಡಗಿಕೊಂಡರು. 'ಮ್ಯಾನ್‌ಕೈಂಡ್'ಗೆ ಹಲವು ಲೇಖನಗಳನ್ನು ಬರೆದರು. ಈ ಮಧ್ಯೆ ೧೯೬೭ರಲ್ಲಿ ತಮ್ಮ ನಾಯಕ ಲೋಹಿಯಾ ಅಕಾಲಿಕ ಮರಣಕ್ಕೆ ತುತ್ತಾದ ನಂತರ ಅನಾಥರಂತಾದ ಅವರು ಪಕ್ಷದ ತಮ್ಮ ಮಿತ್ರರು ವಿವಿಧ ಸಮಾಜವಾದಿ ಗುಂಪುಗಳಾಗಿ ಹರಿದುಹಂಚಿಹೋದುದನ್ನು ವಿಷಾದದಿಂದ ಗಮನಿಸಿ, ಲೋಹಿಯಾ ವಿಚಾರಗಳ ಬೆಳವಣಿಗೆಗಾಗಿ ತಮ್ಮ ಮಿತ್ರ ಹೈದರಾಬಾದ್‌ನ ಪ್ರೊ. ಕೇಶವರಾವ್ ಜಾಧವ್ ಅವರೊಂದಿಗೆ ಸೇರಿ ಪಕ್ಷಾತೀತವಾದ 'ಲೋಹಿಯಾ ವಿಚಾರ ಮಂಚ್'ನ್ನು ಸ್ಥಾಪಿಸಿದರು. ಅದರ ಅಡಿಯಲ್ಲಿ ಸಮಾವೇಶಗಳಿಗೆ ಯುವಜನರನ್ನು ಆಕರ್ಷಿಸುತ್ತಾ ಸಮಾಜವಾದಿ ತಾತ್ವಿಕತೆಯ ಹೊಸ ಚರ್ಚೆಗಳನ್ನು ಹುಟ್ಟು ಹಾಕಿದರು. ಜಾತಿ, ಭಾಷೆ, ಅಭಿವೃದ್ಧಿ ಮಾದರಿ ಮತ್ತು ವಿಕೇಂದ್ರೀಕರಣಗಳನ್ನು ಕುರಿತಂತೆ ಲೋಹಿಯಾ ವಿಚಾರಗಳ ಹೊಸ ಮಂಥನಕ್ಕೆ ಅವರು ನಾಂದಿ ಹಾಡಿದರು.

ಎಪ್ಪತ್ತರ ದಶಕದ ಮಧ್ಯಭಾಗದ ಹೊತ್ತಿಗೆ ವಿದ್ಯಾರ್ಥಿ ಆಂದೋಲನ ಆರಂಭವಾಗಿ, ಜೆಪಿಯವರು 'ಸಂಪೂರ್ಣ ಕ್ರಾಂತಿ' ಆಂದೋಲನ ಆರಂಭಿಸಿದಾಗ ಕಿಷನ್ ಜೆಪಿಯವರೊಂದಿಗೆ ಕೈಜೋಡಿಸಿದರು. ಜೆಪಿ ಬಿಹಾರದಾದ್ಯಂತ ವಿದ್ಯಾರ್ಥಿ ಮತ್ತು ಯುವಜನ ಜಾಲವೊಂದನ್ನು(*ಛಾತ್ರ ಯುವ ಸಂಘರ್ಷ ವಾಹಿನಿ*) ನಿರ್ಮಿಸುವ ಕೆಲಸಕ್ಕಾಗಿ ಕಿಷನ್ ಅವರನ್ನು ನಿಯೋಜಿಸಿದಾಗ ಅವರು ತಮ್ಮ ಕೇಂದ್ರ ಸ್ಥಳವನ್ನು ಸಂಭಲಪುರದಿಂದ ಪಟ್ನಾಗೆ ವರ್ಗಾಯಿಸಿಕೊಂಡರು. ಆದರೆ ಜೆಪಿ ಆಂದೋಲನ ಜನತಾ ಪಕ್ಷದ ಒಡಕಿನ ಫಲವಾಗಿ ಕಾಂಗ್ರೆಸ್ಸಿಗೆ ಒಂದು ಸೂಕ್ತ ರಾಜಕೀಯ ಪರ್ಯಾಯ ಒದಗಿಸಲು ವಿಫಲವಾದಾಗ, ಕಿಷನ್ ಧೃತಿಗೆಡದೆ ತಮ್ಮದೇ ಯುವಜನ ಸಮೂಹವನ್ನು ಕಟ್ಟಿಕೊಂಡು ಒಂದು ತಾತ್ವಿಕ ರಾಜಕೀಯ ಪರ್ಯಾಯ ರೂಪಿಸಲು ರಾಷ್ಟ್ರಾದ್ಯಂತ ಪ್ರವಾಸ ಕೈಗೊಂಡರು. ಅವರು ೧೯೭೭ರಲ್ಲಿ ಹಿಂದಿಯಲ್ಲಿ ಆರಂಭಿಸಿದ 'ಸಾಮಯಿಕ್ ವಾರ್ತಾ' ಮತ್ತು ಒರಿಯಾದಲ್ಲಿ ಆರಂಭಿಸಿದ 'ಬಿಕಲ್ಪ್ ವಿಚಾರ್' ಅವರಿಗೆ ಈ ದಿಸೆಯಲ್ಲಿ ಕೈದೀವಿಗೆಗಳಾಗಿದ್ದವು.

೧೯೮೦ರಲ್ಲಿ ಕಿಷನ್ ಬೆಂಗಳೂರಿನಲ್ಲಿ ಒಂದು ಹೊಸ ರಾಜಕೀಯ ಪರ್ಯಾಯ ರೂಪಿಸುವ ಪ್ರಯತ್ನವಾಗಿ ಅವರು 'ಸಮತಾ ಸಮಾವೇಶ'ವನ್ನು ಆಯೋಜಿಸಿದರಾದರೂ ಅದು ಸಫಲವಾಗಲಿಲ್ಲ. ನಂತರ ಅವರು ಕರ್ನಾಟಕದ ರೈತ ಮತ್ತು ದಲಿತ ಚಳುವಳಿ, ಮಧ್ಯಪ್ರದೇಶದ ನರ್ಮದಾ ಅಣೆಕಟ್ಟು ನಿರಾಶ್ರಿತರ ಹೋರಾಟ, ಮಧ್ಯ ಭಾರತದ ಆದಿವಾಸಿಗಳ ಬದುಕಿನ ಹಕ್ಕಿನ ಹೋರಾಟ ಇತ್ಯಾದಿ ಜನಪರ ಹೋರಾಟಗಳ ನಡುವೆ ಸಮನ್ವಯ ಸಾಧಿಸುವ ಪ್ರಯತ್ನಗಳನ್ನು ಮಾಡಿದರು. ಇದರ ಭಾಗವಾಗಿ ಕರ್ನಾಟಕವೂ ಸೇರಿದಂತೆ ರಾಷ್ಟ್ರದ ವಿವಿಧ

ಭಾಗಗಳಲ್ಲಿ ಅನೇಕ ಯುವ ಜನರಲ್ಲಿ ಸಮಾಜವಾದದ ವಿಚಾರ ಬಿತ್ತಿ ಅವರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಿದರು. ಅವರು ಯಾವುದೇ ವಿಷಯದ ಬಗ್ಗೆ ಮಾತನಾಡಿದರೂ ಅದು ತಲಸ್ಪರ್ಶಿಯೂ ಮತ್ತು ಅತ್ಯಂತ ಸರಳ ಭಾಷೆಯಲ್ಲಿ ಇರುತ್ತಿತ್ತು. ಇವುಗಳ ಜೊತೆಗೆ ಅವರ ಅನೌಪಚಾರಿಕ ವರ್ತನೆ ಯುವಜನರನ್ನು ಅವರತ್ತ ಸೆಳೆಯುತ್ತಿದ್ದವು. ಈ ಮಧ್ಯೆ ೧೯೮೦ರಲ್ಲಿ ತಮ್ಮ ಊರಾದ ಕಾಳಹಂಡಿಯಲ್ಲಿ ಜನ ಹಸಿವಿನಿಂದ ಸಾಯತೊಡಗಿದ್ದಾಗಲೂ ಸರ್ಕಾರ ಏನೂ ಕ್ರಮ ಕೈಗೊಳ್ಳದಿದ್ದಾಗ ಕಿಷನ್ ಒರಿಸ್ಸಾ ಶ್ರೇಷ್ಠ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಸಿ ಕಾನೂನು ಹೋರಾಟ ಮಾಡಿ ಅಲ್ಲಿನ ಜನತೆಗೆ ಪರಿಹಾರದ ವ್ಯವಸ್ಥೆಯ ಭರವಸೆಯನ್ನು ಪಡೆದರು.

ಜಾಗತೀಕರಣದ ವಿರುದ್ಧದ ಜಾಗತಿಕ ಹೋರಾಟವೆನಿಸಿದ 'ಇನ್ನೊಂದು ಜಗತ್ತು ಸಾಧ್ಯ' ಚಳುವಳಿಯ ಭಾರತದ ಪ್ರಮುಖ ಧ್ವನಿಯಾಗಿದ್ದ ಕಿಷನ್, ಮೇಧಾ ಪಾಟ್ಕರ್, ಯೋಗೇಂದ್ರ ಯಾದವ್, ದಿ. ಸುನೀಲ್ ಗುಪ್ತ ಮುಂತಾದವರೊಂದಿಗೆ ಸೇರಿ ಸಮಾಜವಾದಿ ಜನಪರಿಷದ್, ಜನಪರ ಹೋರಾಟಗಳ ರಾಷ್ಟ್ರೀಯ ಮೈತ್ರಿಕೂಟ(National alliance for People's movements) ಸಂಚಾಲಕರಾಗಿ ತಮ್ಮ ಅನಾರೋಗ್ಯ ಮತ್ತು ಹಿರಿ ವಯಸ್ಸನ್ನು ಲೆಕ್ಕಿಸದೆ ರಾಷ್ಟ್ರಾದ್ಯಂತ ಪ್ರವಾಸ ಮಾಡುತ್ತಿದ್ದರು. ಇಂತಹ ಒಂದು ಪ್ರವಾಸದ ಸಂದರ್ಭದಲ್ಲಿ ಹೈದರಾಬಾದ್‌ನಲ್ಲಿ ಅವರ ಆರೋಗ್ಯ ತೀವ್ರ ಹದಗೆಟ್ಟು ಅವರನ್ನು ಭುವನೇಶ್ವರಕ್ಕೆ ಒಯ್ಯಲಾಯಿತು. ಅಲ್ಲಿ ಅವರು ೨೦೦೪ರ ಸೆಪ್ಟಂಬರ್ ೨೭ರಂದು ತಮ್ಮ ೭೪ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು.

ತಮ್ಮ ಗುರು ಲೋಹಿಯಾರಂತೆಯೇ ಸರಳ ಬದುಕು ಬಾಳಿದ ಕಿಷನ್‌ಗೆ ಯಾವುದೇ ಬ್ಯಾಂಕ್ ಖಾತೆಯಾಗಲೀ, ಖಾಸಗಿ ಆಸ್ತಿಯಾಗಲೀ ಇರಲಿಲ್ಲ. ಅವರು ಲೋಕಸಭಾ ಸದಸ್ಯತ್ವದ ಸಂಬಂಧದ ಪಿಂಚಣಿ ಪಡೆಯಲಿಲ್ಲ. ಅವರ ಇಡೀ ಬದುಕು ಶಾಲಾ ಸಂಗೀತ ಉಪಾಧ್ಯಾಯಿನಿಯಾಗಿದ್ದ ಅವರ ಪತ್ನಿ ಶ್ರೀಮತಿ ವಾಣಿ ಮಂಜರಿ ಅವರ ಸಂಬಳ ಮತ್ತು ಅಭಿಮಾನಿಗಳು ನೀಡುತ್ತಿದ್ದ ಸಣ್ಣಮಟ್ಟ ದೇಣಿಗೆಗಳ ಮೇಲೆ ನಡೆಯುತ್ತಿತ್ತಷ್ಟೆ. ೨೦೦೨ರಲ್ಲಿ ಕರ್ನಾಟಕದ ಅವರ ಶಿಷ್ಯರು ಅವರಿಗೆ ಸುಮಾರು ಒಂದೂವರೆ ಲಕ್ಷ ರೂಪಾಯಿಗಳ ಹಮ್ಮಿಣಿ ಅರ್ಪಿಸಿ ಅಭಿನಂದಿಸಿದ್ದರು. ಆ ಹಣವನ್ನೂ ಕಿಷನ್ ಸಂಘಟನೆಗಾಗಿಯೇ ಖರ್ಚು ಮಾಡಿದ್ದರು.

ಕಿಷನ್ ಪಟ್ನಾಯಕರು ಹಿಂದಿ, ಒರಿಯಾ ಮತ್ತು ಇಂಗ್ಲಿಷ್‌ಗಳಲ್ಲಿ ಅನೇಕ ಲೇಖನಗಳನ್ನು ಬರೆದಿರುವರಾದರೂ, ಪುಸ್ತಕಗಳಾಗಿ ಮುಖ್ಯವಾಗಿ ಹೊರಬಂದದ್ದು ಹಿಂದಿಯ 'ವಿಕಲ್ಪ್‌ಹೀನ್ ನಹೀ ಹೈ ದುನಿಯಾ' (ಈ ಜಗತ್ತಿಗೆ ಪರ್ಯಾಯವಿಲ್ಲದಿಲ್ಲ) ಮತ್ತು 'ಕಿಸಾನ್ ಆಂದೋಲನ್: ದಶಾ ಔರ್ ದಿಶಾ' ಇವುಗಳಲ್ಲಿ ಮೊದಲನೆಯದು ಲೋಹಿಯಾ ಪ್ರಕಾಶನದಿಂದ ಕನ್ನಡಕ್ಕೆ 'ಪ್ರತಿಚಿಂತನೆ' ಎಂದು ಅನುವಾದಿತವಾಗಿ(ಅನುವಾದ: ಹಸನ್‌ನಯೀಂ ಸುರಕೋಡ) ಪ್ರಕಟವಾಗಿದೆ. ಇತರೆಡೆಗಳಲ್ಲಿರಲಿ, ಕರ್ನಾಟಕದಲ್ಲಿ ಸಮಾಜವಾದದ ಹೆಸರು ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೆ ಕಿಷನ್ ಪಟ್ನಾಯಕ್ ಅವರ ಹೆಸರು ಚಿರಸ್ಥಾಯಿಯಾಗಿರುವುದು.

## ಅನುಪಮ ಸಂಸದೀಯ ಪಟು ನಾಥ್ ಪೈ



ಭಾರತದ ಸಮಾಜವಾದಿಗಳಲ್ಲಿ ಅನೇಕರು ಸಂಸತ್ ಸದಸ್ಯರಾಗಿ ತಮ್ಮ ಬಹುಶ್ರುತ ಪಾಂಡಿತ್ಯ, ಅನುಪಮ ಭಾಷಾ ವೈಖರಿ ಹಾಗೂ ಉಜ್ವಲ ಪ್ರತಿಭೆಗಳ ಮೂಲಕ ತಮ್ಮ ಜನಪರ ಚಿಂತನೆ ಮತ್ತು ಹೋರಾಟಗಳನ್ನು ಸದನದಲ್ಲೂ ಮುಂದುರೆಸಿ ಅದರ ಘನತೆ–ಗೌರವಗಳನ್ನು ಹೆಚ್ಚಿಸಿದ್ದಾರೆ. ಅಂಥವರಲ್ಲಿ ಎದ್ದು ಕಾಣುವ ಒಂದು ವ್ಯಕ್ತಿತ್ವವೆಂದರೆ ಬ್ಯಾರಿಸ್ಟರ್ ನಾಥ್ ಪೈ. ಅವರು ಲೋಕಸಭೆಯಲ್ಲಿ ಪ್ರಧಾನಿ ಪಂಡಿತ್ ನೆಹ್ರೂ ಅವರನ್ನು ಸಂಸದೀಯ ಗೌರವ ಮತ್ತು ಘನತೆಗಳಿಗೆ ಚ್ಯುತಿ ಬಾರದಂತೆ ವಾದ–ಪ್ರತಿವಾದಗಳ ಮೂಲಕ ಎದುರಿಸಿದ ಬಗೆ ರೀತಿ ನೀತಿಗಳಿಂದ ರಾಷ್ಟ್ರದ ಗಮನವನ್ನು ಸೆಳೆದಿತ್ತು.

ನಾಥ್ ಪೈ ಅವರು ಸಂಸತ್ತಿನಲ್ಲಿ ಮಂಡಿಸಿದ ಖಾಸಗಿ ಸದಸ್ಯರ ಮಸೂದೆಗಳು ಇಂದಿಗೂ ಸಂಸತ್ ಕಾರ್ಯಕಲಾಪಗಳನ್ನು ಅಧ್ಯಯನ ಮಾಡಬಯಸುವವರಿಗೆ ಅಮೂಲ್ಯ ದಾಖಲೆಗಳಾಗಿವೆ. ವಿಶೇಷವಾಗಿ ಮೂಲಭೂತ ಹಕ್ಕೆಂದು ಪರಿಗಣಿತವಾಗಿದ್ದ ಆಸ್ತಿ ಹಕ್ಕಿಗೆ ಸಂಬಂಧಿಸಿದಂತೆ ಗೋಲಕ್‌ನಾಥ್ ಪ್ರಕರಣದಲ್ಲಿ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪನ್ನು ಸಂಸತ್ತಿನಲ್ಲಿ ತಮ್ಮ ಸಂವಿಧಾನ ತಿದ್ದುಪಡಿ ಮಸೂದೆ ಮೂಲಕ ಸಮರ್ಥವಾಗಿ ಪ್ರಶ್ನಿಸಿದ ಅವರ ಕಾನೂನು ಜ್ಞಾನ ಮತ್ತು ರಾಜಕೀಯ ಧೀಮಂತಿಕೆ ಐತಿಹಾಸಿಕವಾದದ್ದೆಂದೇ ಹೇಳಬೇಕು. ಈ ಮಸೂದೆ ಮೇಲಿನ ಚರ್ಚೆಯಲ್ಲಿ ಅವರು ಘೋಷಿಸಿದ 'ಸಂವಿಧಾನದ ಆತ್ಯಂತಿಕ ಉಸ್ತುವಾರಿ ಜನರದ್ದೇ–ಅಂದರೆ ಸದನದ್ದೇ– ಹೊರತು ಸರ್ವೋಚ್ಚ ನ್ಯಾಯಾಲಯದ್ದಲ್ಲ' ಎಂಬ ಮಾತು ಸರ್ವೋಚ್ಚ ನ್ಯಾಯಾಲಯದ ಆತ್ಮಸಾಕ್ಷಿಯನ್ನೂ ಮುಟ್ಟಿತು. ಅದು ತನ್ನ 'ಮೂಲಭೂತ ಹಕ್ಕುಗಳನ್ನು ಮುಟ್ಟುವ ಹಾಗಿಲ್ಲ' ಎಂಬ ತನ್ನ ತೀರ್ಪನ್ನು 'ಯಾರೂ ಸಂವಿಧಾನದ ಮೂಲ ಸ್ವರೂಪವನ್ನು ಮುಟ್ಟುವ ಹಾಗಿಲ್ಲ' ಎಂದು ಬದಲಾಯಿಸಿಕೊಳ್ಳಲು ಇದನ್ನೇ ಸ್ಫೂರ್ತಿಯಾಗಿಸಿಕೊಂಡ ಪ್ರಧಾನಿ ಇಂದಿರಾ, ಮುಂದೆ ಬ್ಯಾಂಕುಗಳ ರಾಷ್ಟ್ರೀಕರಣ ಮತ್ತು ರಾಜಧನ ರದ್ದತಿಗಳನ್ನು ಸರ್ವೋನ್ನತ ನ್ಯಾಯಾಲಯ ಅಸಿಂಧುಗೊಳಿಸಿದಾಗ ಸಂವಿಧಾನ ತಿದ್ದುಪಡಿ ಮಾಡಿ ಈ ಸಮಾಜವಾದಿ ಕಾರ್ಯಕ್ರಮಗಳನ್ನು ಸಿಂಧುಗೊಳಿಸಲು ಸಾಧ್ಯವಾಯಿತೆಂಬುದು ಸಮಾಜವಾದಿ ಸಂಸದೀಯ ಪರಂಪರೆಯ ಹೆಗ್ಗಳಿಕೆಯೇ ಆಗಿದೆ.

ಇಂತಹ ಹೆಗ್ಗಳಿಕೆಯನ್ನು ಸಮಾಜವಾದಿಗಳಿಗೆ ತಂದಿತ್ತ ನಾಥ್ ಪೈ ಹುಟ್ಟಿದ್ದು ಮಹಾರಾಷ್ಟ್ರದ ಕೊಂಕಣ ಪ್ರದೇಶದ ರತ್ನಗಿರಿ ಬಳಿಯ ಕುಗ್ರಾಮವೊಂದರಲ್ಲಿ, ಓರ್ವ ಅಂಚೆ ಮಾಸ್ತರನ ಮಗನಾಗಿ, ೧೯೨೨ರ ಸೆಪ್ಟಂಬರ್ ೨೫ರಂದು. ಪ್ರಾಥಮಿಕ ಶಾಲಾ ಶಿಕ್ಷಣವನ್ನು ತನ್ನೂರಿನಲ್ಲಿ ಮುಗಿಸಿದ ಪೈ ಉನ್ನತ ಶಿಕ್ಷಣಕ್ಕಾಗಿ ಬೆಳಗಾವಿಗೆ ಬಂದು ಅಲ್ಲಿ ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಅಂಚೆ ಕಛೇರಿ ಮೇಲೆ ದಾಳಿ ನಡೆಸಿ ಪೋಲೀಸರಿಗೆ ಸಿಕ್ಕಿಬಿದ್ದರು. ಇದರಿಂದಾಗಿ ಅವರ ಶಿಕ್ಷಣಕ್ಕೆ ತಾತ್ಕಾಲಿಕ ಅಡ್ಡಿಯಾದರೂ, ಅವರು ಆ ಹೊತ್ತಿಗಾಲೇ ಮಹಾರಾಷ್ಟ್ರ ಸಮಾಜವಾದಿ ಚಳುವಳಿಯಿಂದ ಸಮಾಜವಾದದ ದೀಕ್ಷೆ ಪಡೆದಿದ್ದರು. ೧೯೪೭ರ ಹೊತ್ತಿಗೆ ಪದವಿ ಪಡೆದ ನಾಥ್ ಪೈ, ಬ್ಯಾರಿಸ್ಟರ್ ಪದವಿಗಾಗಿ ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಿದರು. ಇಂಗ್ಲೆಂಡ್‌ನಲ್ಲಿ ವಿದ್ಯಾರ್ಥಿಯಾಗಿ ತಮ್ಮ ಸಮಾಜವಾದಿ ಚಟುವಟಿಕೆಗಳನ್ನು ಮುಂದುವರೆಸಿದ ಪೈ ಅಲ್ಲಿನ ಸಮಾಜವಾದಿ ನಾಯಕರಾದ ಕ್ಲೆಮೆಂಟ್ ಅಟ್ಲೀ, ಬ್ರೈಲ್ಸ್‌ಫರ್ಡ್ ಮುಂತಾದವರೊಂದಿಗೆ ಸಂಪರ್ಕವಿರಿಸಿಕೊಂಡರು. ಭಾರತದಲ್ಲಿ ೧೯೫೨ರ ಮಹಾಚುನಾವಣೆ ಘೋಷಿತವಾದಾಗ ಬೆಳಗಾವಿ ನಗರ ಕ್ಷೇತ್ರದಿಂದ ಮುಂಬೈ ವಿಧಾನಸಭೆಗೆ ಸ್ಪರ್ಧಿಸಲು ತಮ್ಮ ಸಮಾಜವಾದಿ ಗೆಳೆಯರಿಂದ ಆಹ್ವಾನಿತರಾದ ಅವರು ಆ ಚುನಾವಣೆಯಲ್ಲಿ ಸೋಲುಂಡು ಇಂಗ್ಲೆಂಡ್‌ಗೆ ಹಿಂದಿರುಗಿ ತಮ್ಮ ಕಾನೂನು ಶಿಕ್ಷಣವನ್ನು ಮುಂದುವರೆಸಿದರು. ೧೯೫೪ರಲ್ಲಿ ಕೋಪನ್‌ಹೇಗನ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಮಾಜವಾದಿ ಸಂಸ್ಥೆಯ ಯುವ ಶಾಖೆಯಾದ ಸಮಾಜವಾದಿ ಯುವಜನರ ಅಂತಾರಾಷ್ಟ್ರೀಯ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆಯಾದರು.

ತಮ್ಮ ಅಂತಾರಾಷ್ಟ್ರೀಯ ಪ್ರವಾಸದ ಸಂದರ್ಭದಲ್ಲಿ ಆಸ್ಟ್ರಿಯಾದ ಯುವ ಸಮಾಜವಾದಿ ಕ್ರಿಸ್ಟೆಲ್ ಅವರನ್ನು ಪ್ರೀತಿಸಿ ಮದುವೆಯಾದ ನಾಥ್ ಪೈ ಬ್ಯಾರಿಸ್ಟರ್ ಆಗಿ ಭಾರತಕ್ಕೆ ಹಿಂದಿರುಗಿದರು. ೧೯೫೭ರ ಚುನಾವಣೆಗಳಲ್ಲಿ ರತ್ನಗಿರಿ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿ ಗೆದ್ದು ಸದನದಲ್ಲಿ ಪ್ರಜಾ ಸಮಾಜವಾದಿ ಪಕ್ಷದ ಉಪನಾಯಕರಾದರು. ನಂತರದ ಎರಡೂ ಚುನಾವಣೆಗಳಲ್ಲಿ ಆ ಕ್ಷೇತ್ರದಿಂದಲೇ ಗೆದ್ದ ಅವರು, ಮುಂದೆ ರಾಜಾಪುರ್ ಎಂದು ಹೆಸರು ಬದಲಾಯಿಸಿಕೊಂಡ ಆ ಕ್ಷೇತ್ರವನ್ನು ತಮ್ಮ ಜನಪರ ಹೋರಾಟ ಮತ್ತು ಕೆಲಸ–ಕಾರ್ಯಗಳ ಮೂಲಕ ಸಮಾಜವಾದಿಗಳ ಭದ್ರಕೋಟೆಯನ್ನಾಗಿ ಮಾಡಿದರು. ಮುಂದೆ ಇದೇ ಕ್ಷೇತ್ರದಿಂದಲೇ ಮತ್ತೋರ್ವ ಸಮಾಜವಾದಿ ನಾಯಕ ಮಧುದಂಡವತೆಯವರು ಐದು ಬಾರಿ ಲೋಕಸಭೆಗೆ ಆಯ್ಕೆಯಾದದ್ದು. ೧೯೬೦ರಲ್ಲಿ ಕೇಂದ್ರ ಸರ್ಕಾರದ ನೌಕರರ ಮುಷ್ಕರವನ್ನು ಸಂಘಟಿಸಿದ್ದ ನಾಥ್ ಪೈ ಅಂಚೆ ಮತ್ತು ರೈಲ್ವೆ ನೌಕರರ ಸಂಘಟನೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು.

ಕೊಂಕಣ ರೈಲ್ವೇ ಮತ್ತು ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬುದು ನಾಥ್ ಪೈ ಅವರ ಎರಡು ದೊಡ್ಡ ಕನಸುಗಳಾಗಿದ್ದವು. ಮೊದಲ ಕನಸೇನೋ ಮತ್ತೋರ್ವ ಸಮಾಜವಾದಿ ನಾಯಕ ಜಾರ್ಜ್ ಫರ್ನಾಂಡಿಸ್ ರೈಲ್ವೇ ಮಂತ್ರಿಯಾಗಿದ್ದಾಗ ನನಸಾಯಿತು. ಆದರೆ ಎರಡನೇ ಕನಸನ್ನು ನನಸು ಮಾಡಲು ಹೋರಾಡುತ್ತಿದ್ದ ಸಂದರ್ಭದಲ್ಲಿ ಅವರು ಅಸುನೀಗಿದ್ದು ಅವರ ಬದುಕಿನ ಒಂದು ದುರಂತವೇ ಸರಿ. ಅವರು ೧೯೭೧ರ ಜನವರಿ ೧೮ರಂದು ಬೆಳಗಾವಿಯಲ್ಲಿ ಇದೇ ಹೋರಾಟದಲ್ಲಿ ಹುತಾತ್ಮರ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡುತ್ತಿದ್ದಾಗಲೇ ಆಯಾಸಗೊಂಡು ಕುಸಿದುಬಿದ್ದರು. ಹೃದಯಾಘಾತದಿಂದ ಕೊನೆಯುಸಿರೆಳೆದರು.

# ವರ್ಣರಂಜಿತ ವ್ಯಕ್ತಿತ್ವದ ರಾಜ್‌ನಾರಾಯಣ್




**ಭಾ**ರತದ ಸಮಾಜವಾದಿ ಆಂದೋಲನದ ಅತ್ಯಂತ ವರ್ಣಮಯ ವ್ಯಕ್ತಿತ್ವಗಳಲ್ಲಿ ಒಂದೆಂದು ಪ್ರಸಿದ್ಧರಾದ ರಾಜ್ ನಾರಾಯಣ್ ಸೋಲು ಕಾಣದ ನಾಯಕಿ ಎನಿಸಿದ್ದ ಇಂದಿರಾ ಗಾಂಧಿಯವರನ್ನು ಚುನಾವಣಾ ಮೊಕದ್ದಮೆಯೊಂದರಲ್ಲಿ ಮತ್ತು ನಂತರದ ಚುನಾವಣೆಯಲ್ಲಿ ಸೋಲಿಸಿದ ಸಮಾಜವಾದಿ ಸರದಾರ ಎನಿಸಿಕೊಂಡವರು. ರಾಜ್‌ನಾರಾಯಣ್‌ರದ್ದು ಸಿಂಹದ ಶೌರ್ಯ; ಆದರೆ ಗಾಂಧಿಯ ಹೃದಯ ಪಡೆದವರೆಂದೂ ಮತ್ತು ಇವರಂಥವರು ಮೂರು ಜನರಿದ್ದರೂ ಸಾಕು, ಭಾರತದಲ್ಲಿ ಸರ್ವಾಧಿಕಾರ ಸುಳಿಯಲಾರದು ಎಂದೂ ಅವರ ರಾಜಕೀಯ ಗುರು ಲೋಹಿಯಾ ಬಣ್ಣಿಸಿದದ್ದರು ಅವರ. ಆ ಮಾತು ನಿಜವಾಗಲು ಬಹುಕಾಲವೇನೂ ಬೇಕಾಗಲಿಲ್ಲ. ೧೯೭೧ರ ಚುನಾವಣೆಯಲ್ಲಿ ರಾಯ್‌ಬರೇಲಿಯಿಂದ ಇಂದಿರಾ ವಿರುದ್ಧ ಸೋತರೂ, ಅವರ ವಿರುದ್ಧ ಚುನಾವಣಾ ಭ್ರಷ್ಟಾಚಾರದ ಮೊಕದ್ದಮೆ ಹೂಡಿ ಗೆದ್ದರು. ಇದೇ ನೆಪವಾಗಿ ಇಂದಿರಾ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದರು. ತುರ್ತು ಪರಿಸ್ಥಿತಿಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿರೋಧ ಹೆಚ್ಚಿದಾಗ ಇಂದಿರಾ ತುರ್ತು ಪರಿಸ್ಥಿತಿಯನ್ನು ಸಡಿಲಿಸಿ ಚುನಾವಣೆ ಘೋಷಿಸಿದರು. ೧೯೭೭ರ ಆ ಚುನಾವಣೆಯಲ್ಲಿ ರಾಜ್‌ನಾರಾಯಣ್ ರಾಯ್‌ಬರೇಲಿಯಿಂದಲೇ ಸ್ಪರ್ಧಿಸಿ ಇಂದಿರಾರನ್ನು ಸೋಲಿಸಿ ಸರ್ವಾಧಿಕಾರ ಕೊನೆಗೊಳ್ಳಲು ಕಾರಣರಾದರು. ನಂತರ ಜನತಾ ಸರ್ಕಾರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಯಾಗಿ ಬರಿಗಾಲ ವೈದ್ಯರ ಪರಿಕಲ್ಪನೆಯನ್ನು ಆಧರಿಸಿದ ಗ್ರಾಮೀಣ ಆರೋಗ್ಯ ಸೇವೆ ಆರಂಭಿಸಿದರು. ಆದರೆ ಜನತಾ ಪಕ್ಷದ ಒಡಕಿನ ರಾಜಕರಣದಲ್ಲಿ ಆ ಸೇವೆ ಸಾಕಾರಗೊಳ್ಳಲಿಲ್ಲ ಎಂಬುದು ಬೇರೆ ಮಾತು.

೧೯೧೭ರ ನವೆಂಬರ್‌ನಲ್ಲಿ ಉತ್ತರ ಪ್ರದೇಶದ ವಾರಾಣಾಸಿ ಬಳಿಯ ಮೋತಿಕೋಟ್ ಎಂಬ ಗ್ರಾಮದಲ್ಲಿ ವಾರಾಣಾಸಿ ರಾಜಮನೆತನಕ್ಕೆ ಸೇರಿದ ಶ್ರೀಮಂತ ಜಮೀನ್ದಾರಿ (ಭೂಮಿಹಾರ್) ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ರಾಜ್‌ನಾರಾಯಣ್ ಬನಾರಸ್ ಹಿಂದು ವಿಶ್ವವಿದ್ಯಾಲಯದಲ್ಲಿ ಎಂ.ಎ., ಎಲ್.ಎಲ್.ಬಿ. ಪದವಿ ಪಡೆಯುವ ಹೊತ್ತಿಗೆ ತೀವ್ರ ಎಡಪಂಥೀಯ ರಾಜಕೀಯ ಕಾರ್ಯಕರ್ತರಾಗಿದ್ದರು. ೧೯೩೪ರಲ್ಲೇ ಕಾಂಗ್ರೆಸ್ ಸಮಾಜವಾದಿ ಪಕ್ಷ ಸೇರಿ ೧೯೪೨ರಲ್ಲಿ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭೂಗತ ಚಳುವಳಿ ನಡೆಸಿ ಸೆರೆಮನೆ ಸೇರಿ ಪ್ರಸಿದ್ಧರಾದರು.

ತಮ್ಮ ಪಾಲಿನ ೮೦೦ ಬಿಘಾ ಜಮೀನನ್ನು ಬಡಜನರಿಗೆ ಹಂಚಿ 'ಲೋಕಬಂಧು' ಎಂಬ ಜನಪ್ರೀತಿಗೆ ಪಾತ್ರರಾಗಿದ್ದ ರಾಜನಾರಾಯಣ್ ೧೯೫೨ರಲ್ಲಿ ಉತ್ತರ ಪ್ರದೇಶದ ವಿಧಾನಸಭಾ ಸದಸ್ಯರಾದರು. ಅವರು ಮುಂದೆ ೧೫ ವರ್ಷಗಳ ಕಾಲ ಸತತವಾಗಿ ವಿರೋಧ ಪಕ್ಷದ ನಾಯಕರಾಗಿ ಸದನದ ಹೊರಗೆ ಮತ್ತು ಒಳಗೆ ಬಡಜನತೆಯ ಪರವಾಗಿ ನಡೆಸಿದ ಹೋರಾಟದಲ್ಲಿ ಅವರು ದಾಖಲೆಯ ಒಟ್ಟು ೫೮ ಬಾರಿ ಸೆರೆಮನೆವಾಸ ಅನುಭವಿಸಬೇಕಾಗಿ ಬಂದು ರಾಷ್ಟ್ರಾದ್ಯಂತ ಪ್ರಸಿದ್ಧರಾದರು. ಲೋಹಿಯಾ ಆರಂಭಿಸಿದ ಚೀನಾ ನೀತಿ ವಿರೋಧಿ, ಜಾತಿ ವಿನಾಶ, ಇಂಗ್ಲಿಷ್ ತೊಲಗಿಸಿ, ಬೆಲೆ ನಿಯಂತ್ರಣ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಲೋಹಿಯಾರ ಪ್ರಿಯ ಶಿಷ್ಯರಾದರು.

ಲೋಹಿಯಾ ನಿಧನರಾದ ನಂತರ ಚರಣ ಸಿಂಗ್‌ರ ಭಾರತೀಯ ಕ್ರಾಂತಿ ದಳ ಸೇರಿ ೧೯೭೪ರ ಜೆಪಿ ಆಂದೋಲನದ ಜೊತೆ ಕೈಜೋಡಿಸಿ ಮತ್ತೆ ರಾಜಕೀಯ ಮಹತ್ವ ಗಳಿಸಿಕೊಂಡರು. ಅವರು ಆರೋಗ್ಯ ಮಂತ್ರಿಯಾಗಿದ್ದಾಗಲೇ ತಮ್ಮ ಗುರು ಲೋಹಿಯಾ ನಿಧನರಾದ ನವದೆಹಲಿಯ ವೆಲ್ಲಿಂಗ್ಟನ್ ಆಸ್ಪತ್ರೆಯನ್ನು ಡಾ. ರಾಮಮನೋಹರ ಲೋಹಿಯಾ ಆಸ್ಪತ್ರೆ ಎಂದು ಅಧಿಕೃತವಾಗಿ ಮರುನಾಮಕರಣ ಮಾಡಿದ್ದು. ಜನತಾ ಪಕ್ಷ ಒಡೆದುಹೋದ ನಂತರ ಮತ್ತೆ ಹಲವು ಪಕ್ಷ ಸೇರಿ ಬಿಟ್ಟು ಕೊನೆಗೆ ೧೯೮೬ರ ಡಿಸೆಂಬರ್ ೩೧ರಂದು ತಮ್ಮ ಇಹಲೋಕ ಪ್ರಯಾಣವನ್ನು ಮುಗಿಸಿದರು. ಕೋಟ್ಯಾಧೀಶನಾಗಿ ಹುಟ್ಟಿ ನಾಲ್ಕು ಮಕ್ಕಳ ತಂದೆಯಾಗಿದ್ದ ರಾಜ್‌ನಾರಾಯಣ್ ಕೊನೆಯುಸಿರೆಳೆದಾಗ ಅವರ ಬ್ಯಾಂಕ್ ಖಾತೆಯಲ್ಲಿದ್ದ ಹಣ ಒಂದೂವರೆ ಸಾವಿರ ರೂಪಾಯಿಗಳು ಮಾತ್ರ.

# ಜನ ನಾಯಕ ಕರ್ಪೂರಿ ಠಾಕೂರ್




**ಲೋ**ಹಿಯಾ ಪರಂಪರೆಯ ಸಮಾಜವಾದಿ ಚಳುವಳಿಯಲ್ಲಿನ ಇನ್ನೊಂದು ಉಜ್ವಲ ಹೆಸರು ಕರ್ಪೂರಿ ಠಾಕೂರ್. ಮೇಲ್ಜಾತಿಗಳ ಆಡುಂಬೋಲವಾಗಿದ್ದ ಬಿಹಾರದ ರಾಜಕಾರಣದಲ್ಲಿ ತನ್ನ ನಾಯಕತ್ವ ಗುಣದಿಂದ ಮೇಲೆದ್ದು ಬಂದು ಮೂರು ಬಾರಿ ರಾಜ್ಯದ ಮುಖ್ಯಮಂತ್ರಿಯಾದ ಕರ್ಪೂರಿ ಠಾಕೂರ್ ಕ್ಷೌರಿಕ ಕುಲವೃತ್ತಿಯ ಕುಟುಂಬವೊಂದಕ್ಕೆ ಸೇರಿದವರು. ಬಿಹಾರದ ಸಮಸ್ತಿಪುರ ಜಿಲ್ಲೆಯ ಪಿತೌಂಝಿಯಾ ಎಂಬ ಕುಗ್ರಾಮದಲ್ಲಿ(ಈಗ ಇದಕ್ಕೆ ಕರ್ಪೂರಿ ಗ್ರಾಮ ಎಂದು ಮರುನಾಮಕರಣ ಮಾಡಲಾಗಿದೆ) ೧೯೨೪ರ ಫೆಬ್ರುವರಿ ೨೪ ರಂದು ಕರ್ಪೂರಿ ಠಾಕೂರ್ ಜನಿಸಿದರು. ಸಮಸ್ತಿಪುರದಲ್ಲಿ ಕಾಲೇಜು ಓದುತ್ತಿದ್ದಾಗ 'ಭಾರತ ಬಿಟ್ಟು ತೊಲಗಿ' ಚಳುವಳಿ ಸೇರಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು. ಇದರ ಪರಿಣಾಮವಾಗಿ ಅವರು ೨೬ ತಿಂಗಳುಗಳ ಕಾಲ ಸೆರೆಮನೆವಾಸ ಅನುಭವಿಸಬೇಕಾಯಿತು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಮಾಜವಾದಿ ನಾಯಕ ಜಯಪ್ರಕಾಶ್ ನಾರಾಯಣ ಅವರ ಪ್ರಭಾವದಲ್ಲಿ ರಾಜಕೀಯ ಕಾರ್ಯಕರ್ತನಾಗಿ ಬೆಳೆದ ಕರ್ಪೂರಿ, ಸ್ವಲ್ಪ ಕಾಲ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಕೆಲಸ ಮಾಡಿದರು. ನಂತರ ೧೯೫೨ರ ಚುನಾವಣೆಗಳಲ್ಲಿ ಬಿಹಾರ ವಿಧಾನಸಭೆಯ ಪ್ರಜಾಸಮಾಜವಾದಿ ಪಕ್ಷದ ಸದಸ್ಯರಾಗಿ ಆಯ್ಕೆಯಾದರು. ಐವತ್ತರ ದಶಕದಲ್ಲಿ ಪಕ್ಷ ಇಬ್ಭಾಗವಾದಾಗ ಲೋಹಿಯಾ ಬಣದೊಂದಿಗೆ ಗುರುತಿಸಿಕೊಂಡ ಅವರು ೧೯೬೦ರಲ್ಲಿ ಅಖಿಲ ಭಾರತ ಅಂಚೆ ಮತ್ತು ತಂತಿ ಇಲಾಖೆ ನೌಕರರ ಬೃಹತ್ ಮುಷ್ಕರವನ್ನು ಸಂಘಟಿಸಿ ಹೆಸರು ಮಾಡಿದರು.

೧೯೬೭ರ ಚುನಾವಣೆಗಳಲ್ಲಿ ಬಿಹಾರದಲ್ಲಿ ಕಾಂಗ್ರೆಸ್ ಸೋತು ಸಮಾಜವಾದಿ ಪಕ್ಷದ ನೇತೃತ್ವದ ಸಂಯುಕ್ತ ವಿಧಾಯಕ ದಳದ ಸರ್ಕಾರ ರಚಿತವಾದಾಗ ಅದರಲ್ಲಿ ಶಿಕ್ಷಣ ಮಂತ್ರಿಯಾದ ಠಾಕೂರ್ ಅವರು ಶಾಲಾ ಶಿಕ್ಷಣದಿಂದ ಕಡ್ಡಾಯ ಇಂಗ್ಲಿಷ್ ಕಲಿಕೆಯನ್ನು ತೆಗೆದುಹಾಕಿ ದೊಡ್ಡ ಕೋಲಾಹಲಕ್ಕೆ ಕಾರಣರಾದರು. ರಾಜ್ಯದ ಹಿಂದುಳಿದ ಪ್ರದೇಶಗಳಲ್ಲಿ ಹೊಸದಾಗಿ ಶಾಲಾ ಕಾಲೇಜುಗಳನ್ನು ಸ್ಥಾಪಿಸಿದರು. ನಂತರದಲ್ಲೇ, ೧೯೭೦ರಲ್ಲಿ ರಾಜ್ಯದ ಮುಖ್ಯಮಂತ್ರಿಯಾದ ಅವರು ಭೂಸುಧಾರಣೆ ಮತ್ತು ಪಾನನಿಷೇಧ ಜಾರಿಗೆ ತಂದು ಪಟ್ಟಭದ್ರರ ಕೆಂಗಣ್ಣಿಗೆ ಗುರಿಯಾಗಿ ಅಧಿಕಾರ ಕಳೆದುಕೊಂಡರು. ಅವರು ಮುಖ್ಯಮಂತ್ರಿಯಾಗಿದ್ದಾಗ ಅವರ ತಂದೆ ಅವರ ಹಳ್ಳಿಯಲ್ಲಿ ಕ್ಷೌರಿಕ ವೃತ್ತಿ ಮಾಡಿಕೊಂಡೇ ಜೀವನ ಸಾಗಿಸುತ್ತಿದ್ದರೆಂಬುದು ಈ ನಾಯಕನ ಪ್ರಾಮಾಣಿಕತೆಗೊಂದು ಸಾಕ್ಷಿ ಎಂದು ಹೇಳಲಾಗುತ್ತದೆ.

೧೯೭೦ರಲ್ಲಿ ಮುಖ್ಯಮಂತ್ರಿ ಸ್ಥಾನ ಕಳೆದುಕೊಂಡ ನಂತರ ಟೆಲ್ಕೋ ಕಾರ್ಮಿಕರ ಹಿತರಕ್ಷಣೆಗಾಗಿ ೨೮ದಿನಗಳ ಆಮರಣಾಂತ ಉಪವಾಸ ಮಾಡಿ ಜನಮನ ಗೆದ್ದರು. ಲೋಹಿಯಾ ನಿಧನಾನಂತರ ಪಕ್ಷದಲ್ಲಾದ ಗೊಂದಲಗಳಿಂದಾಗಿ ಚರಣ್‌ಸಿಂಗ್‌ರ ಭಾರತೀಯ ಕ್ರಾಂತಿ ದಳ ಸೇರಿದ ಕರ್ಪೂರಿ ಠಾಕೂರ್ ೧೯೭೪ರ ಜಯಪ್ರಕಾಶ್ ನಾರಾಯಣರ 'ಸಂಪೂರ್ಣ ಕ್ರಾಂತಿ' ಆಂದೋಲನದಲ್ಲಿ ಭಾಗವಹಿಸಿ ೧೯೭೭ರ ಚುನಾವಣೆಗಳಲ್ಲಿ ಬಿಹಾರ ವಿಧಾನ ಸಭೆಗೆ ಜನತಾ ಪಕ್ಷದ ಸದಸ್ಯರಾಗಿ ಆಯ್ಕೆಯಾಗಿ ರಾಜ್ಯದ ಮುಖ್ಯಮಂತ್ರಿಯಾದರು. ರಾಜ್ಯದ ದಲಿತರ ಮತ್ತು ಹಿಂದುಳಿದ ಜಾತಿಗಳ ಜನಪ್ರಿಯ ನಾಯಕರಾಗಿದ್ದ ಅವರು ಲಾಲೂ ಪ್ರಸಾದ್ ಯಾದವ್, ರಾಂ ವಿಲಾಸ್ ಪಾಸ್ವಾನ್, ಶಿವಾನಂದ ತಿವಾರಿ, ನಿತೀಶ್ ಕುಮಾರ್ ಮುಂತಾದ ಯುವ ನಾಯಕರನ್ನು ಬೆಳೆಸಿದರು. ೧೯೭೮ರಲ್ಲಿ ಹಿಂದುಳಿದ ಜಾತಿಗಳಿಗೆ ಉದ್ಯೋಗ ಮೀಸಲಾತಿ ಕಾರ್ಯಕ್ರಮವನ್ನು ಜಾರಿಗೆ ತಂದರು. ಇದು ಮತ್ತೆ ಅವರ ಸ್ಥಾನಕ್ಕೆ ಮುಳುವಾಯಿತು. ನಂತರದ ಜನತಾ ಪಕ್ಷದ ಒಡಕಿನ ರಾಜಕಾರಣದಲ್ಲಿ ಹೆಚ್ಚು ದಿನ ಬಾಳಲಾರದೆ 'ನೇತಾಜಿ' ಎಂದೇ ಪ್ರಸಿದ್ಧರಾಗಿದ್ದ ಕರ್ಪೂರಿ ಠಾಕೂರ್ ೧೯೮೮ರಲ್ಲಿ ನಿಧನ ಹೊಂದಿದರು.

**–ಡಿ.ಎಸ್. ನಾಗಭೂಷಣ**

ಯುವ ಸಮಾಜವಾದಿ ಚಿಂತನ ವೇದಿಕೆ

# ಭಾರತವನ್ನು ಹತ್ತಿರವಾಗಿಸಿದ ಅಮೆರಿಕಾ...

–ಎಸ್. ಆರ್. ಅವಿನಾಶ್




**ಈ** ದಿನ, 'ಅಮೆರಿಕನ್ ಡ್ರೀಮ್' ಎನ್ನುವುದು ಒಬ್ಬ ಅಮೆರಿಕನ್ನನಿಗೆ ಎಷ್ಟು ಪ್ರಸ್ತುತವೋ ಅದಕ್ಕೆ ನೂರಂಶ, ಭಾರತದಲ್ಲಿ ಕುಳಿತು ಅಮೆರಿಕಾದ ಕನಸು ಕಾಣುವ ಒಬ್ಬ ಯುವಕನಿಗೆ ಪ್ರಸ್ತುತವಾಗಿಬಿಟ್ಟಿದೆ.. ಒಂದು ಕಾಲದಲ್ಲಿ ಕೆಲವೇ ಜನರು ಕಂಡು ಬಂದು ವರ್ಣಿಸುತ್ತಿದ್ದ ಆ ಇಂದ್ರನ ಅಮರಾವತಿ, ೨೦೧೬ರ ಈ ಹೊತ್ತಿನಲ್ಲಿ ಬರೀ ಒಂದೇ ದಿನದಲ್ಲಿ ತಲುಪಿಬಿಡಬಲ್ಲ ಜಾಗ. ಪ್ರತಿಯೊಂದು ಮನೆಯ ಮಗಳು, ಅಳಿಯ, ಮಗ, ಸೊಸೆ ಇರುವಂತಹ, ಹೆಚ್ಚೂ ಕಮ್ಮಿ ಯಾವುದೇ ನಗರಗಳ ಪಾರ್ಕಿನಲ್ಲಿ ವಾಕಿಂಗ್ ಹೋಗುವ ವೃದ್ಧರು ಈಗಾಗಲೇ ಸುತ್ತಿ ಬಂದಿರುವ ಯಃಕಶ್ಚಿತ್ ಸ್ಥಳ. ಆದರೂ ಅಮೆರಿಕಾ ನಮ್ಮ ದೇಶದ ಸಾಮಾನ್ಯನ ಮೇಲೆ ಬೀರುವ ಪ್ರಭಾವ ಅಗಾಧವಾದುದು.

ನಮ್ಮ ಮನೆ ಎದುರು ಚುರುಕಾಗಿ ಓಡಾಡಿಕೊಂಡು ಅಲ್ಲಿ ಇಲ್ಲಿಂದ ಕಸ ಹುಡುಕಿ ತಂದು ಗೊಬ್ಬರ ಮಾಡುವುದನ್ನೇ ಮುಖ್ಯ ಕಾಯಕ ಮಾಡಿಕೊಂಡಿದ್ದ ಅಜ್ಜನಿಗೆ, ನಾನು ಅಮೆರಿಕಾಗೆ ಹೊರಟ ದಿನ ಹೇಳಿ ಬರೋಣವೆಂದು ಹೋದೆ. ಅಜ್ಜ ಕಿಂಚಿತ್ತೂ ಆಶ್ಚರ್ಯ ವ್ಯಕ್ತಪಡಿಸದೇ "ಎಲ್ಲಿ, ಕ್ಯಾಲಿಫೋರ್ನಿಯಾಕ್ಕಾ?" ಎಂದರು. ತನ್ನ ಬಗೆಗಿನ ಕನಸಿನ ಬೀಜಗಳನ್ನು ಇಷ್ಟು ವ್ಯಾಪಕವಾಗಿ ಎಲ್ಲೆಡೆ ಚೆಲ್ಲಿರುವ ಅಮೆರಿಕಾ ದೇಶದ ಬಗೆಗಿನ ನನ್ನ ಕಲ್ಪನೆಗಳೂ ಕೂಡ ಯಾರಿಗಿಂತಲೂ ಭಿನ್ನವಾಗಿರಲಿಲ್ಲ. "ಇಲ್ಲೇನಿದೆ? ಬರೀ ರಾಜಕೀಯ. ಪ್ರತಿಭೆಗಳ ಮೊಗ್ಗು ಅರಳುವ ಮುನ್ನವೇ ಮೊಟಕುವವರೇ" ಎಂದು ಉಡಾಫೆಯ ಮಾತನಾಡುತ್ತಲೇ ಕಾಲ ತಳ್ಳುತ್ತಲಿದ್ದ ನನಗೆ, ಅಮೆರಿಕಾಗೆ ಹಾರುವ ಅವಕಾಶ ದಕ್ಕಿಸಿಕೊಳ್ಳುವುದೂ, ಹೋಗಲೇಬೇಕೆಂದು ನನಗೆ ನಾನೇ ಸಮಜಾಯಿಷಿ ಕೊಟ್ಟುಕೊಳ್ಳುವುದೂ ಕಷ್ಟವಾಗಲಿಲ್ಲ.

ಅಲ್ಲಿಗೆ ಹೋದ ನಂತರ ನನ್ನ ಅಮೆರಿಕನ್ ಗೆಳತಿಯೊಬ್ಬಳು "ಭಾರತದಿಂದ ಬಂದ ನಿನಗೆ ಅಮೆರಿಕಾ ಕೊಟ್ಟ ಅತಿ ದೊಡ್ಡ 'ಕಲ್ಚರಲ್ ಶಾಕ್' ಯಾವುದು?" ಎಂದು ಕೇಳಿದಳು. ನಾನು: "ಇಷ್ಟು ಜನ ಭಾರತೀಯರನ್ನು ಇಲ್ಲಿ ಕಾಣುತ್ತೇನೆ ಎಂದುಕೊಂಡಿರಲಿಲ್ಲ" ಎಂದೆ. ಅವಳು ನಗುತ್ತಾ "ಹೌದೌದು. ಭೌತಿಕ ಸುಖವನ್ನು ಅರಸಿ ಬರುವವರಿಗೆ ಅಮೆರಿಕಾವೇ ಅಂತಿಮ ನಿಲ್ದಾಣ" ಎಂದು ಒಂದೇ ಮಾತಲ್ಲಿ ನಮ್ಮ ಜನರನ್ನು stereotype ಮಾಡಿಬಿಟ್ಟಳು. ಯಾವುದೇ ಪೂರ್ವಾಗ್ರಹಗಳಿಲ್ಲದೇ ಆ ದೇಶದ ರೀತಿ ನೀತಿಗಳನ್ನು ಸೂಕ್ಷ್ಮವಾಗಿ ಭಾರತದ ನಮ್ಮ ದೈನಂದಿನ ಬದುಕಿಗೆ ಹೋಲಿಸಿ ನೋಡಿದಾಗ, ನಮ್ಮ ಕನಸಿನ ಅಮೆರಿಕಾಗೂ ವಾಸ್ತವದ ಅಮೆರಿಕಾಗೂ ಮಧ್ಯೆ ಇರುವ ವೈರುಧ್ಯ ಗೋಚರವಾಗುತ್ತದೆ. ಭಾರತೀಯ ಸಂಸ್ಕೃತಿಯ ಮುಂದೆ ಮತ್ಯಾವುದೂ ಇಲ್ಲ ಎಂಬ ವಾದವನ್ನು ನಂಬುವವನು ನಾನಲ್ಲ. ಆದರೂ ಗಾಂಧೀ, ನೆಹರೂರಂತಹ ಎಷ್ಟೋ ನಾಯಕರ ಮುಂದಾಲೋಚನೆ ಮತ್ತು ಅವರ ಗಟ್ಟಿಯಾದ ಸೈದ್ಧಾಂತಿಕ ತಳಹದಿಯ ಮೇಲೆ ರೂಪುಗೊಂಡಿರುವ ನಮ್ಮ ದೇಶ, ಎಲ್ಲ ವಿಷಯಗಳಲ್ಲಿ ಅಲ್ಲದೇ ಹೋದರೂ ಕೆಲವು ಅತಿ ಮುಖ್ಯ ವಿಷಯಗಳಲ್ಲಿ ಜಗತ್ತಿನ ಎಲ್ಲರೂ ಮಾದರಿ ಎಂದುಕೊಳ್ಳುವ ಅಮೆರಿಕಾಗಿಂತ ತುಂಬಾ ವಾಸ್ತವವಾದಿ(ಪ್ರ್ಯಾಕ್ಟಿಕಲ್) ಆಗಿದೆ.

ಜನರು, ತಮ್ಮ ಮನೆ ಮತ್ತು ಕೆಲಸ ಅಥವಾ ಮನರಂಜನಾ ತಾಣಗಳ ನಡುವೆ ಎಷ್ಟು ಸುಗಮವಾಗಿ ಓಡಾಡುತ್ತಾರೆ ಎನ್ನುವುದು ಒಂದು ದೇಶದ ಬೆಳವಣಿಗೆ ಮತ್ತು ಅಲ್ಲಿನ ಜನರ ಸರಾಸರಿ ನೆಮ್ಮದಿಯನ್ನು ಅಳೆಯುವ ಮಾಪನ. ಯೂರೋಪು ಮತ್ತು ಏಷ್ಯಾದ ಅನೇಕ ದೇಶಗಳು ಈ ನಿಟ್ಟಿನಲ್ಲಿ ಜನ ಸಾಮಾನ್ಯರಿಗೆ ಉತ್ತಮವಾದ ಸಮೂಹ ಸಾರಿಗೆ ಸೌಲಭ್ಯವನ್ನು ಕಲ್ಪಿಸಿವೆ. ಭಾರತ ಈ ನಿಟ್ಟಿನಲ್ಲಿ ಉತ್ತಮ ಎಂದು ಹೇಳಲಾಗದಿದ್ದರೂ ನಾವು ನಮ್ಮ ನಗರ ಪಟ್ಟಣಗಳನ್ನು ಕಟ್ಟಿಕೊಂಡು ಬಂದಿರುವ ರೀತಿ ಮನುಷ್ಯನನ್ನು ಸ್ವಾವಲಂಬಿಯಾಗಿ ಬದುಕಲು ಬಿಡುತ್ತದೆ. ಬಹುತೇಕ ನಮ್ಮ ನಗರಗಳಲ್ಲಿ, ನಮ್ಮ ಗ್ರಹಚಾರ ಕೆಟ್ಟು ಬಸ್ಸು ಆಟೋ ಸಿಗದೇ ಹೋದರೂ ನಮ್ಮ ಸ್ವಂತ ವಾಹನ ಇಲ್ಲದಿದ್ದರೂ ಯಾರದಾದರೂ ಬೈಕಿನ ಹಿಂದಿನ ಸೀಟಿಗೆ ಹಾರಿ ನಮ್ಮ ಜಾಗ ಸೇರಿಬಿಡಬಹುದು! ಆದರೆ ಅಮೆರಿಕಾ ಇಂತಹ ಸಾಧ್ಯತೆಗಳನ್ನು ತನ್ನ ಸೂಪರ್ ಹೈವೇಗಳು ಮತ್ತು ಬೃಹತ್ ಕಾರುಗಳಿಂದ ಹೊಸಕಿಹಾಕಿದೆ. ಈ ಪಟ್ಟಣ ಕಾರು ಇಲ್ಲದವರಿಗಲ್ಲ ಎಂದು ಮೊದಲ ಬಾರಿಗೆ ಅನಿಸಿದ್ದು ವರ್ಜೀನಿಯಾದಲ್ಲಿದ್ದ ನನ್ನ ಮನೆಯಿಂದ ಆಫೀಸಿಗೆ ನಡೆದು ಹೋಗಲು ತೀರ್ಮಾನಿಸಿದಾಗ. ನನ್ನ ಅಪಾರ್ಟ್‌ಮೆಂಟ್‌ನಿಂದ ಹೊರಬಂದ ನನಗೆ ಆಶ್ಚರ್ಯವಾಗುವಂತೆ ಮಾಡಿದ್ದು ಮೂರು ಮೂರು ಲೇನುಗಳ ಆ ರಸ್ತೆಯ ಎರಡೂ ಬದಿಯಲ್ಲಿ ನಡೆಯಲು ಒಂದಡಿ ಜಾಗವೂ ಇಲ್ಲದ್ದು! ಕಾಂಕ್ರೀಟು ಮುಗಿದೊಡನೆಯೇ ರಸ್ತೆಯ ಉದ್ದಕ್ಕೂ ಹುಲ್ಲು ಬೆಳೆದ ಒಂದು ಕೊರಕಲು. ಹೇಗೋ ಧೈರ್ಯ ಮಾಡಿ ಆ ರಸ್ತೆಯ ಮೇಲೆ ನಡೆಯಲು ಶುರುಮಾಡಿದರೆ, ಎರಡೂ ಬದಿಯ ವಾಹನ ಸವಾರರು ಕಾಡು ಪ್ರಾಣಿಯನ್ನು ಊರಲ್ಲಿ ನೋಡಿದ ಹಾಗೆ ನೋಡುವ ನೋಟವನ್ನು ಎದುರಿಸಬೇಕು. ನಮ್ಮ ಪಕ್ಕದಲ್ಲೇ ಸದ್ದೇ ಮಾಡದೆ ಮಹಾವೇಗದಲ್ಲಿ ಸಾಗುವ ಕಾರುಗಳಿಂದ ಕ್ಷಣ ಕ್ಷಣವೂ ಬೆಚ್ಚಿಬೀಳಬೇಕು. ನನ್ನನ್ನು ಆ ರಸ್ತೆಯಲ್ಲಿ ಕಂಡ ಪರಿಚಯದವರೊಬ್ಬರು, "ನೀನು ಅಲ್ಲಿ ನಡೆದು ಬಂದರೆ ಒಂದು ದಿನ ಯಾರಾದರೂ ನಿನ್ನ ಮೇಲೆ ಗಾಡಿ ಹರಿಸಿ ಹೋಗುವುದೇ ಸರಿ" ಎಂದರು! ನಾನು ಕಂಡಿರುವ ೧೪ ರಾಜ್ಯಗಳಲ್ಲಿ ಹೆಚ್ಚೂ ಕಡಿಮೆ ಇದೇ ಹಣೆಬರಹ. ತಮ್ಮ ಪೆಟ್ರೋಲ್ ಶಕ್ತಿಯನ್ನೇ ನಂಬಿಕೊಂಡು ಎಲ್ಲವನ್ನೂ ಎಲ್ಲದರಿಂದ ಮೈಲುಗಟ್ಟಲೇ ದೂರದಲ್ಲಿ ಕಟ್ಟಿಕೊಂಡಿರುವ ಅಮೆರಿಕನ್ನರು, ಕಾರುಗಳಿಲ್ಲದಿದ್ದರೆ ವಿಕಲಾಂಗರಾಗುತ್ತಾರೆ. ಕಾರುಗಳಿಗಾಗಿಯೇ ಮಾಡಿದ ದೇಶ ಅಮೆರಿಕಾ.

ನಾನು ಕಂಡ ಹಾಗೆ, ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ತೋರ್ಪಡಿಸದೇ, ಅದನ್ನು ಯಾರ ಮೇಲೂ ಸ್ವಲ್ಪವೂ ಹೇರದೇ, ತಮ್ಮೆದುರಿಗೆ ಕುಳಿತ ಮನುಷ್ಯನನ್ನು ಗೌರವಿಸುವುದೂ, ಆತನನ್ನು ಖುಷಿ ಪಡಿಸುವುದೂ ಅಮೆರಿಕನ್ನರಿಗೆ ಸಿದ್ಧಿಸಿರುವ ಒಂದು ಕಲೆ. ಭಾರತದಲ್ಲಿ ಇದನ್ನು ನಾನು ಅಷ್ಟಾಗಿ ನೋಡಿಲ್ಲ. ನನ್ನನ್ನು ಕೆಲಸಕ್ಕಾಗಿ ಸಂದರ್ಶಿಸಿ, ನಂತರ ನನ್ನ ಕೆಲಸವನ್ನೂ ಪ್ರಾಜೆಕ್ಟ್‌ಗಳನ್ನೂ ಮೆಚ್ಚಿಕೊಂಡು ನನ್ನನ್ನು ಯಾವಾಗಲೂ ವಿಶ್ವಾಸದಿಂದ ಕಾಣುತ್ತಿದ್ದ ನನ್ನ ಅಮೆರಿಕನ್ ಮ್ಯಾನೇಜರ್‌ಗೆ, ಬಿಳಿಯರನ್ನು ಬಿಟ್ಟು ಬೇರಾವ ಜನಾಂಗದವರನ್ನು ಕಂಡರೂ ಅಷ್ಟಕ್ಕಷ್ಟೆ. ಅವರಿಗೆ ಡೊನಾಲ್ಡ್ ಟ್ರಂಪ್ ಅಚ್ಚುಮೆಚ್ಚು ಎಂದು ಗೊತ್ತಾಗಿದ್ದು ಅವರು ನನ್ನ ಫೇಸ್‌ಬುಕ್ಕಿಗೆ ಸೇರಿದ ನಂತರವೇ! ಜಾತಿ, ಮೀಸಲಾತಿ ಇಂಥವನ್ನು ಆಧಾರವಾಗಿಟ್ಟುಕೊಂಡು ಭಾರತವನ್ನು ತೆಗಳುವ, ಇಂಥವೇ ಮೌಲ್ಯಗಳನ್ನು ಅಮೆರಿಕಾದಲ್ಲಿ ಗುರುತಿಸದೇ, ಕುರುಡಾಗಿ ಅದನ್ನು ಅತಿಯಾಗಿ ಹೊಗಳುವ ಭಾರತೀಯರ ದೊಡ್ಡ ಪಡೆಯೇ ಪ್ರಪಂಚದೆಲ್ಲೆಡೆ ಇದೆ. ಆದರೆ ಭಾರತವು ಅಮೆರಿಕಾದಷ್ಟು ಮುಖವಾಡಗಳನ್ನು ಹೊಂದಿಲ್ಲ ಎನ್ನಬಹುದು.

ಭಾರತದಲ್ಲಿ ಹೆಚ್ಚುತ್ತಿರುವ ಧಾರ್ಮಿಕ ಅಸಹನೆಯ ಬಗ್ಗೆ ಯೋಚಿಸಿ ಕೊಂಚ ಖಿನ್ನನಾಗಿದ್ದ ಸಮಯದಲ್ಲಿ ಒಂದು ಉಬರ್ ಟ್ಯಾಕ್ಸಿ ಹಿಡಿದೆ. ಸಾಮಾನ್ಯವಾಗಿ ಈ ಟ್ಯಾಕ್ಸಿಗಳನ್ನು ಓಡಿಸುವವರು ಬೇರೆ ಬೇರೆ ದೇಶಗಳಿಂದ ಬಂದಿರುತ್ತಾರಾದ್ದರಿಂದ ಅವರ ದೇಶದ ಬಗ್ಗೆ ಕೇಳುವ ಕುತೂಹಲದಿಂದ ಯಾವಾಗಲೂ ಮಾತಿಗಿಳಿಯುತ್ತೇನೆ. ಮೆಡಿಟರೇನಿಯನ್ನರ ತರಹ ಕಂಡರೆ ಸಾಮಾನ್ಯವಾಗಿ ಇಸ್ರೇಲ್–ಪ್ಯಾಲಸ್ತೀನ್ ವಿಷಯ ಎತ್ತವುದಿಲ್ಲ. ಆದರೆ ಕಾರಿನಲ್ಲಿ

(೧೫ನೇ ಪುಟಕ್ಕೆ

# ಅರಣ್ಯ ಹಕ್ಕು ಕಾಯ್ದೆಯ ಸುತ್ತಮುತ್ತ...

**–ಹೊನ್ನಾಳಿ ಚಂದ್ರಶೇಖರ್**

**ಅರಣ್ಯ ಸಂರಕ್ಷಣೆಯ ಹೆಸರಿನಲ್ಲಿ ಪಾರಂಪರಿಕ ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸುವುದನ್ನು ತಪ್ಪಿಸಿ ಅವರಿಗೆ ಬದುಕುವ ಹಕ್ಕನ್ನು ಒದಗಿಸಲು ರೂಪಿಸಲಾದ ಅರಣ್ಯ ಹಕ್ಕು ಕಾಯಿದೆ ಜಾರಿಯ ಹಂತದಲ್ಲಿ ಹಲವು ಸಮಸ್ಯೆಗಳು ಸೃಷ್ಟಿಯಾಗಿ ಅದು ಗೊಂದಲದ ಗೂಡಾಗಿದೆ. ಜೀವನೋಪಾಯಕ್ಕಾಗಿ ಅರಣ್ಯ ಕಡಿದು ಸಾಗುವಳಿ ಮಾಡುತ್ತಿರುವ ಬಡಜನರ ಹಕ್ಕುಗಳನ್ನು ಗುರಾಣಿಯಾಗಿಸಿಕೊಂಡು ಹತ್ತಾರು ಎಕರೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವ ಪ್ರತಿಷ್ಠಿತರೂ ತಮ್ಮ ಹಕ್ಕುಗಳನ್ನು ಸ್ಥಾಪಿಸುತ್ತಿರುವ ಸವಾಲು ಒಂದೆಡೆಯಾದರೆ, ಬಡಜನರಿಗೆ ನೀಡಲಾಗುವ ಹಕ್ಕುಪತ್ರ ಒಡೆತನದ ಪತ್ರವಾಗದೆ ಕೇವಲ ಮಾನ್ಯತಾ ಪತ್ರವಾಗಿರುವ ವಾಸ್ತವವೂ ಕಾಯಿದೆಯ ಬಗ್ಗೆ ಹಲವು ಪ್ರಶ್ನೆಗಳನ್ನು ಎತ್ತಿದೆ. ಇದನ್ನು ಚರ್ಚಿಸುವ ಲೇಖನ ಇಲ್ಲಿದೆ–ಸಂ**




ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಅರಣ್ಯ ಹಕ್ಕು ಕಾಯ್ದೆಯನ್ನು ಜಾರಿಗೆ ತಂದಾಗ ಭೂಮಿ ಸಮಸ್ಯೆಗೆ ಅಂತೂ ಪರಿಹಾರ ಸಿಕ್ಕಿತೆಂಬ ಭಾವನೆ ಮೂಡಿತ್ತು. ಬುಡಕಟ್ಟು ಸಮುದಾಯದವರು ೫ ವರ್ಷದಿಂದ ಸಾಗುವಳಿ ಮಾಡುತ್ತಿದ್ದರೆ, ಪಾರಂಪರಿಕ ಅರಣ್ಯ ವಾಸಿಗಳು ೭೫ ವರ್ಷದಿಂದ ಉಳುಮೆ ಮಾಡುತ್ತಿದ್ದರೆ ಆ ಭೂಮಿಯ ಹಕ್ಕನ್ನು ಅವರಿಗೇ ಕೊಡುವ ಈ 'ಕ್ರಾಂತಿಕಾರಿ' ಕಾನೂನನ್ನು ಅನುಷ್ಠಾನ ಮಾಡಲು ಅಂದು ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರ ಆಸಕ್ತಿ ತೋರದಿದ್ದಾಗ ಬೀದಿಗಿಳಿದಿದ್ದ ಮಾಜಿ ಶಾಸಕ ಕಾಗೋಡು ತಿಮ್ಮಪ್ಪ ಅವರು ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಎಲ್ಲೆಡೆ ತಿರುಗಾಡಿ ಜನರಿಂದ ಅರ್ಜಿ ಹಾಕಿಸಿದರು. ಅವರದೇ ಸರ್ಕಾರ ಬಂದ ಮೇಲಂತೂ ಸ್ಪೀಕರ್ ಆದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ 'ಎಲ್ಲಾ ಭಾಗ್ಯ ಕೊಟ್ಟಿದ್ದೀರಿ, ಭೂಮಿ ಭಾಗ್ಯ ಕೊಡಿ' ಎಂದು  ಪದೇಪದೇ ಒತ್ತಾಯಿಸಿದರು. ಈಗ ಕಂದಾಯ ಸಚಿವರಾದ ನಂತರ ಜನರಿಗೆ ಹಕ್ಕುಪತ್ರ ನೀಡುವಂತೆ ಪದೇಪದೇ ಅಧಿಕಾರಿಗಳನ್ನು ಚುಚ್ಚುತ್ತಿದ್ದಾರೆ.

ಆದರೆ ಆಗಿರುವುದೇನು? ಈ ಕಾಯ್ದೆ ಜನರಿಗೆ ಭೂಮಿಯ ಹಕ್ಕನ್ನು ನೀಡುತ್ತದೆಯೇ? ಎಷ್ಟೋ ವರ್ಷಗಳ ಹಿಂದೆ ಅರಣ್ಯ ಭೂಮಿ ಸಾಗುವಳಿ ಮಾಡಿದ್ದವರು ಇನ್ನು ನೆಮ್ಮದಿಯಿಂದ ಇರಬಹುದೇ? ತಮ್ಮ ಸ್ವಾಧೀನಕ್ಕೆ ಬಂದ ಭೂಮಿಯನ್ನು ನಿರಂತರವಾಗಿ, ನಿರಾತಂಕದಿಂದ ಅನುಭವಿಸಬಹುದೇ? ಇಂತಹ ಹಲವು ಪ್ರಶ್ನೆಗಳಿಗೆ ಈಗ ಗೊಂದಲಪೂರಿತ ಉತ್ತರಗಳೇ ಸಿಗುತ್ತಿವೆ. ಕಾಯ್ದೆಯನ್ನು ಉತ್ಪ್ರೇಕ್ಷಿಸಿ ಜನರ ಮುಂದಿಟ್ಟವರು ಈಗ ತಡಬಡಾಯಿಸುವಂತಾಗಿದೆ.

ವಿಪರ್ಯಾಸವೆಂದರೆ ಗೇಣಿ ಪದ್ಧತಿ ಹೋಗಬೇಕೆಂದು ಹೇಳಿದ ದೇವರಾಜ ಅರಸು ಅವರ ಜನ್ಮಶತಮಾನೋತ್ಸವ ಸಂಭ್ರಮದಲ್ಲಿ ಇರುವ ರಾಜ್ಯದ ಸಾವಿರಾರು ರೈತರು ಅರಣ್ಯ ಹಕ್ಕು ಕಾಯ್ದೆ ಜಾರಿಯ ನಂತರ ನವ ಗೇಣಿದಾರರಾಗುತ್ತಿದ್ದಾರೆ. ಅರಣ್ಯ ಹಕ್ಕು ಕಾಯ್ದೆಯ ಪ್ರಕಾರ ಅರಣ್ಯ ಭೂಮಿ ಸಾಗುವಳಿ ಮಾಡುತ್ತಿರುವವನಿಗೆ ಭೂಮಿಯ ಸ್ವಾಧೀನ ಸಿಗುತ್ತದೆಯೇ ಹೊರತು ಮಾಲಿಕತ್ವ ಸಿಗುವುದೇ ಇಲ್ಲ. ಭೂಮಿಯ ಮಾಲಿಕತ್ವವು ಯಾವತ್ತೂ ಅರಣ್ಯ ಇಲಾಖೆಯ ಬಳಿಯೇ ಇರುತ್ತದೆ. ಮತ್ತೊಂದು ವಿಧದಲ್ಲಿ ಹೇಳಬೇಕೆಂದರೆ ಅರಣ್ಯ ಇಲಾಖೆಯೇ ಭೂಮಾಲೀಕ, ಸಾಗುವಳಿ ಹಕ್ಕು ಪಡೆದವನೇ ಗೇಣಿದಾರ.

ಕಾಗೋಡು ತಿಮ್ಮಪ್ಪರಿಗೆ ಸಹಜವಾಗಿಯೇ ಭೂಹೋರಾಟವೆಂದರೆ ಪ್ರೀತಿ. ಅರಸು ಅವರು ಭೂಸುಧಾರಣಾ ಕಾಯ್ದೆ ತಿದ್ದುಪಡಿ ಮಾಡಲು ಹೊರಟಾಗ ಸಂಬಂಧಪಟ್ಟ ಸಮಿತಿಯ ಸದಸ್ಯರಾಗಿದ್ದವರು ಅವರು. ಅದರಂತೆ ಅರಣ್ಯ ಹಕ್ಕು ಕಾಯ್ದೆ ಪ್ರತಿ ಇವರ ಕೈಗೆ ಸಿಕ್ಕಾಗ ಎರಡನೇ ಹಂತದ ಭೂಸುಧಾರಣಾ ಹೋರಾಟ ಎಂದೇ ತಿಮ್ಮಪ್ಪ ಭಾವಿಸಿದರು. ಅವರ ಒತ್ತಾಸೆಯಿಂದಲೇ ಇಂದು ಸಾವಿರಾರು ಜನರಿಗೆ ಈ ಕಾಯ್ದೆ ಅನ್ವಯ ಹಕ್ಕುಪತ್ರ ಸಿಗುತ್ತಿದೆ. ಆದರೆ ಆ ಹಕ್ಕುಪತ್ರ ನೀಡುತ್ತಿರುವ ಹಕ್ಕಿನ ಆಳ–ಅಗಲವೆಷ್ಟು?



**ಕಾಗೋಡು ತಿಮ್ಮಪ್ಪ**

ಸಾಗುವಳಿದಾರ ತನ್ನ ಜೀವಿತಾವಧಿಯಲ್ಲಿ ಈ ಭೂಮಿಯನ್ನು ಅನುಭವಿಸಬಹುದೇ ಹೊರತು ವಂಶಪಾರಂಪರ್ಯವಾಗಿ ತನ್ನ ಮುಂದಿನ ಪೀಳಿಗೆಗೆ ಅದನ್ನು ಹಸ್ತಾಂತರಿಸಲು ಆಗದು. ಈಗ ಸಾಗುವಳಿ ಮಾಡುತ್ತಿರುವ ರೈತನ ಮಗ ಮತ್ತೆ ಅರ್ಜಿ ಸಲ್ಲಿಸಿ ಸ್ವಾಧೀನ ಪಡೆಯಬೇಕು. ಇಷ್ಟೇ ಅಲ್ಲ. ಮಾಲಿಕತ್ವವೇ ಇಲ್ಲದ ಭೂಮಿಗೆ ಯಾವುದೇ ಬ್ಯಾಂಕ್ ಬೆಳೆ ಸಾಲ ಕೊಡುವುದು ಆಯಾ ಬ್ಯಾಂಕಿನ ಮ್ಯಾನೇಜರ್‌ನ ವೈಯಕ್ತಿಕ ನಿರ್ಧಾರದ ಮೇಲೆ ನಿಂತಿರುತ್ತದೆ. ನಷ್ಟ ಮಾಡಿಕೊಳ್ಳಬಾರದೆಂಬ ನಿಯಮ ಪಾಲಿಸುವ ಬ್ಯಾಂಕುಗಳು ಕೇವಲ ಮಾನ್ಯತಾ ಪತ್ರ ಆಧರಿಸಿ ಸಾಲ ಕೊಡಲು ಮುಂದಾಗುವುದು ಅನುಮಾನವೇ ಸರಿ. ಹಾಗಾಗಿ ಯಾವುದೇ ಸಾಲ ಸೌಲಭ್ಯಗಳ ನಿರೀಕ್ಷೆಯೂ ಇಲ್ಲದೇ ಈ ರೈತ ಉಳುಮೆ ಮಾಡಬೇಕಿದೆ.

ಇದೆಲ್ಲಾ ಕಾಗೋಡು ತಿಮ್ಮಪ್ಪ ಅವರಿಗೆ ಈಗ ಅರ್ಥವಾದಂತಿದೆ. ಇತ್ತೀಚೆಗೆ ಅವರು ಅರಣ್ಯ ಹಕ್ಕು ಕಾಯ್ದೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳುವಾಗ 'ನೀವೇನು ಮಾಲಿಕತ್ವ ಕೊಡ್ತೀರಾ? ಬರೀ ಸ್ವಾಧೀನ ಕೊಡೋಕೆ ಎಷ್ಟೆಲ್ಲಾ ಮಾಡ್ತಿರಲ್ಲಾ?' ಅಂತ ಕಿಡಿಕಾರುತ್ತಾರೆ. ಆದರೆ ಅಂತರಂಗದ ಚರ್ಚೆಯಲ್ಲಿ 'ಏನೂ ಇಲ್ಲದಾಗ ಇಷ್ಟಾದ್ರೂ ಸಿಗ್ಲಿ ಬಿಡ್ರೋ ಮಾರಾಯ' ಎನ್ನುತ್ತಾರೆ. ರೈತರಿಗೆ ಮಾತ್ರ ತಮಗೆ ಮಾಲಿಕತ್ವ ಸಿಗುವುದಿಲ್ಲ ಎಂಬ ಸಂಗತಿ ಇನ್ನೂ ಮನವರಿಕೆಯೇ ಆಗಿಲ್ಲ. ಈ ಕಾಯ್ದೆ ಪ್ರಕಾರ ರೈತನಿಗೆ ಸಿಗುವ ಹಕ್ಕು ಪತ್ರ ನಿಜ ಅರ್ಥದಲ್ಲಿ ಮಾನ್ಯತಾ ಪತ್ರ ಮಾತ್ರ.

ತಾನು ಉಳುಮೆ ಮಾಡುತ್ತಿರುವ ಭೂಮಿಯ ಮಾಲಿಕತ್ವ  ಅರಣ್ಯ ಇಲಾಖೆ ಕೈಯಲ್ಲಿದೆ ಎಂದ ಮೇಲೆ ಯಾವಾಗ ಬೇಕಾದರೂ ತನ್ನ ಹಕ್ಕು ಮರುಸ್ಥಾಪಿಸುವ ಅಧಿಕಾರ ಆ ಇಲಾಖೆಗೆ ಖಂಡಿತವಾಗಿ ಇರುತ್ತದೆ. ಅದಕ್ಕೆ ಸೂಕ್ತ ಕಾರಣ ಬೇಕಷ್ಟೇ. ಶೇ.೩೩ರಷ್ಟು ಅರಣ್ಯ ಇರಬೇಕೆಂದು ತೃತೀಯ ಜಗತ್ತಿನ ರಾಷ್ಟ್ರಗಳ ಮೇಲೆ ದೊಡ್ಡಣ್ಣಗಳು ಹವಾಮಾನ ವೈಪರೀತ್ಯಗಳ ಅನಾಹುತಗಳ ಹಿನ್ನೆಲೆಯಲ್ಲಿ ಒತ್ತಡ ಹೇರುತ್ತಿವೆ. ಆದರೆ ನಮ್ಮ ದೇಶದಲ್ಲಿ ಈಗಿರುವುದು ಶೇ.೨೩ರಷ್ಟು ಅರಣ್ಯ ಮಾತ್ರ. ಈ ಒತ್ತಡವನ್ನು ಅಕ್ಷರಶಃ ಪಾಲನೆ ಮಾಡಲು ನಮ್ಮ ಸರ್ಕಾರಗಳು ಟೊಂಕ ಕಟ್ಟಿ ನಿಂತರೆ ಏನು ಬೇಕಾದರೂ ಆಗಬಹುದು.

*****

ಮಲೆನಾಡಿನಲ್ಲಿ ಬರೀ ಒಂದೆರಡು ಎಕರೆ ಒತ್ತುವರಿ ಮಾಡಿದವರು ಮಾತ್ರ ಇಲ್ಲ ಎಂಬ ಕಟು ಸತ್ಯ ಎಲ್ಲರಿಗೂ ತಿಳಿದಿದೆ. ನೂರಾರು ಎಕರೆ ಅರಣ್ಯ ಕಡಿದು ಸಾಗುವಳಿ ಮಾಡಿಕೊಂಡಿರುವ 'ದೊಡ್ಡ ಮನುಷ್ಯ'ರೂ ಇದ್ದಾರೆ. ಅವರಿಗೆ, ಭೂಕಬಳಿಕೆ ತೆರವು ಕ್ರಮದಿಂದ ತಪ್ಪಿಸಿಕೊಳ್ಳಲು ಈ ಅರಣ್ಯ ಹಕ್ಕು ಕಾಯ್ದೆ ಗುರಾಣಿಯಂತಾಗಿರುವುದು ದುರಂತ. ಇವರೆಲ್ಲರೂ ಜನಪ್ರತಿನಿಧಿಗಳು, ಇಲ್ಲವೇ ಕೋಟ್ಯಾಧೀಶರಾದ ಪ್ರತಿಷ್ಠಿತರು.

ಅರಣ್ಯ ಇಲಾಖೆಯು ಒತ್ತುವರಿ ತೆರವು ಕಾರ್ಯಾಚರಣೆಗೆಂದು ಹೋದ ಕೂಡಲೇ ಸಣ್ಣ ಸಾಗುವಳಿದಾರರನ್ನು ಎಬ್ಬಿಸಿ ಅವರಿಂದ ಪ್ರತಿಭಟನೆ ಮಾಡಿಸಿ, ಸಚಿವ–ಶಾಸಕರ ಮೇಲೆ ಒತ್ತಡ ತಂದು ಅವರನ್ನು ಹಿಮ್ಮೆಟ್ಟಿಸುತ್ತಾರೆ. ಹೊಟ್ಟೆಪಾಡಿಗೆಂದು ಸಾಗುವಳಿ ಮಾಡಿರುವ ಒಂದೆರಡು ಎಕರೆ ಬೆಳೆ ಕೈತಪ್ಪುವ ಆತಂಕದಿಂದ ಬಡ ರೈತರು ಮಾಡುವ ಪ್ರತಿಭಟನೆಯ ಫಲ ಸಿಗುತ್ತಿರುವುದು ನೂರಾರು ಎಕರೆ ಒತ್ತುವರಿ ಮಾಡಿಕೊಂಡ ಪಟ್ಟಭದ್ರರಿಗೇ.

**(೧೭ನೇ ಪುಟಕ್ಕೆ**

# ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ-೪೭

–ಇಂದಿರಾ ಬಿ.ಕೃಷ್ಣಪ್ಪ

## ಅಗಲಿದ ನಾಯಕ : ಅಂತಿಮ ವಿದಾಯ...

**ಬೆಂ**ಗಳೂರಿನಲ್ಲಿನ ಡಾ. ಬಿ.ಆರ್. ಅಂಬೇಡ್ಕರ್‌ರವರ ಪ್ರತಿಮೆಗೆ ಕಿಡಿಗೇಡಿಗಳು, ಮದ್ಯಾಭಿಷೇಕ ಮಾಡಿ "ಹಲೋ ಅಂಬೇಡ್ಕರ್, ಯಾಕಯ್ಯ ಕೋಲ್ಡ್‌ನಲ್ಲಿದ್ದೀಯ ತಗೋ ನೀನೂ ಸ್ವಲ್ಪ" ಅಂತ್ಹೇಳ್ಬಿಟ್ಟು, ಮದ್ಯ ಸುರಿದದ್ದು ದಲಿತ ಸಂಘಟನೆಯ ಸ್ವಾಭಿಮಾನಕ್ಕೆ ಕೊಡಲಿಯೇಟು ಬಿದ್ದಂತಾಗಿತ್ತು. ರಾಜ್ಯಾದ್ಯಂತ ಪ್ರತಿಭಟನೆಗಳು ನಡೆದವು. ಅಂದಿನ ಮುಖ್ಯಮಂತ್ರಿಗಳಾದ ಶ್ರೀ ದೇವೇಗೌಡರು ಮಾತುಕತೆಗೆ ಕರೆದರು. ಮದ್ಯಾಭಿಷೇಕ ಮಾಡಿದೋನು ಸಣ್ಣ ಹುಡುಗನಲ್ಲ, ಮೆಡಿಕಲ್ ವಿದ್ಯಾರ್ಥಿ, ಅವನನ್ನು ಮತ್ತು ಪ್ರಕರಣದಲ್ಲಿ ಭಾಗಿಯಾದವರನ್ನೆಲ್ಲಾ ಬಂಧಿಸಬೇಕು ಮತ್ತು ಆತನ ತಾಯಿಯು ಸಚಿವ ಸ್ಥಾನದ ಅಧಿಕಾರ (ಶ್ರೀಮತಿ ಬಿ.ಟಿ. ಲಲಿತಾ ನಾಯಕ್) ದುರುಪಯೋಗದಿಂದ ಮಗನನ್ನು ರಕ್ಷಿಸುತ್ತಿರುವುದರಿಂದ, ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕೆಂಬ ಎರಡು ಬೇಡಿಕೆಗಳನ್ನಿಟ್ಟುಕೊಂಡು ಹೋರಾಟ ಮಾಡುತ್ತಿದ್ದ ಪ್ರೊ. ಕೃಷ್ಣಪ್ಪ ಮತ್ತು ದಸಂಸದ ೨ ಬೇಡಿಕೆಗಳ ವಿನಹ ಮುಖ್ಯಮಂತ್ರಿಗಳ ಭೇಟಿಗೆ ಸಿದ್ಧವಿರಲಿಲ್ಲ. ಮುಖ್ಯಮಂತ್ರಿಗಳು ಕರೆದ ಸಭೆಗೆ ಬಹಿಷ್ಕಾರ, ಅಹೋರಾತ್ರಿ ಧರಣಿ, ಪಂಜಿನ ಮೆರವಣಿಗೆ ಇತ್ಯಾದಿ ರೂಪದ ಪ್ರತಿಭಟನೆಗಳು, ಬಲಗೊಳ್ಳಲಾರಂಭಿಸಿದ್ದರಿಂದ ಶ್ರೀಮತಿ ಬಿ.ಟಿ. ಲಲಿತಾನಾಯಕ್‌ರವರು ರಾಜೀನಾಮೆ ಕೊಡಲೇಬೇಕಾದ ಪರಿಸ್ಥಿತಿ ಒದಗಿತ್ತು. ಈ ಘಟನೆಯ ಸಂದರ್ಭದಲ್ಲಿ ಅನೇಕ ಹಂತಗಳಲ್ಲಿ ದಸಂಸದ, ಅಂದಿನ ರಾಜ್ಯ ಸಂಚಾಲಕರು ಜನತಾದಳದೊಡನೆ ಕೈಜೋಡಿಸಿದ್ದರೆಂಬ ಶಂಕೆ ಕಾರ್ಯಕರ್ತರನ್ನು ತಲ್ಲಣಗೊಳಿಸಿತ್ತು. ಇದರೊಂದಿಗೆ ಇನ್ನು ಅನೇಕ ಪ್ರಕರಣಗಳಲ್ಲಿ, ಅವರು ತೋರಿಸಿದ ಉದಾಸೀನತೆ, ನಿರ್ಲಕ್ಷ್ಯ, ವಿಫಲತೆಯ ಕಾರಣದಿಂದ ಪ್ರಥಮ ಬಾರಿಗೆ ರಾಜ್ಯ ಸಂಚಾಲಕನನ್ನು ಆ ಸ್ಥಾನದಿಂದ ಉಚ್ಚಾಟಿಸಲಾಗಿತ್ತು. ಮತ್ತು ಸರ್ವ ಸದಸ್ಯರ ಸಭೆಯನ್ನು ಚಿತ್ರದುರ್ಗದಲ್ಲಿ ೧೯೯೬ರ ಡಿಸೆಂಬರ್ ೨೮, ೨೯ರಂದು ಕರೆಯಲಾಯಿತು. ಈ ಘಟನೆ ಪ್ರೊ. ಕೃಷ್ಣಪ್ಪನವರನ್ನು ಮಾನಸಿಕವಾಗಿ, ಬಹು ಸಂಘರ್ಷಕ್ಕೆ ಒಳಪಡಿಸಿತ್ತು.

ಈ ಎಲ್ಲಾ ರಾಜಕೀಯ ಮತ್ತು ಸಾಮಾಜಿಕ ಸ್ಥಿತ್ಯಂತರಗಳು ನಮ್ಮ ಮಗಳು ಶಾಲಿನಿಯನ್ನು ಶಿವಮೊಗ್ಗದಿಂದ ಬೆಂಗಳೂರಿನ ಡೆಂಟಲ್ ಕಾಲೇಜಿಗೆ ವರ್ಗಾವಣೆ ಮಾಡಿಸಿಕೊಳ್ಳುವ ಪ್ರಕ್ರಿಯೆಗೆ ಹಿನ್ನಡೆಯುಂಟು ಮಾಡುತ್ತಿತ್ತು. ನಮ್ಮನ್ನು ಬಿಟ್ಟು ಇರುವುದಕ್ಕೆ ಅವಳಿಗೆ ಕಷ್ಟವಾಗಿದ್ದರಿಂದ, ಆಗಾಗ ನಮಗೆ ಫೋನಾಯಿಸುತ್ತಿದ್ದಳು. ಬೆಂಗಳೂರಿಗೆ ಕರೆಯಿಸಿಕೊಳ್ಳಿ ಎಂದು ದುಃಖದಿಂದ ಒತ್ತಾಯಿಸುತ್ತಿದ್ದಳು. ಅವಳ ಅಳು ನನ್ನನ್ನು ಕರಗಿಸಿತ್ತು. ಉನ್ನತ ವ್ಯಾಸಂಗದಲ್ಲಿ ಒಂದು ವಿಶ್ವವಿದ್ಯಾಲಯದಿಂದ ಮತ್ತೊಂದು ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳಿಗೆ ವರ್ಗಾವಣೆ ಮಾಡುವುದು ಆಗ ಸರಳ ಸುಲಭವಾದ ಕೆಲಸವಾಗಿರಲಿಲ್ಲ. ಇದಕ್ಕಾಗಿ ಸರ್ಕಾರದ ಮಟ್ಟದಲ್ಲಿ ವ್ಯವಹರಿಸಬೇಕಿತ್ತು. ಮದ್ಯಾಭಿಷೇಕದ ಪ್ರಕರಣ ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿದ್ದಾಗಲೇ, ಶಾಲಿನಿಯ ಕಾಲೇಜಿನ ವಾರ್ಷಿಕ ಅವಧಿಯು ಮುಗಿದು ಅಲ್ಲಿಂದ ನಿರ್ಗಮನಕ್ಕೆ ಒಪ್ಪಿಗೆ ಪತ್ರವನ್ನು ಪಡೆಯುವ ಅವಧಿ ಕೊನೆಗೊಳ್ಳುವುದಿತ್ತು. ಅವಳ ಅಲ್ಲಿನ ತಲ್ಲಣ, ಇವರ ಇಲ್ಲಿನ ಬೇಗುದಿಯ ನಡುವೆ, ಏನೂ ಮಾಡಲಾಗದ ನಾನು, ಒಮ್ಮೆ "ಸಂಘಟನೆ – ಪಕ್ಷದ ಕರೆಗಳು ಮಾತ್ರ ನಿಮಗೆ ಕೇಳಿಸುತ್ತವೆ. ಮಗಳ ಕರೆಯೂ ನೀವು ಕೇಳಿಸಿಕೊಳ್ಳಬೇಕು" ಎಂದಿದ್ದೆ. ಏನೂ ಉತ್ತರಿಸದೆ ಮೌನವಾಗಿದ್ದರು ಕೃಷ್ಣಪ್ಪ. ಮರುದಿನ, ಸಚಿವೆಯವರು ರಾಜೀನಾಮೆ ಕೊಟ್ಟ ಸಂಗತಿ ತಿಳಿಯುತ್ತಿದ್ದಂತೆ ಶಿವಮೊಗ್ಗಕ್ಕೆ ಮಗಳ ಕೆಲಸಕ್ಕಾಗಿ ಹೊರಟಿದ್ದರು. ನನ್ನ ಮಾತು ಪರಿಣಾಮ ಬೀರಿತ್ತು. ಹಠ ತೊಟ್ಟವರಂತೆ, ಬಹಳ ಪ್ರಯತ್ನಪಟ್ಟು ಶಾಲಿನಿಗೆ ಬೆಂಗಳೂರಿನ "ರಮಾಬಾಯಿ ಅಂಬೇಡ್ಕರ್ ಡೆಂಟಲ್ ಕಾಲೇಜಿಗೆ" ವರ್ಗಾವಣೆ ದೊರಕಿತ್ತು.

ಇಲ್ಲಿ ಕಾಲೇಜಿಗೆ ಸೇರ್ಪಡೆಯಾದ ನಂತರ, ಕಾಲೇಜು ಬೆಳಿಗ್ಗೆ ಏಳು ಗಂಟೆಗೆ ಪ್ರಾರಂಭವಾಗುತ್ತಿದ್ದುದರಿಂದ ಯಲಹಂಕದಿಂದ ಅಲ್ಲಿಗೆ ಹೋಗುವುದು ಕಷ್ಟವಾದ್ದರಿಂದ ಬೆಳ್ಳಂಬೆಳಗ್ಗೆ ಕುಕ್ಸ್ ಟೌನ್‌ಗೆ ಮಗಳನ್ನು ಸ್ಕೂಟರಿನಲ್ಲಿ ಕರೆದುಕೊಂಡು ಹೋಗುತ್ತಿದ್ದರು. ನಂತರ ತಾವು ಸಿದ್ಧರಾಗಿ ಹೊರಟುಬಿಡುತ್ತಿದ್ದರು. ಬೆಂಗಳೂರಿನಲ್ಲಿದ್ದಾಗ, ಮಗಳನ್ನು ಕಾಲೇಜಿಗೆ ಬಿಟ್ಟು ಬರುವ ಕೆಲಸ ಅವರಿಗೆ ತುಂಬಾ ಖುಷಿ ಕೊಡುತ್ತಿತ್ತು.



**೧೯೯೪ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಬಿ.ಎಸ್.ಪಿ ಪರವಾಗಿ ಕಾನ್ಷಿರಾಂ ಅವರ ಜೊತೆ ಬಿ.ಕೃಷ್ಣಪ್ಪನವರಿಂದ ಪ್ರಚಾರ**

ಸ್ವತಂತ್ರ ದಲಿತ ರಾಜಕಾರಣವನ್ನು ಒಪ್ಪಿಕೊಂಡ ದಸಂಸ, ೧೯೯೪ರ ವಿಧಾನಸಭಾ ಚುನಾವಣೆಯಲ್ಲಿ ಬಿಎಸ್‌ಪಿ, ಸ್ವತಂತ್ರವಾಗಿ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲೂ ಸ್ಪರ್ಧಿಸಿತ್ತು. ಬೀದರ್ ಕ್ಷೇತ್ರದಲ್ಲಿ ಬಿಎಸ್‌ಪಿ ಅಭ್ಯರ್ಥಿಯಾಗಿದ್ದ ಜುಲ್ಫೀಕರ್ ಹಷ್ಮಿರವರು ಗೆಲುವನ್ನು ಸಾಧಿಸಿ ಕರ್ನಾಟಕದ ವಿಧಾನಸಭೆಗೆ ಹೆಜ್ಜೆ ಇಟ್ಟರು. ಈ ಗೆಲುವು ಕೃಷ್ಣಪ್ಪನವರಲ್ಲಿ ನವಚೈತನ್ಯವನ್ನು ಮೂಡಿಸಿತ್ತು. ಆದರೆ ಆ ಸಂದರ್ಭದಲ್ಲಿ, ಕಾನ್ಷಿರಾಂರವರನ್ನು ಕೃಷ್ಣಪ್ಪ ಅಭ್ಯರ್ಥಿಗಳ ಪರ ಪ್ರಚಾರಕ್ಕಾಗಿ, ಚಿತ್ರದುರ್ಗ, ಬೆಂಗಳೂರು, ಮೈಸೂರು, ಬೀದರ್ ಇತ್ಯಾದಿ ಕಡೆಗಳಲ್ಲಿ ಕರೆದುಕೊಂಡು ಓಡಾಡಿದ್ದರು. ಆಗಿನ ಚುನಾವಣಾ ಪ್ರಚಾರ ಸಭೆಯಲ್ಲಿ, ಕಾನ್ಷಿರಾಂ ರವರು ಅವರ ಭಾಷಣದಲ್ಲಿ "ಕರ್ನಾಟಕದಲ್ಲಿ ಸುಮಾರು ೨೦ ವರ್ಷಗಳಿಂದ ದಲಿತ ಸಂಘಟನೆ ಕಟ್ಟಲಾಗಿದೆ. ಆದರೆ ಅಧಿಕಾರ ಹಿಡಿಯಲಾಗಿಲ್ಲ. ಉತ್ತರ ಪ್ರದೇಶದಲ್ಲಿ ಹತ್ತು ವರ್ಷದಲ್ಲಿ ಬಹುಜನರು ಅಧಿಕಾರ ಹಿಡಿದಿದ್ದಾರೆ" ಎಂಬ ಮಾತು ಕೃಷ್ಣಪ್ಪನವರ ಮನಸ್ಸನ್ನು ಬಹುವಾಗಿ ಘಾಸಿಗೊಳಿಸಿತ್ತು. ಇದರೊಂದಿಗೆ ಕರ್ನಾಟಕದೊಳಗಿನ ಪಕ್ಷಗಳು, ಬಿಎಸ್‌ಪಿ ಬೆಳೆಯಗೊಡದಂತೆ ಮಾಡುತ್ತಿದ್ದ ಹುನ್ನಾರಗಳು, ದಸಂಸದಿಂದ ಬೇರ್ಪಡೆಯಾದ ಗುಂಪುಗಳು, ವಿವಿಧ ಪಕ್ಷಗಳ ಸೆಲ್‌ಗಳಾಗುತ್ತಿರುವುದು ಗಾಯದ ಮೇಲೆ ಉಪ್ಪು ಸವರಿದಂತಾಗುತ್ತಿತ್ತು.

ಈ ಮಾತನ್ನು ಅವರ ಆಪ್ತ ವಲಯದಲ್ಲಿ ಹಂಚಿಕೊಂಡು ಮನಸ್ಸನ್ನು ಹಗುರಗೊಳಿಸಿಕೊಂಡಿದ್ದರು. ಆದಾಗ್ಯೂ ಉತ್ತರ ಪ್ರದೇಶದಲ್ಲಿ ಬಿಜೆಪಿ ಬೆಂಬಲದೊಂದಿಗೆ ಬಿಎಸ್‌ಪಿ ಅಧಿಕಾರ ಹಿಡಿದ ಬಗ್ಗೆ ಪ್ರಸ್ತಾಪಿಸುತ್ತಾ, ದಸಂಸ ಬಿಎಸ್‌ಪಿಗೆ ಕೊಟ್ಟ ಬೆಂಬಲವನ್ನು ವಾಪಾಸು ತೆಗೆದುಕೊಳ್ಳುವ ಮಾತುಗಳನ್ನಾಡತೊಡಗಿತ್ತು. ಇದು ಕೃಷ್ಣಪ್ಪನವರಿಗೆ ಬೇಸರ ತರಿಸಿತ್ತು. ಕರ್ನಾಟಕದಲ್ಲಿ, ರಾಮಕೃಷ್ಣ ಹೆಗಡೆಯವರು ಬಿಜೆಪಿ ಬೆಂಬಲದೊಂದಿಗೆ ಸರ್ಕಾರ ಮಾಡಲಿಲ್ಲವೇ? ಕೇಂದ್ರದಲ್ಲಿ ವಿ.ಪಿ.ಸಿಂಗ್‌ರವರು ಬಿಜೆಪಿಯೊಂದಿಗೆ ಸರ್ಕಾರ ರಚಿಸಲಿಲ್ಲವೇ? ಅದನ್ನೆಲ್ಲಾ ಒಪ್ಪುವ ನಾವು, ದಲಿತರು ಬಿಜೆಪಿ ಸಹಾಯದಿಂದ ರಾಜ್ಯಭಾರ ಮಾಡುವುದು ತಪ್ಪೆಂದು ದಸಂಸದವರಿಗೇಕೆ ಕಾಣಿಸುತ್ತಿದೆ? ಎಂಬ ಪ್ರಶ್ನೆಯೊಂದಿಗೆ ರಾಜ್ಯಾದ್ಯಂತ ಸುತ್ತಿ ಬಿಎಸ್‌ಪಿಯನ್ನು ಸಮರ್ಥಿಸಿದರು.

೧೯೯೬ರ ಲೋಕಸಭಾ ಚುನಾವಣೆಯಲ್ಲಿ ಅನೇಕ ಕ್ಷೇತ್ರಗಳಲ್ಲಿ ಬಿಎಸ್‌ಪಿ ಅಭ್ಯರ್ಥಿಗಳನ್ನು ನಿಲ್ಲಿಸುವುದರೊಂದಿಗೆ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಕೃಷ್ಣಪ್ಪ ಸ್ಪರ್ಧಿಸಿದರು. ನಾನು ಚುನಾವಣಾ ತಯಾರಿಗಳನ್ನು 'ಗುಡಿಯ ಹಿಂದಿನ ಓಲಗದಂತೆ ಮಾಡುತ್ತಾ ಸಹಕರಿಸಿದ್ದೆ. ಮನೆಗೆ ಬರುವವರೊಂದಿಗೆ ಮಾತುಕತೆ, ಚುನಾವಣಾ ಸಾಮಗ್ರಿಗಳ ವಿತರಣೆ, ಫೋನ್‌ನಲ್ಲಿ ಮಾಹಿತಿಗಳನ್ನು ಕೊಡುವುದು, ಚುನಾವಣಾ ಕ್ಷೇತ್ರಗಳ ಮಾಹಿತಿ, ಅಂಕಿ ಅಂಶ, ಭೇಟಿಕೊಡಬೇಕಾದ ವಿವರಗಳು, ಚುನಾವಣಾ ಕಛೇರಿಗೆ ಸಲ್ಲಿಸಬೇಕಾದ ವರದಿ ತಯಾರಿಸಿ ಕೊಡುತ್ತಿದ್ದೆ. ಕನ್ನಡ ಪ್ರಭ ಪತ್ರಿಕೆಯ ಸಂದರ್ಶನವೊಂದರಲ್ಲಿ, ಕೃಷ್ಣಪ್ಪ ಮಾತನಾಡುತ್ತಾ "ರಾಜಕೀಯ ಹೋರಾಟ ಮತ್ತು ಅಧಿಕಾರ ಸ್ವಾಧೀನಪಡಿಸಿಕೊಳ್ಳುವುದರಿಂದ ಮಾತ್ರ ದಲಿತರ ಸಮಸ್ಯೆಗಳಿಗೆ ಪರಿಹಾರ ಸಾಧ್ಯ ಎಂಬುದನ್ನು ತಿಳಿಸುವುದಕ್ಕಾಗಿ ಮಾತ್ರ ನಾನು ಚುನಾವಣೆಗೆ



**ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಲ್ಲಿ ಬಿ. ಕೃಷ್ಣಪ್ಪ ಪರ ಪ್ರಚಾರ**

ಸ್ಪರ್ಧಿಸುತ್ತಿದ್ದೇನೆ, ಇದೇ ನನ್ನ ಗುರಿ. ಕಳೆದ ಒಂದು ವರ್ಷದಿಂದ ಬೆಂಗಳೂರಿನ ಕೊಳಚೆ ಪ್ರದೇಶಗಳಲ್ಲಿ ಓಡಾಡಿದ್ದೇನೆ. ವಿಚಾರ ಸಂಕಿರಣಗಳನ್ನು ನಡೆಸಿ, ಅವರಲ್ಲಿ ರಾಜಕೀಯ ಪ್ರಜ್ಞೆಯನ್ನು ತುಂಬಲು ಯತ್ನಿಸುತ್ತಿದ್ದೇನೆ. ದಲಿತರು, ಹಿಂದುಳಿದವರು ಮತ್ತು ಮುಸ್ಲಿಮರನ್ನು ಒಂದುಗೂಡಿಸಿ, ಪ್ರಬಲ ಶಕ್ತಿ ರೂಪಿಸಲು ಪ್ರಯತ್ನ ಮಾಡಿದ್ದೇನೆ. ಸಾರ್ವಜನಿಕ ಉದ್ದಿಮೆಗಳಲ್ಲಿ ಪರಿಶಿಷ್ಟ ಕಾರ್ಮಿಕ ಸಂಘಗಳನ್ನು ಪ್ರಾರಂಭಿಸಿ ಅವರಿಗೆ ಧ್ವನಿ ನೀಡಲು ಹೋರಾಡಿದ್ದೇನೆ. ರಾಜಕೀಯ ಪಕ್ಷಗಳು ದಲಿತರಲ್ಲಿ ಕನಸುಗಳನ್ನು ಹಂಚುವ ಕೆಲಸವನ್ನು ಮಾತ್ರ ಮಾಡುತ್ತಿವೆ. ಆ ಕನಸುಗಳು ವಾಸ್ತವವಾಗುವುದು ಅವುಗಳಿಗೆ ಬೇಕಿಲ್ಲ" ಎಂದು ಹೇಳಿದ್ದರು. ಪ್ರಜಾವಾಣಿಯ ಸಂದರ್ಶನದಲ್ಲಿ "ದಸಂಸ ಚುನಾವಣಾ ರಾಜಕೀಯಕ್ಕೆ ಇಳಿದಿರುವುದರಿಂದ ಚಳುವಳಿಗೆ ಪೆಟ್ಟು ಬೀಳುತ್ತಿದೆ ಎಂಬುದನ್ನು ನಿರಾಕರಿಸುತ್ತೇನೆ. ದಸಂಸ ಇನ್ನು ಮುಂದೆಯೂ ಸಾಂಸ್ಕೃತಿಕ ಸಂಘಟನೆಯಾಗಿ ಮುಂದುವರಿಯುತ್ತದೆ. ಸಮಿತಿಗೆ ಒಂದು ರಾಜಕೀಯ ಪಕ್ಷ ಇಲ್ಲದೆ ಇರುವುದರಿಂದ ದಸಂಸದ ಕೆಲವರು ರಾಜಕಾರಣಕ್ಕೆ ಪ್ರವೇಶಿಸುತ್ತಾರೆ. ಮುಂದುವರಿದು, "ಜಾತಿ ವ್ಯವಸ್ಥೆಯನ್ನು ಇಟ್ಟುಕೊಂಡು ಹಿಂದುಗಳೆಲ್ಲಾ ಒಂದು ಎನ್ನುವುದು ಅರ್ಥಹೀನ" ಎಂದು ಮಾತನಾಡಿದ್ದರು.

ಹೀಗಿದ್ದಾಗ್ಯೂ ಕೃಷ್ಣಪ್ಪ ಈ ಚುನಾವಣೆಯಲ್ಲಿಯೂ ಸೋಲನ್ನು ಅನುಭವಿಸಿದರು. ಚುನಾವಣೆಯ ಸಂದರ್ಭದಲ್ಲಿ ದಸಂಸದೊಳಗಿನ ಬಿರುಕುಗಳು ಮತ್ತು ದಸಂಸದ ನಾಯಕರುಗಳು, ಬೇರೆ ಪಕ್ಷದ ಬ್ಯಾಟರಿಗಳಿಲ್ಲದ ಸೆಲ್‌ಗಳಾಗುತ್ತಿರುವುದನ್ನೂ ಗಮನಿಸುತ್ತಾ, ತೀವ್ರ ನೋವನ್ನು ಅನುಭವಿಸಿದ್ದರು. ಇದರ ನಂತರ, ಚಿತ್ರದುರ್ಗದಲ್ಲಿ ನಡೆದ ಸರ್ವಸದಸ್ಯರ ಸಭೆಯಲ್ಲಿ ಅತೀವ ಸಂಕಟದಿಂದ ಮಾತನಾಡುತ್ತಾ, "ಈ ದಿನ ದುಃಖದ ದಿನ, ದಲಿತ ಶಕ್ತಿ ಒಡೆದ ದಿನ. ಈ ದೇಶದ ಜಾತಿ ವ್ಯವಸ್ಥೆ ಗೆದ್ದಿದೆ. ನಮ್ಮ ಶತ್ರು ಈ ವ್ಯವಸ್ಥೆ. ಸ್ನೇಹಿತರೇ ಆಳಕ್ಕೆ ಹೋಗಿ ನೋಡಿ, ಸಂಘಟನೆಯೊಳಗಡೆ, ಆದರ್ಶವಾದಿಗಳು, ಎಲ್ಲಾ ಕಾಲದಲ್ಲೂ ಇರುವುದಿಲ್ಲ. ಆದ್ದರಿಂದ ಲವ್ ಈಚ್ ಅದರ್" ಎಂದು ದಸಂಸದ ಪುನಃಶ್ಚೇತನಕ್ಕೆ ಕರೆ ನೀಡಿದರು. ಮತ್ತು ಈ ಸಭೆಯಲ್ಲಿ, ಶ್ರೀ ಎಂ. ಜಯಣ್ಣ ಮತ್ತು ಮಾವಳ್ಳಿ ಶಂಕರ್‌ರವರಿಗೆ ದಸಂಸದ ಸಾರಥ್ಯ ವಹಿಸಲಾಯಿತು. ಆ ಸಂದರ್ಭದಲ್ಲಿ ಸಾರಥ್ಯ ವಹಿಸಿಕೊಂಡವರು, ಕಾರ್ಯಕರ್ತರಲ್ಲಿ ಮನವಿ ಮಾಡಿಕೊಳ್ಳುತ್ತಾ "ಯಾವುದೇ ಗೊಂದಲಗಳಿಗೆ ಒಳಗಾಗದೆ ಸ್ವಚ್ಛ ಹಾಗೂ ಪ್ರಾಮಾಣಿಕತೆಯಿಂದ ಸ್ವಾಭಿಮಾನ ಚಳುವಳಿಯನ್ನು ಕಟ್ಟುವಲ್ಲಿ, ಸಂಧಾನದ ರಾಜಕಾರಣವನ್ನು ಬದಿಗಿರಿಸಿ, ಸಂಘರ್ಷಾತ್ಮಕವಾಗಿ ಜನಪರ ಚಳುವಳಿಯನ್ನು ಮುನ್ನಡೆಸುವಲ್ಲಿ ಪೂರ್ಣ ಸಹಕಾರವನ್ನು ನೀಡಲು ರಾಜ್ಯ ಸಮಿತಿ ಮನವಿ ಮಾಡಿಕೊಳ್ಳುತ್ತದೆ. ಹಾಗೂ ದಸಂಸದ ಹಿರಿಯ ಚಿಂತಕರಾದ ದೇವನೂರು ಮಹಾದೇವ ಹಾಗೂ ಡಾ. ಸಿದ್ದಲಿಂಗಯ್ಯ ಮುಂತಾದವರು ತಟಸ್ಥ ನೀತಿ ಅನುಸರಿಸದೆ, ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹ ಮನವಿ ಮಾಡುತ್ತೇವೆ" ಎಂದು ಕರೆ ನೀಡಿದ್ದರು.

ತದನಂತರದಲ್ಲಿ ಪುನಃಶ್ಚೇತನ ಸಂಘರ್ಷ ರ‍್ಯಾಲಿಗಳನ್ನು ವಿಭಾಗವಾರು, ಗುಲ್ಬರ್ಗ, ಮೈಸೂರು, ಬೆಳಗಾವಿಗಳಲ್ಲಿ ನಡೆಸಲಾಗಿತ್ತು. ಇದಕ್ಕೂ ಪೂರ್ವದಲ್ಲಿ ದಿ.೨೮.೧೧.೧೯೯೬ರಲ್ಲಿ ದಲಿತ–ಹಿಂದುಳಿದ ಅಲ್ಪಸಂಖ್ಯಾತರ ರ‍್ಯಾಲಿಯಲ್ಲಿ ಸುಮಾರು ೩ ಗಂಟೆಗಳ ಕಾಲ ಮಾತನಾಡುತ್ತ ದಸಂಸದ ಹುಟ್ಟು, ವಿಕಾಸ, ಎದುರಿಸಿದ ಸವಾಲುಗಳು, ತಂದ ಸಾಮಾಜಿಕ ಬದಲಾವಣೆ, ರಾಜಕೀಯ ತೀರ್ಮಾನಗಳನ್ನು ವಿಮರ್ಶಿಸುತ್ತಾ, ಮಾತನಾಡಿ ಸ್ವತಃ ತಾವು ಎದುರಿಸಿದ ಸಂಕಷ್ಟಗಳು, ಅವಮಾನಗಳನ್ನು ಹೇಳುತ್ತಾ, "ದಸಂಸಗೆ ಮತ್ತೆ ಚೈತನ್ಯ ಬರಬೇಕು, ಸ್ವಾಭಿಮಾನದ ಚೈತನ್ಯ, ಆತ್ಮ ಗೌರವದ ಚೈತನ್ಯ ಅನ್ಯಾಯದ ವಿರುದ್ಧ ಸೆಟೆದು ನಿಲ್ಲುವ ಚೈತನ್ಯ ಏನೇ ಬಂದರೂ ನಿಭಾಯಿಸ್ತೀನಿ ಎನ್ನುವ ಛಲ ದಸಂಸಕ್ಕೆ ಬರಬೇಕು. ಯಾರು ಈ ಬಿಡುಗಡೆಯ ರಥವನ್ನು ಎಳೀತೀನಿ ಅಂತ ತೀರ್ಮಾನ ಮಾಡ್ತಾರೋ, ಅವರು ಎಳೀಲಿ, ಹೋಗೋರು ಹೋಗಲಿ.... ಚದುರಿ ಹೋಗಿರುವ ನಮ್ಮ ಜನರನ್ನು ಸೇರಿಸ್ಕೊಂಡು ನಾವು ಶಕ್ತಿಯಾಗಿ ಬೆಳೆಯಬೇಕು. ಮೊದಲಿನ ವಿರಾಟ್ ಶಕ್ತಿಯನ್ನು ಅದು ಪಡೆದುಕೊಳ್ಳಬೇಕು" ಎಂದು ಸುಧೀರ್ಘವಾಗಿ ಮಾತನಾಡಿದ್ದರು. ತುಮಕೂರಿನ ರೆಡ್ಸ್ ಸಂಸ್ಥೆಯಲ್ಲಿ ದಿ. ೧೦.೧.೧೯೯೭ ರಲ್ಲಿನ ದಲಿತರ ವಿಮೋಚನೆ ವಿಚಾರ ಸಂಕಿರಣದಲ್ಲಿ ಮಾತನಾಡುತ್ತಾ ದಲಿತರ ಮೇಲಿನ ದೌರ್ಜನ್ಯ, ಅಸ್ಪೃಶ್ಯತೆ, ಅತ್ಯಾಚಾರಗಳನ್ನು ಅಂಕಿ ಅಂಶಗಳೊಂದಿಗೆ ಪ್ರಸ್ತಾಪಿಸುತ್ತಾ, "ಈಗ ನಾವು ದೇವಸ್ಥಾನ ಪ್ರವೇಶ ಮಾಡುವುದಕ್ಕಿಂತ, ಪಾರ್ಲಿಮೆಂಟನ್ನು ಪ್ರವೇಶ ಮಾಡಬೇಕು. ಅಧಿಕಾರ ಶಕ್ತಿಯನ್ನು ಪಡೆದುಕೊಳ್ಳಬೇಕು. ಎಲ್ಲಿಯವರೆಗೆ ಅಧಿಕಾರ ಶಕ್ತಿಯನ್ನು ಪಡೆದುಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ನಮ್ಮ ಸ್ಥಿತಿಗತಿ ಬದಲಾಗುವುದಿಲ್ಲ. ಇದನ್ನು ಪಡೆದುಕೊಂಡರೆ ಎಲ್ಲಾ ಪರಿವರ್ತನೆ ಬರಲು ಸಾಧ್ಯ. ಎಲ್ಲಾ ಪಕ್ಷಗಳು ದಲಿತರನ್ನು ಯಾವ ರೀತಿ ನಡೆಸಿಕೊಳ್ಳುತ್ತಿದ್ದಾರೆಂದರೆ ಕಟುಕ ಕುರಿಯನ್ನು ಹುಲ್ಲು ತೋರಿಸಿ ಆಕರ್ಷಣೆ ಮಾಡಿ ಕರೆದು ಕೊನೆಗೆ ಕಡಿದು ಹಾಕುವ ರೀತಿಯಲ್ಲಿದೆ. ಅಂಬೇಡ್ಕರರು, ನಾನು ಎಳೆದು ತಂದ ಈ ರಥವನ್ನು ಹಿಂದಕ್ಕೆ ತಳ್ಳಬೇಡಿ. ಭಾರತ ದೇಶದ ಎಲ್ಲಾ ಬದಲಾವಣೆಗಳಿಗೆ ರಾಜಕೀಯ ಶಕ್ತಿಯು ಒಂದು ಉಪಕರಣ. ಅದನ್ನು ಪಡೆದುಕೊಂಡು ಅಭಿವೃದ್ಧಿ ಹೊಂದಿರಿ" ಎಂದು ಮನದಾಳದ ಮಾತನ್ನು ಆಡಿದ್ದರು.

ಪುನಃಶ್ಚೇತನ ಸಂಘರ್ಷದ ರಾಜ್ಯ ಮಟ್ಟದ ರ‍್ಯಾಲಿಯನ್ನು ಬೆಂಗಳೂರಿನಲ್ಲಿ ದಿ. ೨೦.೦೨.೧೯೯೭ರಲ್ಲಿ ಆಯೋಜಿಸಿ ಬೃಹತ್ ಮೆರವಣಿಗೆ (ಚಿಕ್ಕ ಲಾಲ್ ಬಾಗ್‌ನಿಂದ, ನ್ಯಾಷನಲ್ ಕಾಲೇಜು ಮೈದಾನದವರೆಗೆ) ಮತ್ತು ಬಹಿರಂಗ ಸಭೆಯಲ್ಲಿ ಭಾಗವಹಿಸಿ, ಅಂದಿನ ಆಳುವ ಸರ್ಕಾರದ ವಿರುದ್ಧ, ಕಠಿಣವಾಗಿ ಮಾತನಾಡುತ್ತಾ 'ಕ್ರಿಯೆಯಲ್ಲಿ ಮನು, ಕೌಟಿಲ್ಯ; ಬಾಯಲ್ಲಿ ಬಸವ–ಅಂಬೇಡ್ಕರ್. ಬ್ರಾಹ್ಮಣ್ಯದ ಮನಸ್ಸು, ಮೇಲ್ಜಾತಿಗಳ ದೇಹ ಹೊಂದಿರುವ ಸರ್ಕಾರವಿದು. ದಲಿತ – ಹಿಂದುಳಿದ ಅಲ್ಪ ಸಂಖ್ಯಾತರ ಕೊರಳಿಗೆ ಉರುಳು ಹಾಕುತ್ತಿದೆ. ಅಂಬೇಡ್ಕರ್‌ರವರ ವಿಮೋಚನಾ ಜ್ಯೋತಿಯನ್ನು ದಲಿತರ ಜೋಪಡಿಗಳಿಗೆ ಒಯ್ಯಬೇಕಾದ ಹೊಣೆಗಾರಿಕೆ ನಮ್ಮ ಮೇಲಿದೆ" ಎಂದು ಕರೆ ನೀಡಿದ್ದರು. ಈ ನಡುವೆ ಎನ್.ಸಿ.ಇ.ಆರ್.ಟಿ. ಯಿಂದ ಖಜುರಾಹೋನಲ್ಲಿ ಆಯೋಜಿಸಿದ್ದ ಯುವ ಜನರ ನೃತ್ಯ ಸ್ಪರ್ಧೆಗಾಗಿ ಶ್ರೀಮತಿ ವಸುಂಧರಾ ದೊರೆಸ್ವಾಮಿ ಶಿಷ್ಯೆಯಾದ ನಮ್ಮ ಮಗಳು ಸೀಮಾಳನ್ನು, ಇಡೀ ನೃತ್ಯ ತಂಡದೊಂದಿಗೆ ಕರೆದುಕೊಂಡು ಹೋಗಿ ಭಾಗವಹಿಸಿದ್ದೆವು. ಅಲ್ಲಿ ಸೀಮಾಳಿಗೆ ಎರಡನೇ ಪ್ರಶಸ್ತಿ ದೊರಕಿತ್ತು.

ಬಿಎಸ್‌ಪಿ ಯನ್ನು ರಾಜ್ಯಾದ್ಯಂತ ಸಂಘಟಿಸುತ್ತಾ ಕೃಷ್ಣಪ್ಪನವರ ತಿರುಗಾಟ ಬಿರುಸಿನಿಂದ ಸಾಗಿತ್ತು. ವಿರಾಮವಿಲ್ಲದಂತಾಗಿತ್ತು. ಚಿತ್ರದುರ್ಗದಲ್ಲಿ, ರಾಜ್ಯಮಟ್ಟದ ಬಹುಜನರ ಬೃಹತ್ ರ‍್ಯಾಲಿಯನ್ನು ದಿ.೦೪.೦೪.೧೯೯೭ರಲ್ಲಿ ಆಯೋಜಿಸಿದರು. ಮಾನ್ಯ ಕಾನ್ಷಿರಾಂರವರು ಬೃಹತ್ ರ‍್ಯಾಲಿಯನ್ನು ಉದ್ಘಾಟಿಸಿದ್ದರು. ನಂತರದಲ್ಲಿ, ಕೇಂದ್ರದಲ್ಲಿ ಸಂಯುಕ್ತ ರಂಗ ಪತನಗೊಂಡು, ಗೊಂದಲದ ವಾತಾವರಣ ನಿರ್ಮಾಣವಾದಾಗ, ಬಿಎಸ್‌ಪಿ ತೆಗೆದುಕೊಳ್ಳಬೇಕಾದ ತೀರ್ಮಾನಗಳ ಕುರಿತು ರಾಜ್ಯ ಸಮಿತಿ ಸಭೆಯನ್ನು ನಡೆಸಿದರು. ದಕ್ಷಿಣ ಕನ್ನಡದ ಮಲ್ಪೆಯಲ್ಲಿ ನಡೆದ, ಪಾಜಕದಲ್ಲಿ ಕಲ್ಲು ಕಡಿಯುವರ ವಿರುದ್ಧ ಮಠಾಧೀಶರು, ಪರಿಸರದ ಹೆಸರಿನಲ್ಲಿ ದಲಿತರ ವಿರುದ್ಧ ಧ್ವನಿ ಎತ್ತಿದ್ದು, ದಲಿತರು ಪೋಲೀಸ್ ಠಾಣೆಗೆ ಕಲ್ಲೆಸದರೆಂಬ ಹುಸಿ ಸುದ್ದಿಯಿಂದಾದ ದಲಿತರ ಬಂಧನ ಇತ್ಯಾದಿ ದೌರ್ಜನ್ಯದ ವಿರುದ್ಧ, ಉಡುಪಿಯಲ್ಲಿ ಡಾ. ಅಂಬೇಡ್ಕರ್‌ರವರ ೧೦೬ನೇ ಜಯಂತಿಯನ್ನು ದೌರ್ಜನ್ಯ ವಿರೋಧಿ ದಿನವಾಗಿ ಆಚರಿಸಿತ್ತು. ಅದರಲ್ಲಿ ಪಾಲ್ಗೊಂಡು ಪ್ರೊ. ಕೃಷ್ಣಪ್ಪ, "ದಲಿತರ ನ್ಯಾಯಕ್ಕಾಗಿ ಚಳುವಳಿ ನಡೆಸುತ್ತಾ ಬಂದಿದ್ದೇನೆ. ಆದರೆ ದಸಂಸ ಇತಿಹಾಸದಲ್ಲಿ ಪೋಲೀಸ್ ಠಾಣೆಗೆ ಕಲ್ಲು ಹೊಡೆದ ದಾಖಲೆ ಇಲ್ಲ. ಕಲ್ಲು ಹೊಡೆಯುವ ಕೆಳಮಟ್ಟಕ್ಕೆ ಕಾರ್ಯಕರ್ತರು ಹೋಗಿಲ್ಲ. ಇದು ಸಂಘಟನೆಯನ್ನು ಒಡೆಯುವ ವ್ಯವಸ್ಥಿತ ಹುನ್ನಾರ. ಪಾಜಕದಲ್ಲಿ ಪ್ರತಿಭಟನೆ ಮಾಡಿದ ಮಠಾಧೀಶರು


೩೦೦೦ ದಲಿತ ಕುಟುಂಬಗಳ ಬಗ್ಗೆ ಯೋಚಿಸಿದ್ದಾರೆಯೇ? ಪರಿಸರವಾದಿಗಳು, ಪೇಟೆಗೆ ಬಂದು ಪೆಟ್ರೋಲ್ ಸುಡುವುದರಿಂದ ಆಗುವ ಹಾನಿಯನ್ನು ತಡೆಯಲಿ. ಸಮಾನ ಹಕ್ಕುಗಳು ಬೇಕಾದರೆ ಜಾತೀಯತೆ ಹೋಗಬೇಕು. ಜನಸಂಖ್ಯೆಯ ೨೫% ಇರುವ ದಲಿತರು ಬೌದ್ಧ ಧರ್ಮ ಸ್ವೀಕರಿಸಬೇಕು. ಅಧಿಕಾರ ಗ್ರಹಣ ಮಾಡಬೇಕು. ಜೊತೆಗೆ ಅಧಿಕಾರ ಬಂದಿದೆ ಎಂದು ನಾವು ಬೇರೆಯವರನ್ನು ತುಳಿಯಬಾರದು; ನಮಗೆ ಹೃದಯವಿದೆ. ಎಂಬುದನ್ನು ತೋರಿಸಿಕೊಡುವಂತೆ ನಡೆದುಕೊಳ್ಳಬೇಕು" ಎಂದು ಕರೆ ನೀಡಿದರು. ಉಡುಪಿಯ ಈ ಸಮಾವೇಶದಲ್ಲಿ ದಸಂಸ ಹಿರಿಯ ನಾಯಕರು, ಬಸಪದ ಮುಖಂಡರು, ಕೇರಳ ಸಂಘಟನೆಯ ಪ್ರತಿನಿಧಿಗಳು, ಬಂದರು ಮಂಡಳಿಯ ನೌಕರರ ಸಂಘದವರು ಪಾಲ್ಗೊಂಡಿದ್ದರು.

ಇದಕ್ಕೂ ಮುನ್ನ ಕೃಷ್ಣಪ್ಪ, ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕಿನಲ್ಲಿ ನಡೆದ ಜೆ. ಮಹ್ಮದ್ ಇಮಾಂ ರವರ ಕುರಿತಾದ ಪುಸ್ತಕ "ಮೈಸೂರು ಆಗ ಮತ್ತು ಈಗ" ಮತ್ತು ಜೆ. ಇಮಾಂರವರ ಜನ್ಮ ಶತಾಬ್ಧಿ ಕಾರ್ಯಕ್ರಮ ಹಾಗೂ ವಿಚಾರ ಸಂಕಿರಣದಲ್ಲಿ ಪಾಲ್ಗೊಳ್ಳಲು ತೆರಳಿದ್ದರು.

ಅದಾಗಲೇ ವಿಭಾಗವಾರು, ಡಾ. ಅಂಬೇಡ್ಕರ್‌ರವರ ರಥ ಮುನ್ನಡೆ ಜಾಥ ನಡೆಯುತ್ತಿತ್ತು. ಬೆಳಗಾವಿ ವಿಭಾಗಮಟ್ಟದ ದಾದಾ ಸಾಹೇಬ್ ಅಂಬೇಡ್ಕರ್ ದಿನಾಚರಣೆ ಗದಗ್‌ನಲ್ಲಿ ದಿ.೩೦.೦೪.೧೯೯೭ರಲ್ಲಿ ಆಯೋಜಿಸಲಾಗಿತ್ತು. ಅದಕ್ಕೆ ಕೃಷ್ಣಪ್ಪ ತೆರಳಲಿದ್ದರು. ಅವರಿಗೆ ಅಷ್ಟಿಷ್ಟು ಬಿಡುವಾದಾಗ, ಹೊತ್ತಲ್ಲದ ಹೊತ್ತಲ್ಲಿ, ಮನೆಯಲ್ಲಿ ನಿದ್ರೆಗೆ ಜಾರುತ್ತಿದ್ದರು. ಎಷ್ಟೋ ಬಾರಿ, ಮಧ್ಯಾಹ್ನ ನಾನು ಕಚೇರಿಯಿಂದ ಮನೆಗೆ ಬಂದಾಗ, ತಿರುಗಾಟ ಮುಗಿಸಿ ಬಂದ ಕೃಷ್ಣಪ್ಪ ಮಲಗಿರುತ್ತಿದ್ದರು. ಅಷ್ಟಾದರೂ ನಿದ್ರಿಸಲಿ ಎಂದು ನಾನು ನನ್ನ ಕೆಲಸಕ್ಕೆ ತೆರಳುತ್ತಿದ್ದೆ. ಊಟ ತಿಂಡಿಯ ಪ್ರಮಾಣ ಕಡಿಮೆ ಮಾಡಿದ್ದರು. ಕೆಲವೊಮ್ಮೆ ಊಟದ ಮೊದಲು ಮಾತ್ರೆ ತೆಗೆದುಕೊಳ್ಳುತ್ತಿದ್ದರು. ಅದೇನು? ಎಂದು ಕೇಳಿದರೆ 'ತಲೆನೋವಿದೆ' ಎನ್ನುತ್ತಿದ್ದರು. ತುಂಬಾ ಹಸಿವಾಗಿ ಬಂದಾಗ, ನನಗೆ ಸ್ವಲ್ಪ ಮಾತ್ರ ಊಟ ಹಾಕಿಕೊಡು ಎನ್ನುತ್ತಿದ್ದರು. ಮಕ್ಕಳಿಗೆ, "ಅಮ್ಮಾ ಒಬ್ಬಳೇ ಕೆಲಸ ಮಾಡಬೇಕೆ? ನೀವು ಸಹಾಯ ಮಾಡಿ" ಎಂದು ಗದರುತ್ತಿದ್ದರು. ಶಾಲಿನಿಯ ಗೆಳತಿ ಸವಿತಾಗೆ, ಅಕ್ಕರೆಯಿಂದ ಮಾತನಾಡಿಸಿ, ಅವರು ಹೋಗುವ ದಾರಿಯಲ್ಲಿದ್ದ ಅವಳ ಮನೆಗೆ ಬಿಟ್ಟು, ಮುಂದೆ ತೆರಳುತ್ತಿದ್ದರು. ಮಗಳು ಸೀಮಾಳ ಫೋನ್ ಬಂದಾಗ, ಆತುರದಿಂದ ಮಾತನಾಡಿಸಿ, ನಂತರ ನನಗೆ ಕೊಡುತ್ತಿದ್ದರು. ಸಹೋದರ ಮಾರುತಿಗೆ ಇದ್ದ ಸಕ್ಕರೆ ಕಾಯಿಲೆ ಬಗ್ಗೆ ವಿಚಾರಿಸಿಕೊಳ್ಳುತ್ತಿದ್ದರು.

ಸತತವಾಗಿ ಓಡಾಡುತ್ತಿದ್ದ ಕೃಷ್ಣಪ್ಪನವರು, ಮನೆ ಬಿಡುವ ಪೂರ್ವದಲ್ಲಿ, ನಾನು ಎಲ್ಲಿಯೇ ಇರಲಿ, "ಇಂದೂ ಬರ್ತೀನಿ" ಎಂದು ಹೇಳಿಹೋಗುತ್ತಿದ್ದರು. ಏಪ್ರಿಲ್ ತಿಂಗಳಲ್ಲಿ, ಹಾಗೆ ಹೇಳಿ ಕೃಷ್ಣಪ್ಪ ಹೋಗುತ್ತಿರುವಾಗ ನನ್ನ ಮನಸ್ಸು, ನನಗೆ ಕೂಗಿ ಹೇಳುತ್ತಿತ್ತು. "ಬಾಗಿಲವರೆಗೆ ಹೋಗಿ ನೋಡಿ ಬಾ, ಅವರಿನ್ನು ಸಿಗೋಲ್ಲ" ಅಂತ. ಹಾಗೆ ಮನಸ್ಸು ಹೇಳಿದಾಗಲೆಲ್ಲಾ, ನಾನು, ಕೈಲಿದ್ದ ಕೆಲಸ ಬಿಸಾಕಿ, ಬಾಗಿಲವರೆಗೆ – ಗೇಟಿನವರೆಗೆ ಹೋಗಿ, ಕಾರಿನಲ್ಲಿ ಕೂತು ಹೊರಟ ಕೃಷ್ಣಪ್ಪನನ್ನು ನೋಡಿ ಬಂದಿದ್ದೇನೆ. ರಾತ್ರಿ ಬಹಳ ಹೊತ್ತಿನವರೆಗೆ ಅವರು ಬಾರದೆ ಇದ್ದಾಗ, ತಳಮಳ ಗೊಂಡಿದ್ದೇನೆ. ಚಿತ್ರದುರ್ಗದ ಜಯಣ್ಣನವರಿಗೆ ಫೋನ್ ಮಾಡಿದ್ದೆ. ಉಡುಪಿ ಕಾರ್ಯಕ್ರಮಕ್ಕೆ ಹೋದವರು ಎರಡು ದಿನವಾದರೂ ಬಾರದೆ ಇದ್ದಾಗ, "ನೀವೊಂದು ಫೋನು ಮಾಡಬಾರದೆ ನನಗೆ" ಎಂದು ಆತಂಕವನ್ನು ವ್ಯಕ್ತ ಪಡಿಸಿದ್ದೆ.

ಗದಗದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಹೋದರೆ, ಅಲ್ಲಿ ಮೈತ್ರಾ ಚಂದ್ರುವನ್ನು ನೋಡಿ ಬನ್ನಿ ಎಂದಿದ್ದೆ. ಗದಗದ ಅಂಬೇಡ್ಕರ್ ಜನ್ಮದಿನಾಚರಣೆಗಾಗಿ, ಕೃಷ್ಣಪ್ಪ ದಿ. ೨೯.೦೪.೧೯೯೭ರಂದು ಸಂಜೆ ಸುಮಾರು ೬.೦೦ ಗಂಟೆಗೆ ಮನೆಯಿಂದ ಹೊರಟಿದ್ದರು. ಎಂದಿನಂತೆ ನಾನು ಬಾಗಿಲವರೆಗೆ ಬಂದಿದ್ದೆ. ಸವಿತಾಳನ್ನು ಅವಳ ಮನೆಗೆ ಬಿಟ್ಟು ತೆರಳಿದ್ದರು. ಗದಗಕ್ಕೆ ನೇರ ಬಸ್ ಸಿಕ್ಕದೆ, ಟ್ರೈನ್ ಬುಕ್ಕಿಂಗ್ ಇಲ್ಲದೆ, ಹುಬ್ಬಳ್ಳಿಯವರೆಗೆ ಬಸ್‌ನಲ್ಲಿ ತೆರಳಿ, ನಂತರ ಇನ್ನೊಂದು ಬಸ್ ಮೂಲಕ, ಗದಗ ಕಾರ್ಯಕ್ರಮಕ್ಕೆ ತೆರಳಿದ್ದರು. ಮರುದಿನ ಬೆಳಗ್ಗೆ ಬಂದ ಅವರ ವಾಹನ ಚಾಲಕನಿಂದ, ಅವರ ಹೇಗೆ ತೆರಳಿದರು ಎಂಬ ಮಾಹಿತಿ ಪಡೆದಿದ್ದೆ. ನಾನು ಎಂದಿನಂತೆ ಕಛೇರಿ ಕೆಲಸಕ್ಕೆ ಹೋಗಿದ್ದೆ. ಮಧ್ಯಾಹ್ನ ಸುಮಾರು ೨.೪೫ ಗಂಟೆಗೆ ನಮ್ಮ ಮೈತ್ರೇಯಿ ಕಚೇರಿಗೆ ಫೋನ್ ಮಾಡಿ "ಅಕ್ಕಾ, ಮಾಮಂಗೆ ಹುಷಾರಿಲ್ಲ ಆಸ್ಪತ್ರೆಗೆ ಸೇರಿಸಿದ್ದೀವಿ. ಗಾಬರಿ ಆಗಬೇಡಿ" ಅಂದ್ಳು. ನನಗೆ ಏನು ಉತ್ತರಿಸಲು ಆಗಲೇ ಇಲ್ಲ. ಸೀದಾ ಮನೆಗೆ ಬಂದು ಅವಳು ಕೊಟ್ಟ ಫೋನ್ ನಂಬರಿಗೆ ಫೋನ್ ಮಾಡಿದೆ. ಅವಳು ಎಷ್ಟೇ ಸಮಾಧಾನಕರವಾಗಿ ಮಾತನಾಡಿದ್ರು



**ಕೃಷ್ಣಪ್ಪನವರ ನಿಧನದ ಸಂದರ್ಭದಲ್ಲಿ ಹರಿಹರದಲ್ಲಿ ಸೇರಿದ್ದ ಜನಸ್ತೋಮ**

ನನಗೆ ದುಃಖ ತಡೆಯಲಿಕ್ಕಾಗದೆ, ಮಾತೇ ಹೊರಡದಾಗಿತ್ತು. ಅವಳು ಹೇಳಿದ ವಿಳಾಸ, ಫೋನ್ ನಂಬರ್ ಬರೆದುಕೊಂಡೆ. ತಿರುಗಿ ಕಛೇರಿಗೆ ಹೋಗಿ ರಜೆ ಚೀಟಿ ಬರೆದುಕೊಟ್ಟು ಅಂದಿನ ಬಿ.ಎಸ್.ಪಿ.ಯ ಉಪಾಧ್ಯಕ್ಷರಾದ ಮಾರಸಂದ್ರ ಮುನಿಯಪ್ಪನವರಿಗೆ ಫೋನ್ ಮಾಡಿದೆ. ಅವರು ಸಿಕ್ಕಲಿಲ್ಲ. ಒಮ್ಮೆ ಕೃಷ್ಣಪ್ಪ ಟ್ರಾವೆಲ್ಸ್ ಒಂದರ ಫೋನ್ ನಂಬರನ್ನು ಸಂಪರ್ಕಿಸಿ ಕಾರು ತೆಗೆದುಕೋ ಎಂದಿದ್ದ ನಂಬರಿಗೂ ಫೋನ್ ಮಾಡಿದೆ. ಅವರೂ ಬೇರೆ ಕಡೆ ಹೋಗಿದ್ದಾರೆಂದು ತಿಳಿದು ಬಂದಿತು. ಯಲಹಂಕದಲ್ಲಿ ಆಗ ನಗರಸಭೆಯ ಆಯುಕ್ತರಾಗಿ ಕೆಲಸ ಮಾಡುತ್ತಿದ್ದ ರುದ್ರಪ್ಪ ಹನಗವಾಡಿಯವರಿಗೆ ಫೋನ್ ಮಾಡಿದೆ. ಮಧ್ಯಾಹ್ನದ ಊಟವನ್ನು ನಮ್ಮ ಮನೆಯಲ್ಲಿ ಮಾಡಿಕೊಂಡು ಅದಾಗ ತಾನೆ ಕಚೇರಿಗೆ ತೆರಳಿದ್ದ ಹನಗವಾಡಿಯವರು ತಕ್ಷಣ ಮನೆಗೆ ಬಂದು ಮೈತ್ರೇಯಿಗೆ ಫೋನ್ ಮಾಡಿದ್ದರು. ಅವಳ ಮೂಲಕ ಕೃಷ್ಣಪ್ಪನವರನ್ನು ಸೇರಿಸಿದ್ದ ಆಸ್ಪತ್ರೆಯ ವೈದ್ಯರೊಂದಿಗೆ ಮಾತನಾಡಿದರು. ಕೃಷ್ಣಪ್ಪನವರಿಗೆ ಹೃದಯಾಘಾತವಾಗಿದೆ, ತೀವ್ರ ನಿಗಾ ಘಟಕದಲ್ಲಿದ್ದಾರೆ ಎಂಬ ವಿಷಯ ಆಗ ತಿಳಿಯಿತು. ತಕ್ಷಣ, ನಾನು, ಶಾಲು, ರುದ್ರಪ್ಪ, ಗಾಯಿತ್ರಿ, ಅದೇ ರಾತ್ರಿ ಗದಗ್‌ಗೆ ಹೊರಟೆವು. ದಾರಿ ಮಧ್ಯದಲ್ಲಿ ದಸಂಸದ ಜಯಣ್ಣ ಮತ್ತು ಮೈತ್ರೇಯಿಯೊಂದಿಗೆ ಸಂಪರ್ಕದಲ್ಲಿದ್ದೆವು.

ಮರುದಿನ ಬೆಳಿಗ್ಗೆ ೮.೦೦ ಗಂಟೆಗೆ ನಾವಲ್ಲಿಗೆ ತಲುಪಿದಾಗ ಎಂದೂ ಆಸ್ಪತ್ರೆಗಳಲ್ಲಿ ಮಲಗದ ವೈದ್ಯಕೀಯ ಬಂಧನಕ್ಕೊಳಗಾಗದ ಕೃಷ್ಣಪ್ಪ ಒಂದು ಕಡೆ ಡ್ರಿಪ್ಸ್, ಇನ್ನೊಂದು ಕಡೆ ಹೃದಯಮಾಪಕದ ಬಂದಿಯಾಗಿ, ಹಾಸಿಗೆಯಲ್ಲಿ ಮಲಗಿದ್ದರು. ಎಚ್ಚರಿಸಿದರೆ ಮತ್ತೆಲ್ಲಿ ಘಾಸಿಯಾಗುವುದೋ ಎಂದು ಹತ್ತಿರ ನಿಂತು ಮಾತನಾಡಿ, ಸಮಾಧಾನ ಮಾಡಿಕೊಳ್ಳತೊಡಗಿದೆವು. ಮೈತ್ರಾ "ಮಾವ, ಅಕ್ಕಾ, ಶಾಲು ಬಂದಿದ್ದಾರೆ ನೋಡಿ" ಎಂದು ಎಚ್ಚರಿಸಿದಳು. ಹಾಗೊಮ್ಮೆ ನಮ್ಮನ್ನೆಲ್ಲಾ



ಕೃಷ್ಣಪ್ಪನವರಿಗೆ ಮರಣೋತ್ತರವಾಗಿ ನೀಡಿದ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಯನ್ನು ಆಗಿನ ಮುಖ್ಯ ಮಂತ್ರಿ ಎಸ್.ಎಂ. ಕೃಷ್ಣ ಅವರಿಂದ ಸ್ವೀಕರಿಸುತ್ತಿರುವ ಇಂದಿರಾ ಕೃಷ್ಣಪ್ಪ

ನೋಡಿದ ಕೃಷ್ಣಪ್ಪ ಮತ್ತೆ ನಿದ್ರೆಗೆ ಜಾರಿದರು. ಹೊರಗಡೆ ಇದ್ದ ಜಯಣ್ಣನವರು ನಮ್ಮೊಡನೆ ಮಾತನಾಡುತ್ತಾ "ಐಬಿನಲ್ಲಿ ಕಾರ್ಯಕ್ರಮಕ್ಕೆ ಹೊರಡುವ ಸಿದ್ಧತೆಯಲ್ಲಿದ್ದರು. ಆಗ ಅವರಿಗೆ ಎದೆನೋವು ಕಾಣಿಸಿಕೊಂಡಿತ್ತು. ಮೈತ್ರಾ, ಚಂದ್ರು ಸೇರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಕಾರ್ಯಕ್ರಮಕ್ಕೆ ಅವರನ್ನು ಕರೆಯದೆ ನಾವು ಕಾರ್ಯಕ್ರಮ ಮುಗಿಸಿ ಬಂದು ಅವರನ್ನು ನೋಡಿದೆ. ಆವಾಗಲೂ ಚನ್ನಾಗಿ ಮಾತನಾಡಿ, "ಕಾರ್ಯಕ್ರಮ ಹೇಗಾಯಿತು ಎಂದು ಕೇಳಿದ್ದರು" ಎಂದು ದುಃಖತಪ್ತರಾದರು. ರುದ್ರಪ್ಪ ಡಾಕ್ಟರನ್ನು ಮತ್ತೊಮ್ಮೆ ಭೇಟಿಯಾಗಿ, ಬೆಂಗಳೂರಿಗೆ ಕರೆದುಕೊಂಡು ಹೋಗುವ ವಿಚಾರವನ್ನು ಕೇಳಿದ್ದಾರೆ. ಆದರೆ ಈ ಸ್ಥಿತಿಯಲ್ಲಿ ಅವರನ್ನು ಕರೆದುಕೊಂಡು ಹೋಗಲು ಆಗುವುದಿಲ್ಲವೆಂದು ಹೇಳಿದ್ದಾರೆ. ಸ್ವಲ್ಪ ಸುಧಾರಿಸಿದ ನಂತರ ಕರೆದುಕೊಂಡು ಹೋಗೋಣವೆಂದು ನಿಶ್ಚಯಿಸಿದೆವು. ಪುನಃ ವಾರ್ಡ್‌ಗೆ ವಾಪಾಸಾಗಿ, "ನಾವು ಮುಖ ತೊಳೆದು ಬರೋಣವೇ? ನೀನು ನೋಡ್ತಾ ಇರು" ಎಂದು ಮೈತ್ರೇಯಿಗೆ ಹೇಳುತ್ತಿರುವಾಗಲೇ, ಕೃಷ್ಣಪ್ಪನವರ ಉಸಿರಾಟ ವೇಗ ಪಡೆದುಕೊಂಡು, ಮತ್ತೆ ನಿಧಾನಗತಿಗೆ ತೆರಳಿತು. ಆಗ ವೈದ್ಯರನ್ನು ಕೂಗಿ ಕರೆದೆವು. ನಮ್ಮನ್ನೆಲ್ಲಾ ಹೊರಗೆ ಕಳುಹಿಸಿ ಆಕ್ಸಿಜನ್ ಸಿಲಿಂಡರ್ ಎತ್ತಿಕೊಂಡು ಹೋದರು. ಸ್ವಲ್ಪ ಸಮಯದ ಬಳಿಕ ನಾವೆಲ್ಲಾ ವಾರ್ಡ್‌ನೊಳಗೆ ಹೋದೆವು. ಸುತ್ತಲೂ ನಿಂತ ನಮ್ಮನ್ನು, ಪಕ್ಕದಲ್ಲಿದ್ದ ನನ್ನೆಡೆಗೆ ಒಮ್ಮೆ ಕಣ್ಣು ಚಲಿಸಿತು. ಅಷ್ಟೇ; ಕೃಷ್ಣಪ್ಪ ಇನ್ನಿಲ್ಲವಾದರು.

ನಮ್ಮನ್ನೆಲ್ಲಾ ದೂರ ಸರಿಸಿದ ವೈದ್ಯರು ಮತ್ತೊಮ್ಮೆ ಅವರನ್ನು ನೋಡಿ, ರುದ್ರಪ್ಪನವರನ್ನು ಕರೆದುಕೊಂಡು ಅವರ ಕೊಠಡಿಗೆ ಹೋದರು. ನಾನು ಅಲ್ಲಿಯೇ ಕುಸಿದಿದ್ದೆ. ನನ್ನ ಮುಂದೆ ಓಡಾಡುತ್ತಿದ್ದ ಜನ ಕಾಣಿಸುತ್ತಿದ್ದರೆ ವಿನಹ, ಏನು ನಡೆಯುತ್ತಿದೆ ಎಂಬುದು ತಿಳಿಯದಾಗಿತ್ತು. ಗಾಯಿತ್ರಿ, ಮೈತ್ರೇಯಿ ನನ್ನನ್ನು ಹಿಡಿದುಕೊಂಡು ನೀರು ಕುಡಿಸುತ್ತಿದ್ದರು. ಆಮೇಲೆ ಕೃಷ್ಣಪ್ಪನವರ ಹರಿಹರದ ಮನೆಯವರಿಗೆ, ದಸಂಸ, ಬಿಎಸ್‌ಪಿ ಮತ್ತು ಸರ್ಕಾರದ ಮುಖ್ಯಸ್ಥರಿಗೆ ಗೆಳೆಯರ ಬಳಗ, ಆಪ್ತರಿಗೆ, ಮಗಳು ಸೀಮಾಳಿಗೆ ಸುದ್ದಿ ಮುಟ್ಟಿಸಿದ್ದರು. ದುಃಖದ ಮಡುವಿನಲ್ಲಿಯೇ, ಆಸ್ಪತ್ರೆಯ ಮುಂದಿನ ಕಾರ್ಯಗಳನ್ನು ರುದ್ರಪ್ಪ ಮತ್ತು ಚಂದ್ರು ಮಾಡಿದ್ದರು. ಕೃಷ್ಣಪ್ಪನವರನ್ನು ಎಲ್ಲಿಗೆ ಕರೆದುಕೊಂಡು ಹೋಗುವುದು? ಬೆಂಗಳೂರಿಗಾ? ಶಿವಮೊಗ್ಗಕ್ಕಾ? ಹರಿಹರಕ್ಕಾ? ಪ್ರಶ್ನೆಗಳಿಗೆ ಸಹೋದರ ಮಾರುತಿಯ ಉತ್ತರದಂತೆ ಹರಿಹರಕ್ಕೆ ತರಲಾಯಿತು. ಅಲ್ಲಿಯೂ ಅಂತ್ಯ ಸಂಸ್ಕಾರದ ಸ್ಥಳದ ಬಗ್ಗೆ ಗೊಂದಲಗಳಿದ್ದವು. ಸರ್ಕಾರಿ ಸ್ಮಶಾನ ಅಥವಾ ಸರ್ಕಾರದಿಂದ ಆಗ ಸ್ಥಳ ಕೋರಿಕೆ ಯಾವುದೂ ಆ ಸಂದರ್ಭಕ್ಕೆ ಉಪಯುಕ್ತವಲ್ಲವೆಂದು ಎಲ್ಲರೂ ನಿಶ್ಚಯಿಸಿದ್ದರು. ಆ ಸಂದರ್ಭದಲ್ಲಿ ಹನಗವಾಡಿ ರುದ್ರಪ್ಪ ಮತ್ತು ಅವರ ಸೋದರ ತಿಪ್ಪಣ್ಣನವರು ಕೃಷ್ಣಪ್ಪನವರಿಗೆ ತಮ್ಮ ಹೊಲದಲ್ಲಿ ಪ್ರಕೃತಿಯ ನಡುವೆ ಚಿರನಿದ್ರೆಗೆ ಸ್ಥಳಾವಕಾಶ ಮಾಡಿಕೊಟ್ಟರು. ಕರ್ನಾಟಕದ ಮೂಲೆ ಮೂಲೆಯಿಂದ ಜನಸಾಗರ ಹರಿದು ಬಂತು. ಸಹಸ್ರಾರು ಜನರ ದುಃಖ, ಆಕ್ರಂದನದ ನಡುವೆ ಕೃಷ್ಣಪ್ಪನವರ ಅಂತಿಮಯಾತ್ರೆ ಮತ್ತು ಮರಳಿ ಮಣ್ಣಿಗೆ ಕಾರ್ಯ ನೆರವೇರಿತ್ತು.

ಡಾ. ಅಂಬೇಡ್ಕರ್, ಮಹಾತ್ಮ ಗಾಂಧೀಜಿ ಮತ್ತು ಬಸವಣ್ಣನವರನ್ನು ಕಳೆದುಕೊಂಡಾಗ ಜನ ಹೇಗೆ 'ಅನಾಥವಾದೆವೆಂದು' ಗೋಳಾಡುತ್ತಿದ್ದ ಚಿತ್ರಣ



ಪ್ರೊ. ಬಿ. ಕೃಷ್ಣಪ್ಪನವರ ಸಮಾಧಿ ಸ್ಥಳ 'ಮೈತ್ರಿವನ', ಹನಗವಾಡಿ

ನಾನಾಗ ಅಲ್ಲಿ ಕಂಡೆ. 'ಬಾಳ ಗಂಗೆಯ ಮಹಾಪೂರದೊಳು ಸಾವಿನೊಂದು ವೇಣಿ', 'ತುಟಿಕಚ್ಚಿ ಹಿಡಿಯದಿರೂ ದುಃಖ, ಅಳುನುಂಗಿ ನಗುವೊಮ್ಮೆ' ಎಂದ ಅಡಿಗ, ಬೇಂದ್ರೆ ಮುಂತಾದ ಕನ್ನಡ ಕವಿಗಳ ಹಾಡನ್ನು ಹಾಡುತ್ತಿದ್ದ ಕೃಷ್ಣಪ್ಪ ಅವನ್ನೆಲ್ಲಾ ನನ್ನ ನೆನಪಿಗೇ ಬಿಟ್ಟು ಹೋಗಿದ್ದರು.

*****

ಬಸಪ ಮತ್ತು ದಸಂಸದ ಪ್ರೊಫೆಸರ್‌ರವರ ಜನ್ಮ ದಿನಾಚರಣೆ ಕಾರ್ಯಕ್ರಮವು, ವಿಚಾರ ಸಂಘರ್ಷ ಜ್ಯೋತಿಯಾಗಿ ಜೂನ್ ೧೯೭೭ರಲ್ಲಿ ಒಂದು ತಿಂಗಳು ರಾಜ್ಯದಾದ್ಯಂತ ಸಂಚರಿಸಿ, ರಾಯಚೂರಿನಲ್ಲಿ ದಿ. ೩.೦೬.೧೯೭೭ರಲ್ಲಿ ಸಮಾರೋಪಗೊಂಡಿತು. ಸಂಘಟನೆಯವರು, ಚಿಂತಕರು, ಗೆಳೆಯರು, ಕುಟುಂಬದವರು ಎಲ್ಲ ಸೇರಿ ಚರ್ಚಿಸಿ, 'ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್'ನ್ನು ರಚಿಸಿಕೊಂಡು ಕೃಷ್ಣಪ್ಪನವರ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಆದರ್ಶಗಳನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ತೊಡಗಿದ್ದೇವೆ. ಕೃಷ್ಣಪ್ಪನವರ ನಿಧನದ ನಂತರ ಕಾನ್ಶೀರಾಂ ಅವರು ಬೆಂಗಳೂರಿಗೆ ಬಂದು ನಮ್ಮ ಕುಟುಂಬಕ್ಕೆ ಸಾಂತ್ವನ ಹೇಳಿದರಲ್ಲದೆ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಧನ ಸಹಾಯದ ಪ್ರಸ್ತಾಪವನ್ನು ಮುಂದಿಟ್ಟರು. ಅವರ ವಿಶ್ವಾಸಕ್ಕೆ ಕೃತಜ್ಞತೆ ಸಲ್ಲಿಸಿದ ನಾನು ಧನಸಹಾಯದ ಅಗತ್ಯವಿಲ್ಲವೆಂದು ತಿಳಿಸಿದೆ. ನಂತರ ಒಮ್ಮೆ ಬೆಂಗಳೂರಿಗೆ ಬಂದ ಅವರು ಬಿ.ಕೃಷ್ಣಪ್ಪ ಟ್ರಸ್ಟ್‌ಗೆ ೨ ಲಕ್ಷ ರೂ. ಗಳ ದೇಣಿಗೆ ನೀಡಿದರು. ಇನ್ನು ಕರ್ನಾಟಕದ ಬಹಳಷ್ಟು ಕಡೆ, ಪ್ರೊ. ಬಿ.ಕೆ. ರವರ ಹೆಸರನ್ನು, ಮಾರ್ಗಗಳಿಗೆ, ವೃತ್ತಗಳಿಗೆ, ಬಡಾವಣೆಗಳಿಗೆ, ಶಿವಮೊಗ್ಗಾದ ವಿದ್ಯಾರ್ಥಿ ನಿಲಯಕ್ಕೆ ಇಡಲಾಗಿದೆ. ಕೃಷ್ಣಪ್ಪನವರ ಗೆಳೆಯರು, 'ಗೆಳೆಯರ ಬಳಗ' ರಚಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ದಸಂಸ ಮತ್ತು ಬಸಪ ಗಳ ವಿಚಾರಗಳನ್ನಿಟ್ಟುಕೊಂಡು ಸಂಘಟನೆ ಹೋರಾಟ ಮಾಡುತ್ತಿದ್ದಾರೆ. ಹನಗವಾಡಿ ನಾಟಕ ಬಳಗ ಅವರ ಹೆಸರಿನಲ್ಲಿ ವರ್ಷಕ್ಕೊಮ್ಮೆ ನಾಟಕ ಪ್ರದರ್ಶನ ಮಾಡುತ್ತಿದೆ. ಕರ್ನಾಟಕ ಸರ್ಕಾರ ಪ್ರೊ. ಬಿ. ಕೃಷ್ಣಪ್ಪನವರ ಆದರ್ಶಗಳು, ಸಾಮಾಜಿಕ ಕಳಕಳಿ, ಸಂಘಟನೆ, ಸಮಾನತೆಗಾಗಿ ನಡೆಸಿದ ಹೋರಾಟಗಳನ್ನು ನೆನೆಯುತ್ತಾ ಅವರಿಗೆ ಮರಣೋತ್ತರವಾಗಿ ೨೦೦೨ರಲ್ಲಿ ಆಗಿನ ಮುಖ್ಯಮಂತ್ರಿ ಶ್ರೀ ಎಸ್.ಎಂ. ಕೃಷ್ಣ ಅವರು ಡಾ. ಅಂಬೇಡ್ಕರ್ ಪ್ರಶಸ್ತಿಯನ್ನು ಪ್ರಥಮವಾಗಿ ಪ್ರದಾನ ಮಾಡಿರುತ್ತಾರೆ. ಕರ್ನಾಟಕ ಸರ್ಕಾರ ಕೃಷ್ಣಪ್ಪನವರ ಹೆಸರಿನಲ್ಲಿ, ಅವರ ಸಮಾಧಿ ಸ್ಥಳ ಮೈತ್ರಿವನದಲ್ಲಿ ಪ್ರೊ. ಬಿ. ಕೃಷ್ಣಪ್ಪ ಸಾಂಸ್ಕೃತಿಕ ಭವನವನ್ನು, ಟ್ರಸ್ಟ್‌ನ ಸಹಯೋಗದಿಂದ ನಿರ್ಮಾಣ ಮಾಡುತ್ತಿದೆ.

ಕೃಷ್ಣಪ್ಪನವರ ಆತ್ಮೀಯರೂ ನಮ್ಮ ಕುಟುಂಬದ ಗೆಳೆಯರೂ ಆದ ಡಿ.ಎಸ್. ನಾಗಭೂಷಣರವರು, 'ಪ್ರೊ. ಬಿ.ಕೃಷ್ಣಪ್ಪ ನೆನಪಿನ ಲೇಖನಮಾಲೆ'ಯನ್ನು ಅವರ ಪತ್ರಿಕೆಗಾಗಿ ಬರೆಯಲು ನನಗೆ ತಿಳಿಸಿ, ನನ್ನ ಭಾವಕೋಶವನ್ನು, ಸ್ಮೃತಿಪಟಲವನ್ನು ಆರ್ದ್ರಗೊಳಿಸಿದ್ದಾರೆ; ಜಾಗೃತಗೊಳಿಸಿದ್ದಾರೆ. ಪುನರ್ವಿಮರ್ಶೆಗೊಳಪಡಿಸಿದ್ದಾರೆ. ಈ ಮೂಲಕ ಕೃಷ್ಣಪ್ಪನವರಿಗೆ ನುಡಿನಮನ ಸಲ್ಲಿಸಲು ಅವರೊಂದಿಗೆ ನನ್ನನ್ನು ಭಾಗಿಗಳಾಗಿಸಿಕೊಂಡಿದ್ದಕ್ಕೆ ಅಭಾರಿಯಾಗಿದ್ದೇವೆ. ಈ ಲೇಖನದಲ್ಲಿ ಸಂದರ್ಭಕ್ಕನುಸಾರವಾಗಿ, ಅನುಮತಿಯಿಲ್ಲದೆ ಬಳಸಿಕೊಂಡ ಗೆಳೆಯರ, ಹೋರಾಟದ ಒಡನಾಡಿಗಳ, ಬಂಧುಗಳ, ಚಿಂತಕರ, ಸಾಹಿತಿ, ಕವಿಗಳ ಹೆಸರು ಮತ್ತು ಘಟನೆಗಳಿಗಾಗಿ ಮತ್ತೆ ವ್ಯತಿರಿಕ್ತವಾಡದ ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ .

**(ಮುಗಿಯಿತು)**

**ಸಮಕಾಲೀನ**

# ಮರಳಿ ಬರಲಿದೆ ಸಮಾಜವಾದ!



೨೫ ವರ್ಷಗಳ ಹಿಂದೆ ಪ್ರಧಾನಿ ಪಿ.ವಿ. ನರಸಿಂಹರಾಯರು, ವಿಶ್ವಬ್ಯಾಂಕ್‌ನ ಮಾಜಿ ಅರ್ಥಶಾಸ್ತ್ರಜ್ಞ ಮನಮೋಹನ ಸಿಂಗ್ ಅವರ ಸಾರಥ್ಯದಲ್ಲಿ ಹೊಸ ಆರ್ಥಿಕ ನೀತಿ ಜಾರಿಗೆ ತಂದಾಗಿನಿಂದ ಭಾರತದ ರಾಜಕೀಯ ಚರ್ಚೆಗಳಿಂದ ಕಾಣೆಯಾಗಿ ಹೋಗಿರುವ ಸಮಾಜವಾದ ಎಂಬ ಶಬ್ದ ಈಗ ಮತ್ತೆ ೨೦೦೮ರ ವಿಶ್ವ ಆರ್ಥಿಕ ಹಿಂಜರಿಕೆಯ ಪರಿಣಾಮಗಳನ್ನು ಕುರಿತ ಚರ್ಚೆಗಳ ಮಧ್ಯೆ ಇಣುಕುತ್ತಾ ತನ್ನ ಪ್ರಸ್ತುತತೆಯನ್ನು ಸಾಬೀತು ಮಾಡುವ ಪ್ರಯತ್ನ ಮಾಡುತ್ತಿದೆ. ನಿರ್ದಿಷ್ಟವಾಗಿ ಭಾರತದಲ್ಲಿ ಹೊಸ ಆರ್ಥಿಕ ನೀತಿಯ ಪರಿಣಾಮಗಳಾದ ಸಂಪತ್ತಿನ ಹೆಚ್ಚಳದೊಂದಿಗೇ ನಿರ್ಮಾಣವಾಗುತ್ತಿರುವ ಆಳದ ಆರ್ಥಿಕ ಮತ್ತು ಸಾಮಾಜಿಕ ಕಂದರಗಳು ಹಾಗೂ ಅವು ಸೃಷ್ಟಿಸುತ್ತಿರುವ ಕೋಮುವಾದದ್ದೂ ಸೇರಿದಂತೆ ಹಲವು ರೀತಿಗಳ ಹಿಂಸಾಚಾರ ಮತ್ತು ಅಶಾಂತಿಗಳು, ಲೈಸೆನ್ಸ್–ಪರ್ಮಿಟ್ ರಾಜ್' ಎಂದು ಸುಲಭವಾಗಿ ಶಪಿಸಲ್ಪಟ್ಟಿದ್ದ ಸಮಾಜವಾದದ ಆರೋಗ್ಯಕರ ಮುಖಗಳ ಬಗ್ಗೆ ಇಂದು ಪುನರಾಲೋಚಿಸುವಂತೆ ಮಾಡಿದೆ. ವಿಶೇಷವಾಗಿ ಅದು ಎತ್ತಿಹಿಡಿಯುವ ಸಮಾನತೆಯ ಪರಿಣಾಮಗಳಾದ ಮಾನವ ಘನತೆ ಮತ್ತು ಆಜನ್ಮಸಿದ್ಧ ಹಕ್ಕುಗಳ ಮಹತ್ವವೀಗ ಎದ್ದು ಕಾಣತೊಡಗಿದೆ.

ನಿಜ, ಸಮಾಜವಾದದ ಹಲವು ಆವೃತ್ತಿಗಳು ಆಗಿಹೋಗಿವೆ ಮತ್ತು ಅವುಗಳ ಬಗ್ಗೆ ರಾಜಕೀಯ ವಿದ್ವತ್ ವಲಯಗಳಲ್ಲಿ ಇನ್ನೂ ಚರ್ಚೆಗಳು ನಡೆದಿವೆ. ಈ ಚರ್ಚೆಗಳ ಸಹಾಯದಿಂದ ಮತ್ತು ಹಿಂದಿನ ಅನುಭವಗಳಿಂದ ಕಲಿತ ಪಾಠಗಳ ಹಿನ್ನೆಲೆಯಲ್ಲಿ ನಾವು ಇಂದಿಗೆ ನಮಗೆ ಬೇಕಾದ ಸಮಾಜವಾದವನ್ನು ಕಂಡುಕೊಳ್ಳಬೇಕಿದೆ. ಈ ಸಂಬಂಧದ ಚರ್ಚೆಗೆ ಕಾರಣವಾಗಬಹುದಾದ ಮೂರು ಲೇಖನಗಳನ್ನು ಇಲ್ಲಿ ಪ್ರಕಟಿಸಲಾಗುತ್ತಿದೆ–ಸಂ.

## ಇಂದು ಭಾರತಕ್ಕೆ ಸಮಾಜವಾದ ಏಕೆ ಬೇಕು?

–ಜಿ. ರಾಜಶೇಖರ

೧೯೯೧ರಲ್ಲಿ ಕೇಂದ್ರ ಸರಕಾರ ದೇಶದ ಅರ್ಥವ್ಯವಸ್ಥೆಯಲ್ಲಿ ತಂದ ಕೆಲವು ಮಾರ್ಪಾಡುಗಳನ್ನು 'ಹೊಸ ಆರ್ಥಿಕ ನೀತಿ' ಎಂದು ಬಣ್ಣಿಸಲಾಗುತ್ತಿದೆ. 'ಆರ್ಥಿಕ ಸುಧಾರಣೆ' ಎಂದೂ ಕರೆಯಲ್ಪಡುತ್ತಿರುವ ಈ ಹೊಸ ಆರ್ಥಿಕ ನೀತಿ ವಾಸ್ತವವಾಗಿ, ಸರಕಾರ ಅದುವರೆಗೆ ಅನುಸರಿಸಿಕೊಂಡು ಬಂದ ಧೋರಣೆಯದ್ದೇ ಪರಿಷ್ಕೃತ ರೂಪವಾಗಿತ್ತು. ಬಂಡವಾಳಶಾಹಿ ಮತ್ತು ಭೂಮಾಲಕ ಹಿತಾಸಕ್ತಿಗಳಿಗೆ ಕಿಂಚಿತ್ತೂ ಧಕ್ಕೆ ತಾರದ 'ಮಿಶ್ರ ಆರ್ಥಿಕ ಧೋರಣೆಯನ್ನೇ ಸ್ವಾತಂತ್ರ್ಯಾನಂತರ ಸರಕಾರ ಪಾಲಿಸಿಕೊಂಡು ಬಂದಿತ್ತು. ಇದರ ಮುಂದುವರಿಕೆಯಾಗಿ ೧೯೯೧ರಲ್ಲಿ ಜಾರಿಗೆ ಬಂದ ಹೊಸ ಆರ್ಥಿಕ ನೀತಿ, ದೇಶದ ಅರ್ಥ ವ್ಯವಸ್ಥೆಯೊಳಗೆ ವಿದೇಶಿ ಬಂಡವಾಳದ ಪ್ರವೇಶವನ್ನು ಸುಗಮಗೊಳಿಸಿತು. ಜೊತೆಗೆ ಮಾರುಕಟ್ಟೆಯ ಶಕ್ತಿಗಳ ಮೇಲಣ ತನ್ನ ಚೂರುಪಾರು ನಿಯಂತ್ರಣವನ್ನು ಸಡಿಲಗೊಳಿಸಿತು. ಇನ್ನು 'ಆರ್ಥಿಕ ಸುಧಾರಣೆ'ಯ ಮಾತಿಗೆ ಬಂದರೆ, ಈ ಹೊಸ ಆರ್ಥಿಕ ನೀತಿ, ಜನರ ಜೀವನಮಟ್ಟವನ್ನು ಯಾವ ರೀತಿಯಲ್ಲೂ ಸುಧಾರಿಸಲಿಲ್ಲ. ಅದಕ್ಕೆ ಬದಲಾಗಿ ಈ ನೀತಿಗಳು ಬಡವರ ಬದುಕಿನಲ್ಲಿ ಹೊಸ ನಮೂನೆಯ ಕ್ಷೋಭೆ ಮತ್ತು ತಲ್ಲಣಗಳು ತಲೆದೋರಲು ಕಾರಣವಾದವು. ಸ್ವದೇಶಿ ಮತ್ತು ಬಹುರಾಷ್ಟ್ರೀಯ ಬಂಡವಾಳಶಾಹಿಯ ಮೇಲಿನ ಸರಕಾರದ ಹಿಡಿತವನ್ನು ಸಡಿಲಿಸುವುದು, ದೇಶದ ಆಮದು, ರಫ್ತು ಮತ್ತು ಆಂತರಿಕ ಮಾರುಕಟ್ಟೆಗಳನ್ನು ಸರಕಾರದ ನಿಯಂತ್ರಣದಿಂದ ಮುಕ್ತಗೊಳಿಸುವುದು ಹಾಗೂ ಖಾಸಗಿ ಉದ್ಯಮಗಳಲ್ಲಿ ಉದ್ಯೋಗಿಗಳ ನೇಮಕಾತಿ, ವಜಾ ಇತ್ಯಾದಿಗಳಿಗೆ ಸಂಬಂಧಿಸಿದ ಕಾನೂನುಗಳ ಉಸ್ತುವಾರಿಯಿಂದ ಸರಕಾರ ಹಿಂದೆ ಸರಿಯುವುದು– ಒಟ್ಟಿನಲ್ಲಿ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣಗಳ ಈ ಹೊಸ ಆರ್ಥಿಕ ನೀತಿ, ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರನ್ನಾಗಿಸಿ, ಬಡವರನ್ನು ದಿವಾಳಿ ಎಬ್ಬಿಸುವ ಸರಕಾರದ ಲಾಗಾಯ್ತಿನ ನೀತಿಯದ್ದೇ ಮುಂದುವರಿಕೆಯಾಗಿತ್ತು ಎನ್ನುವುದು ಈಗ ನಿಚ್ಚಳವಾಗಿದೆ. ಹೊಸ ಆರ್ಥಿಕ ನೀತಿ, ೧೯೯೧ರಲ್ಲಿ ಸರಕಾರದ ಸ್ವತಂತ್ರ ನಿರ್ಧಾರವಾಗಿರಲಿಲ್ಲ ಎಂಬುದನ್ನು ಸಹ ನಾವು ಗಮನಿಸಬೇಕು. ಭಾರತದ ಅರ್ಥವ್ಯವಸ್ಥೆ ತೀವ್ರ ಬಿಕ್ಕಟ್ಟಿನಲ್ಲಿತ್ತು. ವಿದೇಶಿ ವಿನಿಮಯ ಬರಿದಾಗಿತ್ತು. ಈ ಸನ್ನಿವೇಶದಲ್ಲಿ 'ಜಗತ್ತಿನ ಹಿರಿಯಣ್ಣ' ಅಮೇರಿಕದ ನಿಯಂತ್ರಣದಲ್ಲಿರುವ ವಿಶ್ವಬ್ಯಾಂಕು ಮತ್ತು ಅಂತರ್‍ರಾಷ್ಟ್ರೀಯ ಹಣಕಾಸು ನಿಧಿಗಳ ತೀವ್ರ ಒತ್ತಡಕ್ಕೆ ಭಾರತ ಮಣಿದಿತ್ತು.

ಹೊಸ ಆರ್ಥಿಕ ನೀತಿಯ ಪರಿಣಾಮಗಳನ್ನು ನಾವೆಲ್ಲರೂ, ಈಗ ನಮ್ಮ ನಮ್ಮ ಊರುಗಳಲ್ಲೇ ಕಾಣುತ್ತಿದ್ದೇವೆ. ಎಲ್ಲ ಊರುಗಳಲ್ಲೂ ವಾಹನಗಳ ಸಂಖ್ಯೆ ವಿಪರೀತ ಜಾಸ್ತಿ ಆಗಿದೆ. ಆದರೆ ಮೊದಲು ಹಾದಿ ಬೀದಿಗಳ ಬದಿಯಲ್ಲಿ ಎಲ್ಲೆಲ್ಲೂ ಕಾಣಸಿಗುತ್ತಿದ್ದ ಗ್ಯಾರೇಜುಗಳು ಮಾತ್ರ ನಾಪತ್ತೆಯಾಗಿವೆ. ಈಗ ಕಾರ್ಖಾನೆಗಳಲ್ಲಿ ಉತ್ಪಾದನೆಯಾಗುವ ವಾಹನಗಳ ಬಿಡಿಭಾಗಗಳೆಲ್ಲ ಬಳಸಿ ಬಿಸಾಡುವುದಕ್ಕೆಂದೇ ತಯಾರಿಸಲ್ಪಟ್ಟವು; ಹಾಗಾಗಿ ಅವುಗಳ ರಿಪೇರಿಯ ಮಾತೇ ಇಲ್ಲ; ಊರಿನ ಗ್ಯಾರೇಜುಗಳಿಗೆ ಕೆಲಸವೂ ಇಲ್ಲ. ಉದ್ಯಮಗಳ ಏಕಸ್ವಾಮ್ಯ, ಸಂಪತ್ತಿನ ಕೇಂದ್ರೀಕರಣ ಮತ್ತು ಕಸುಬುಗಳ ಅವಸಾನ – ಆರ್ಥಿಕ ಸುಧಾರಣೆಯ ವಿನಾಶಕಾರಿ ಪರಿಣಾಮಗಳಿಗೆ ಇದೊಂದು ಸಣ್ಣ ಉದಾಹರಣೆ ಮಾತ್ರ. ಇನ್ನೊಂದು ಉದಾಹರಣೆ ನೋಡಿ. ಮಧ್ಯಾಹ್ನದ ಬಿಸಿ ಊಟ, ಯೂನಿಫಾರಂ, ಪಠ್ಯಪುಸ್ತಕ, ಕಾಲಿಗೆ ಶೂ–ಇವೆಲ್ಲ ಕೊಟ್ಟರೂ, ಸರಕಾರೀ ಶಾಲೆಗಳು ವಿದ್ಯಾರ್ಥಿಗಳಿಲ್ಲದೆ ಈಗ ಬಾಗಿಲು ಮುಚ್ಚುತ್ತಿವೆ. ಆದರೆ ಇದೇ ವೇಳೆ ಹಳ್ಳಿಗಳಲ್ಲೂ ದುಬಾರಿ ಶುಲ್ಕ ವಸೂಲು ಮಾಡುವ ಇಂಗ್ಲೀಷ್ ಮಾಧ್ಯಮ ಶಾಲೆಗಳು ಭರ್ಜರಿ ವ್ಯಾಪಾರ ಮಾಡುತ್ತಿವೆ. ಬಡವರೂ ಕೂಡ ಕಾಸಿಗೆ ಕಾಸು ಕೂಡಿಸಿ, ತಮ್ಮ ಮಕ್ಕಳನ್ನು ಈ ಶಾಲೆಗಳಿಗೆ ಕಳುಹಿಸುವ ಧಾವಂತದಲ್ಲಿದ್ದಾರೆ. ಕನ್ನಡ ಮಾಧ್ಯಮದ ಸರಕಾರೀ ಶಾಲೆ ಮತ್ತು ಇಂಗ್ಲಿಷ್ ಮಾಧ್ಯಮದ ಖಾಸಗಿ ಶಾಲೆ ಪ್ರತಿನಿಧಿಸುವ ತಾರತಮ್ಯದ ಸಂಸ್ಕೃತಿಯನ್ನು ಶ್ರೀಮಂತರ ಜೊತೆ ಬಡವರು ಸಹ ತಮ್ಮದಾಗಿಸಿಕೊಂಡಿದ್ದಾರೆ. ಈ ತಾರತಮ್ಯ ಕಣ್ಣಿಗೆ ಹೊಡೆದು ಕಾಣುವ ಮತ್ತೊಂದು ಕ್ಷೇತ್ರ ಆರೋಗ್ಯ. ಹೊಸ ಆರ್ಥಿಕ ನೀತಿಯಿಂದಾಗಿ ಬಡವರ ಕೈಗೆಟಕುವ ದರಗಳಲ್ಲಿ ಸರಕಾರ ಇದುವರೆಗೆ ಒದಗಿಸುತ್ತಿದ್ದ ಅಲ್ಪಸ್ವಲ್ಪ ವೈದ್ಯಕೀಯ ಸೌಲಭ್ಯವನ್ನು ಸಹ ಅದು ಕ್ರಮೇಣ ನಿಲ್ಲಿಸುತ್ತಿದೆ. ಅದೇ ವೇಳೆಗೆ ಭಾರತದ ಆರೋಗ್ಯ ವ್ಯವಸ್ಥೆ – ವೈದ್ಯಕೀಯ ಶಿಕ್ಷಣ, ಚಿಕಿತ್ಸೆ ಮತ್ತು ಔಷಧ ಉದ್ಯಮ ಹೆಚ್ಚು ಹೆಚ್ಚು ಖಾಸಗೀಕರಣಗೊಳ್ಳುತ್ತಿದೆ; ಹೆಚ್ಚು ಹೆಚ್ಚು ದುಬಾರಿಯಾಗುತ್ತಲೂ ಇದೆ. ಈ ಬೆಳವಣಿಗೆ ಬಡವರ ಮಟ್ಟಿಗೆ ಅಕ್ಷರಶಃ ಮಾರಣಾಂತಿಕವಾಗಿದೆ. ಬಡವರು, ಅಷ್ಟೇ ಯಾಕೆ ಕೆಳ ಮಧ್ಯಮವರ್ಗದ ಕುಟುಂಬಗಳಲ್ಲಿ ಕೂಡ ಯಾರಾದರೂ ಈಗ ಆಸ್ಪತ್ರೆಯ ಹಾಸಿಗೆಯಲ್ಲಿ ನಾಲ್ಕಾರು ದಿನ ಮಲಗಿರಬೇಕಾಗಿ ಬಂದರೆ, ಅಂತಹ ಕುಟುಂಬಗಳು ನಾಲ್ಕಾರು ವರ್ಷ ಆರ್ಥಿಕವಾಗಿ ಚೇತರಿಸಿಕೊಳ್ಳಲಾರದಂತಹ ಸ್ಥಿತಿ ತಲುಪುತ್ತವೆ. ಖ್ಯಾತ ಪತ್ರಕರ್ತ ಪಿ.ಸಾಯಿನಾಥ್ ರೈತರ ಆತ್ಮಹತ್ಯೆ ಕುರಿತ ತನ್ನ ಲೇಖನ ಮಾಲಿಕೆಯಲ್ಲಿ ಈ ಆತ್ಮಹತ್ಯೆಗಳಿಗೆ ಕಾರಣಗಳನ್ನು ಹೇಳುತ್ತ, ಮಾರುಕಟ್ಟೆಯ ಏರುಪೇರು, ಬತ್ತಿದ ಬೋರ್‌ವೆಲ್, ಡೋಂಗಿ ಬಿತ್ತನೆ ಬೀಜ, ನೆಲವನ್ನು ಬರಡುಗೊಳಿಸುವ ಕೃತಕ ಗೊಬ್ಬರ, ಬರಗಾಲ ಮುಂತಾದವುಗಳ ಜೊತೆ ದಿನೇ ದಿನೇ ಏರುತ್ತಿರುವ ಮಕ್ಕಳ ಶಿಕ್ಷಣಶುಲ್ಕ ಮತ್ತು ಕುಟುಂಬದ ವೈದ್ಯಕೀಯ ವೆಚ್ಚಗಳನ್ನು ಸಹ ಹೆಸರಿಸುತ್ತಾರೆ. ಪ್ರಾಯಶಃ ಈ ಕಾರಣಗಳಲ್ಲಿ ಬರಗಾಲವೊಂದನ್ನು ಹೊರತುಪಡಿಸಿ, ಉಳಿದ ಎಲ್ಲವೂ ಈ ದೇಶದ ಆರ್ಥಿಕ, ರಾಜಕೀಯ ವ್ಯವಸ್ಥೆಯ ನೇರ ಬಳುವಳಿಗಳು.



**ಗುಜರಾತ್ ಕೋಮು ಹಿಂಸಾಚಾರದ ಎರಡು ದೃಶ್ಯಗಳು**




**ಬದುಕು ಬೇಡುತ್ತಿರುವ ಭಾರತದ ಬಡ ರೈತ**

೧೯೯೧ರ ಹೊಸ ಆರ್ಥಿಕ ಧೋರಣೆಗಳಷ್ಟೇ ಮಹತ್ವದ ಇನ್ನೊಂದು ಬೆಳವಣಿಗೆ ಎಂದರೆ ದೇಶದ ರಾಜಕೀಯದಲ್ಲಿ 'ಹಿಂದುತ್ವ'ದ ಶಕ್ತಿಗಳು ಮೇಲುಗೈ ಸಾಧಿಸಿದ್ದು. ಕಳೆದ ಶತಮಾನದ ೮೦ರ ದಶಕದಲ್ಲಿ, ರಾಮಜನ್ಮಭೂಮಿ ಚಳುವಳಿಯಿಂದಾಗಿ ಬಿ.ಜೆ.ಪಿ. ಅಪಾರ ಜನಪ್ರಿಯತೆ, ಪಡೆದುಕೊಂಡಿತು. ಈ ಚಳುವಳಿ ೧೯೯೨ರ ಡಿಸೆಂಬರ್ ೬ರಂದು ಸಂಭವಿಸಿದ ಅಯೋಧ್ಯೆಯ ಬಾಬರಿ ಮಸೀದಿ ಧ್ವಂಸಕ್ಕೆ ನೇರ ಕಾರಣವಾಗಿತ್ತು. ಅದೇ ದಿನ ಸಂಜೆ ಮುಂಬಯಿ ಮಹಾನಗರಿಯಲ್ಲಿ ಶುರುವಿಟ್ಟುಕೊಂಡ ಕೋಮು ಹಿಂಸಾಚಾರ ೧೯೯೩ರ ಜನವರಿ ತಿಂಗಳಿಗೂ ಮುಂದುವರಿದು ಹತ್ತಿರ ಹತ್ತಿರ ಒಂದು ಸಾವಿರ ಜನ– ಆ ಪೈಕಿ ಹೆಚ್ಚಿನವರು ಮುಸ್ಲಿಮರು – ಪ್ರಾಣ ಕಳೆದುಕೊಂಡರು. ಮುಂಬಯಿ ಹಿಂಸಾಕಾಂಡ, ೨೦೦೨ರ ಗುಜರಾತ್‌ನ ಸಾಮೂಹಿಕ ನರಹತ್ಯೆ, ೨೦೦೮ರಲ್ಲಿ ಒರಿಸ್ಸದ ಕಂಧಮಾಲ್ ಜಿಲ್ಲೆಯ ಆದಿವಾಸಿ ಕ್ರೈಸ್ತರ ಮೇಲೆ ನಡೆದ ಹಿಂಸಾಚಾರ, ೨೦೧೩ರಲ್ಲಿ ಉತ್ತರ ಪ್ರದೇಶದ ಮುಜಾಫರ್ ನಗರದಲ್ಲಿ ಮುಸ್ಲಿಮರ ಮೇಲೆ ನಡೆದ ಭಾರೀ ಪ್ರಮಾಣದ ಹಲ್ಲೆ –ಈ ಪ್ರಮುಖ ಘಟನೆಗಳ ಜೊತೆಗೆ, ದೇಶದ ಎಲ್ಲೆಡೆ, ಅಲ್ಪ ಸಂಖ್ಯಾತರು, ಅದರಲ್ಲೂ ವಿಶೇಷವಾಗಿ ಮುಸ್ಲಿಮರ ಮೇಲೆ ಗೋಮಾಂಸ, ಲವ್ ಜೆಹಾದ್, ಮತಾಂತರ ಹೀಗೆ ನಾನಾ ನೆವ ಹೇಳಿ ನಡೆಸಲಾಗುತ್ತಿರುವ ಗುಂಪು ಹಲ್ಲೆ, ಲೂಟಿ, ಮಾನಭಂಗ ಇವೆಲ್ಲವೂ 'ಹಿಂದುತ್ವ' ರಾಜಕೀಯದ ಪ್ರತ್ಯಕ್ಷ ಪರಿಣಾಮಗಳಾಗಿವೆ. ಈಗೀಗ ಜನ ಈ ಹಿಂಸೆಯನ್ನು ಹಿಂಸೆ ಎಂದು ಗುರುತಿಸಲು ಸಹ ನಿರಾಕರಿಸುತ್ತಿದ್ದಾರೆ. ೨೦೦೨ರಲ್ಲಿ ಗುಜರಾತ್‌ನಲ್ಲಿ ಬಿ.ಜೆ.ಪಿ. ಸರ್ಕಾರವಿದ್ದಾಗ ನಡೆದ ಭಾರೀ ಹಿಂಸಾಚಾರದ ನಂತರ ಆ ರಾಜ್ಯದಲ್ಲಿ ನಡೆದ ಮೂರು ವಿಧಾನಸಭಾ ಚುನಾವಣೆಗಳಲ್ಲೂ (೨೦೦೨–೨೦೦೭ ಮತ್ತು ೨೦೧೨) ಬಿ.ಜೆ.ಪಿ. ಭಾರೀ ಬಹುಮತ ಪಡೆಯಿತು. ೧೯೯೨–೯೩ರ ಮುಂಬೈ ಸರಣಿ ಹಿಂಸಾಚಾರದ ನಂತರ ನಡೆದ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಆ ಹಿಂಸೆಯ ಪ್ರೇರಕ ಶಕ್ತಿಯಾಗಿದ್ದ ಬಿ.ಜೆ.ಪಿ. ಹಾಗೂ ಶಿವಸೇನಾಗಳ ಒಕ್ಕೂಟ ಬಹುಮತ ಪಡೆದು ಸರಕಾರ ರಚಿಸಿತು. ೨೦೧೪ರ ಲೋಕಸಭಾ ಚುನಾವಣೆಯಲ್ಲಿ ಬಿ.ಜೆ.ಪಿ. ನೇತೃತ್ವದ ಎನ್.ಡಿ.ಎ. ಒಕ್ಕೂಟ, ರಾಷ್ಟ್ರಮಟ್ಟದಲ್ಲೇ ಬಹುಮತ ಪಡೆಯಿತು. ಕಾಂಗ್ರೆಸ್ ಬಿಟ್ಟರೆ ಈಗ ದೇಶಾದ್ಯಂತ, ಎಲ್ಲ ರಾಜ್ಯಗಳಲ್ಲೂ ತನ್ನ ಅಸ್ತಿತ್ವವನ್ನು ಸಾಬೀತುಪಡಿಸಿರುವ ಏಕೈಕ ಪಕ್ಷ, ಬಿ.ಜೆ.ಪಿ. ಇದು ಏನನ್ನು ಸೂಚಿಸುತ್ತದೆ?

ಮುಸ್ಲಿಮರ ಮೇಲೆ, ರಾಜಕೀಯ ಉದ್ದೇಶಗಳಿಗಾಗಿ ಪ್ರಾಯೋಜಿಸಲಾಗುವ ಹಿಂಸಾಚಾರಕ್ಕೆ ಪ್ರಜೆಗಳಲ್ಲಿ ಹೆಚ್ಚಿನವರು ಜಡವಾಗಿರುವುದಷ್ಟೇ ಅಲ್ಲ, ಅವರು ಹಿಂಸೆಯನ್ನು ಬೆಂಬಲಿಸುವವರೂ ಹೌದು. ಸಾಮಾಜಿಕ ಅವಕಾಶ, ಸಂಪತ್ತು, ಕೃಷಿಭೂಮಿ ಇತ್ಯಾದಿ ಸಂಪನ್ಮೂಲಗಳ ಒಡೆತನದಲ್ಲಿ ತೀವ್ರ ಅಸಮಾನತೆಯ ಜೊತೆ, 'ಅನ್ಯಮತೀಯರ' ಮೇಲೆ ನಡೆಯುವ ಹಿಂಸೆಗೆ ಕೂಡ ಸಾಮಾನ್ಯ ಜನ ಈಗ ಒಗ್ಗಿ ಕೊಳ್ಳತೊಡಗಿದ್ದಾರೆ. ಈ ಸನ್ನಿವೇಶದಲ್ಲಿ ಸಾಮಾನ್ಯ ಜನ ಎದುರಿಸುತ್ತಿರುವ ಆರ್ಥಿಕ ಸಂಕಷ್ಟ ಹಾಗೂ ನೈತಿಕ ಬಿಕ್ಕಟ್ಟನ್ನು ಪರಿಹರಿಸುವ ಸಾಮರ್ಥ್ಯವಿರುವುದು ಸಮಾಜವಾದಕ್ಕೆ ಮಾತ್ರ. ಸಮಾಜವಾದ ಕೇವಲ ರಾಜಕೀಯ – ಆರ್ಥಿಕ ಕಾರ್ಯಕ್ರಮವಲ್ಲ. ಸಂಪತ್ತಿನ ಸಮಾನ ಹಂಚಿಕೆ ಮತ್ತು ಸಾಮಾಜಿಕ ನ್ಯಾಯ ಸಮಾಜವಾದದ ಬಹುಮುಖ್ಯ ಗುರಿಗಳಾಗಿದ್ದರೂ, ಆ ಕುರಿತ ಹೋರಾಟಕ್ಕೆ ಮಾತ್ರ ಅದು ಸೀಮಿತವಾಗಿಲ್ಲ. ಆ ಶಬ್ದವೇ ಸೂಚಿಸುವ ಹಾಗೆ ಸಮಾಜವಾದ ಮೂಲತಃ ಒಂದು ವಾದ; ಅದು ಜಗತ್ತನ್ನೂ ಕಾಲವನ್ನೂ ಅರಿಯುವ, ವಿಶ್ಲೇಷಿಸುವ ಮತ್ತು ವಿಮರ್ಶೆಗೆ ಒಳಪಡಿಸುವ ಒಂದು ಚಿಂತನಾ ಕ್ರಮ. ಆದರೆ ಸಮಾಜವಾದಕ್ಕೆ ಅರಿವು ವಿಶ್ಲೇಷಣೆ ಮತ್ತು ವಿಮರ್ಶೆಗಳೇ ಅಂತಿಮವಲ್ಲ. ಮಾರ್ಕ್ಸ್ ಹೇಳುವಂತೆ, 'ತಾತ್ವಿಕರು ಜಗತ್ತನ್ನು ಸಾಕಷ್ಟು ವಿವರಿಸಿಯಾಗಿದೆ. ಆದರೆ ಮುಖ್ಯವಾದ ಮಾತೆಂದರೆ ಈ ಜಗತ್ತನ್ನು ಈಗ ತುರ್ತಾಗಿ ಬದಲಾಯಿಸಬೇಕಿದೆ.'

ಭಾರತ ಸರಕಾರ, ಸ್ವಾತಂತ್ರ್ಯಾನಂತರ ಅನುಸರಿಸಿಕೊಂಡು ಬಂದ ಆರ್ಥಿಕ ಧೋರಣೆಯನ್ನು ಅದರಲ್ಲೂ ೧೯೯೧ರಲ್ಲಿ ಅದು ಅರ್ಥವ್ಯವಸ್ಥೆಯ ನಿರ್ವಹಣೆಯಲ್ಲಿ ಅಳವಡಿಸಿಕೊಂಡ ಮಾರ್ಪಾಡುಗಳನ್ನು ಸಮಾಜವಾದ ಪ್ರತಿಭಟಿಸುತ್ತದೆ.

ಸರಕಾರದ ಆರ್ಥಿಕ ಧೋರಣೆಯ ಜೊತೆಗೆ ರಾಜಕೀಯದಲ್ಲಿ ಮೇಲುಗೈ ಸಾಧಿಸಿರುವ ಹಿಂದುತ್ವದ ರಾಜಕೀಯವನ್ನು ಸಹ ಸಮಾಜವಾದ ವಿರೋಧಿಸುತ್ತದೆ. ಹಿಂದುಗಳನ್ನು ಧಾರ್ಮಿಕ ನೆಲೆಯಲ್ಲಿ, ರಾಜಕೀಯ ಉದ್ದೇಶಗಳಿಗಾಗಿ ಸಂಘಟಿಸಲು ಹೊರಟಿರುವ ತನ್ನ ಸಿದ್ಧಾಂತ, ಎಲ್ಲ ಜಾತಿವರ್ಗಗಳವರನ್ನೂ ಗಂಡು ಹೆಣ್ಣು ಎಂಬ ಬೇಧವಿಲ್ಲದೆ ಒಳಗೊಳ್ಳುತ್ತದೆ ಎಂಬ ಹಿಂದುತ್ವದ ಹೆಗ್ಗಳಿಕೆಯನ್ನು ಸಹ ಸಮಾಜವಾದ ತಿರಸ್ಕರಿಸುತ್ತದೆ. ಹಿಂದುತ್ವ ಎತ್ತಿ ಹಿಡಿಯುವ ಭಾರತೀಯ ಸಂಸ್ಕೃತಿ, ವೈದಿಕ, ಬ್ರಾಹ್ಮಣ ನಂಬಿಕೆ ಮತ್ತು ಆಚರಣೆಗಳಿಗೆ ಮಾತ್ರ ಸೀಮಿತವಾಗಿದ್ದು, ಪುರುಷ ಪ್ರಧಾನವೂ ಆಗಿದೆ. ಅದು ಭಾರತದ ಅವೈದಿಕ ಪರಂಪರೆಗಳನ್ನೂ, ಶೂದ್ರ ಸಮುದಾಯಗಳನ್ನೂ, ಸ್ತ್ರೀಯರು, ದಲಿತರು, ಪಂಚಮರು ಮತ್ತು ಆದಿವಾಸಿಗಳನ್ನೂ ಉಪೇಕ್ಷಿಸಿದೆ. ಭಾರತೀಯ ಸಂಸ್ಕೃತಿ ಕುರಿತ ಹಿಂದುತ್ವದ ನಿರೂಪಣೆಗಳ ಅಪಾಂಗತ್ವವನ್ನು ಗುರುತಿಸಲು ಸಮಾಜವಾದದ ದರ್ಶನವೇ ಬೇಕು. 'ಭಾರತೀಯರಾಗಿ ಯೋಚಿಸಿ, ಭಾರತದ ಸಾಹಿತ್ಯವನ್ನು ಭಾರತೀಯರಾಗಿ ಓದಿ; ಸಂಸ್ಕೃತಿಗೆ ಒಳಗಿನವರಾಗಿ ವಿಮರ್ಶೆ ಮಾಡಿ' ಎಂದು ಈಗ ಹಿಂದುತ್ವವಾದಿಗಳು ಅಪ್ಪಣೆ ಕೊಡಿಸುತ್ತಿದ್ದಾರೆ. ಹಿಂದುತ್ವದ ಫ್ಯಾಸಿಸ್ಟ್ ಅತಿರೇಕಗಳನ್ನು ವಿರೋಧಿಸುವ ಲಿಬರಲ್‌ಗಳು ಕೂಡ ಈಗೀಗ ಆಧುನಿಕ ಮನೋಧರ್ಮದ ಸೆಕ್ಯುಲರ್ ಭಾರತೀಯರು ಪರಂಪರಾಗತ ಸಂಸ್ಕೃತಿಯ ಕುರಿತು ತೋರಿಸುತ್ತಿರುವ ಅನಾಸಕ್ತಿ ಮತ್ತು ತಿರಸ್ಕಾರಗಳೇ, ಹಿಂದುತ್ವದ ಬೆಳವಣಿಗೆಗೆ ಕಾರಣವಾಗಿದೆ ಎಂದು ವಾದಿಸುತ್ತಿದ್ದಾರೆ. ಸಮಾಜವಾದ ಈ ವಿಶ್ಲೇಷಣೆಯನ್ನು ನಿರಾಕರಿಸುತ್ತದೆ. ಏಕಾಕೃತಿಯ ಒಂದು ಅಖಂಡ ಭಾರತೀಯ ಸಂಸ್ಕೃತಿ ಅಥವಾ ಭಾರತೀಯತ್ವ ಇದೆ ಎಂಬ ಪ್ರತಿಪಾದನೆಯನ್ನು ಸಮಾಜವಾದ ತಿರಸ್ಕರಿಸುತ್ತದೆ. ಒಂದೊಮ್ಮೆ ಅಂತಹದೊಂದು ಭಾರತೀಯ ಸಂಸ್ಕೃತಿ ಇದ್ದರೂ ಸಮಾಜವಾದಿಯೊಬ್ಬ ಅದರಲ್ಲಿ ಒಳಗಿನವನಾಗಿ, ಬೇರೂರಿಕೊಂಡು ನೆಮ್ಮದಿಯಲ್ಲಿ ಇರಲಾರ. 'ಆನುದೇವಾ ಹೊರಗಣವನು' ಎಂಬ ಬಸವನ ತನ್ನ ಮನೆಯಲ್ಲೇ ಆಗಂತುಕನಾದವನ ಕಳವಳ ಸಮಾಜವಾದಿಗಳ ಸಾರ್ವಕಾಲಿಕ ಮನಸ್ಥಿತಿ. 'ಮನೆಯನೆಂದೂ ಕಟ್ಟದಿರು; ಆಗು ನೀ ಅನಿಕೇತನ' ಎಂಬ ಕವಿವಾಣಿ, ಎಲ್ಲ ಸಮಾಜವಾದಿಗಳ ಘೋಷ ವಾಕ್ಯ. ಅಂತಹ ಅನಿಕೇತನರಿಗೆ ಮಾತ್ರ, ಕೇವಲ ಮನುಷ್ಯರು ಭಾರತವೆಂಬ ರಾಷ್ಟ್ರ ಪ್ರಭುತ್ವದ ಪ್ರಜೆಗಳಾಗಿ ಪಡುವ ಪಾಡು ಅರ್ಥವಾಗುತ್ತದೆ. ಆರ್ಥಿಕ ಸಾಮಾಜಿಕ ಪರಿವರ್ತನೆಯ ಪ್ರಣಾಳಿಕೆಯಾಗಿ; ಜೊತೆಗೆ ನಮ್ಮ ಕಾಲ ದೇಶಗಳನ್ನು ಪರಿಭಾವಿಸುವ ಒಂದು ತಾತ್ವಿಕತೆಯಾಗಿ ಈಗ ಸಮಾಜವಾದ ಭಾರತಕ್ಕೆ ಅಗತ್ಯವಾಗಿ ಬೇಕು.



**(ಭಾರತೀಯ ಜೀವ ವಿಮಾ ನಿಗಮದ ಮಾಜಿ ಉದ್ಯೋಗಿಯಾದ ಉಡುಪಿಯ ರಾಜಶೇಖರ್ ನಮ್ಮ ನಡುವಿನ ನಿಷ್ಠುರ ಸಾಹಿತ್ಯ ಚಿಂತಕರೂ ಮತ್ತು ರಾಜಕೀಯ ವಿಶ್ಲೇಷಕರೂ ಆಗಿದ್ದಾರೆ.)**


# ನಮಗೆ ಎಂಥ ಸಮಾಜವಾದ ಬೇಕು?

–ಡಾ. ರಾಜೇಂದ್ರ ಚೆನ್ನಿ

**ನಾ**ವು ಅಸಮಾನತೆಯ ನೆಲದ ಮೇಲೆ ಅಸಮಾನತೆಯ ಸೌಧವನ್ನು ಕಟ್ಟಲು ಹೊರಟಿದ್ದೇವೆ ಎಂದು ಬಾಬಾ ಸಾಹೇಬ ಅಂಬೇಡ್ಕರ್ ಅವರು ಹೇಳಿದ್ದರು. ಈ ಮಾತು ನಮ್ಮ ಚರಿತ್ರೆಯ ಬಗೆಗಿನ ಅಂತಿಮ ಸತ್ಯವೆಂದು ಅನ್ನಿಸುತ್ತದೆ. ಆದ್ದರಿಂದ ನಮ್ಮ ಸಂದರ್ಭದಲ್ಲಿ ಸಮಾಜವಾದವು ತೀವ್ರವಾದ Utopian ಗುಣವನ್ನು ಉಳಿಸಿಕೊಂಡಿರಬೇಕು. ಅಸಮಾನತೆಯ ಎಲ್ಲಾ ಸೂತಕಗಳನ್ನು ಕಳಚಲು ಹೊರಟಿದ್ದ ವಚನಕಾರರಂತೆ ಸಮಾಜವಾದವೂ ಕೂಡ ಅದೆಷ್ಟೆ ಅವಾಸ್ತವಿಕವೆಂದು ಅನ್ನಿಸಿದರೂ ತನ್ನ ಸಮಾನತೆಯ ಆದರ್ಶದ ಜೊತೆಗೆ ಯಾವುದೇ ರಾಜೀ ಕಬೂಲಿ ಮಾಡಿಕೊಳ್ಳಬಾರದು. ರಾಜಕೀಯದ ದೌರ್ಬಲ್ಯವೆಂದರೆ ಅದು ವಾಸ್ತವಿಕತೆಯ ಹೆಸರಿನಲ್ಲಿ ತನ್ನ ಸೈದ್ಧಾಂತಿಕ ಆದರ್ಶಗಳನ್ನು ಬಿಟ್ಟುಕೊಡಲು ತುದಿಗಾಲಿನ ಮೇಲೆ ನಿಂತಿರುತ್ತದೆ. ಅದೇ ಹೊತ್ತಿಗೆ ಚರಿತ್ರೆಯಲ್ಲಿ ಸೋತುಹೋದ ಅನೇಕ ಚಳುವಳಿಗಳು ತಮ್ಮ ಕನಸುಗಾರಿಕೆಯಿಂದ ಈಗಲೂ ಸಮಾಜ ಪರಿವರ್ತನೆಯ ಆಶಯಗಳನ್ನು ಜೀವಂತವಾಗಿರಿಸಿವೆ. ೧೯ನೇ ಶತಮಾನದ ಇಂಗ್ಲೆಂಡ್‌ನ ಕಾರ್ಮಿಕರು ತಮ್ಮ ಬೇಡಿಕೆಗಳ ಒಂದು ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಚಳುವಳಿಗೆ ಇಳಿದಿದ್ದರು. ಈ ಪಟ್ಟಿಯಿಂದಾಗಿ (chart) ಆ ಚಳುವಳಿಯನ್ನು Chartist ಚಳುವಳಿಯೆಂದು ಕರೆದಿದ್ದರು. ಬೇಡಿಕೆಗಳ ಈ ಅಹವಾಲಿಗೆ ಸಹಸ್ರಾರು ಸಂಖ್ಯೆಯ ಕಾರ್ಮಿಕರು ಸಹಿ ಮಾಡಿದ್ದರು. ಈ ಸಹಿಗಳಲ್ಲಿ ದೇವರ ಹೆಸರನ್ನೂ ಕೆಲವರು ಗುಜರಾಯಿಸಿದ್ದರು! ಈ ಬೇಡಿಕೆಗಳು ಅದೆಷ್ಟು ಆತ್ಯಂತಿಕವಾಗಿದ್ದವೆಂದರೆ ಅವು ಈ ಭೂಮಿಯ ಮೇಲೆ ಸಾಧ್ಯವಿಲ್ಲವೆನ್ನುವಂತಿದ್ದವು. ಆದರೆ ೧೯ನೇ ಶತಮಾನದ ಇಂಗ್ಲೆಂಡ್‌ನಲ್ಲಿ ಔದ್ಯೋಗಿಕ ಕ್ರಾಂತಿಯು ತಂದಿದ್ದ ನರಕಸದೃಶವಾದ ಕಾರ್ಮಿಕರ ಕೊಳಗೇರಿಯಲ್ಲಿ ಹುಟ್ಟಿಬಂದ ಈ ಸಮಾನತೆಯ ಕೂಗು ಸಮಾಜವಾದದ ಜೀವಾಳವೇ ಆಗಿದೆ. ಅಲ್ಲಿ ಮುಂದೆ ಆಗಿದ್ದೇನೆಂದರೆ, ಅನೇಕ ಸುಧಾರಣಾವಾದಿ ನೀತಿಗಳು ಹಾಗೂ ಕಾರ್ಯಕ್ರಮಗಳ ಮೂಲಕ ಅಂದರೆ "ವಾಸ್ತವಿಕ ರಾಜಕೀಯ"ದ ಮೂಲಕ ಕಾರ್ಮಿಕರ ಬದುಕು ಸಹನೀಯವಾಗುವಂತೆ ಪ್ರಯತ್ನಿಸಲಾಯಿತು. ಸಮಾಜವಾದಿ ಆಶಯಗಳುಳ್ಳ ಆ ಚಳುವಳಿ ತನ್ನ ಕಾವನ್ನು ಕಳೆದುಕೊಂಡಿತು. ಅಸಮಾನತೆಗಳು ಹಾಗೇ ಉಳಿದುಕೊಂಡವು.

ಈಗಲೂ ಕೂಡ ಜಾಗತೀಕರಣದ ವಿರೋಧವು ಅವಾಸ್ತವಿಕವೆಂದು ವಾದಿಸಲಾಗುತ್ತಿದೆ. ಅದನ್ನು ಚಾರಿತ್ರಿಕವಾಗಿ ಅನಿವಾರ್ಯವೆಂದು ವಿವರಿಸಲಾಗುತ್ತಿದೆ. ಈ ಬಗೆಯ ಚಿಂತನೆಯನ್ನು ನೋಮ್ ಚಾಮ್‌ಸ್ಕಿ TINA factor ಎಂದು ಕರೆದಿದ್ದಾರೆ. There is No Alternative ಅಂದರೆ ಪರ್ಯಾಯವೇ ಇಲ್ಲ, ಅದು ಅನಿವಾರ್ಯವೆನ್ನುವ ಚಿಂತನೆ. ಇಂಥ ಚಿಂತನೆಯು ಯಥಾಸ್ಥಿತಿವಾದ ಅಥವಾ ಸಿನಿಕತನವನ್ನು ಮಾತ್ರ ತರಬಲ್ಲದು. ಜಾಗತೀಕರಣವು ತಂದಿರುವ ವೈಚಾರಿಕ ನಿರಾಶೆಯ ಕಾಲದಲ್ಲಿ ಸಮಾಜವಾದವು ಶಾಶ್ವತವಾದ ವಿರೋಧಪಕ್ಷವಾಗಿ ಕೆಲಸ ಮಾಡಬೇಕಿದೆ. ಅಸಾಧ್ಯವೆಂದು ತೋರುವ ಸಮಾನತೆಯ ಆದರ್ಶವನ್ನೇ ರಾಜಕೀಯ ಅಸ್ತ್ರವನ್ನಾಗಿ ರೂಪಿಸಬೇಕಾಗಿದೆ. ಇಲ್ಲದಿದ್ದರೆ ಜಗತ್ತಿನ ಅತಿ ಶ್ರೀಮಂತ ವ್ಯಕ್ತಿಗಳ ಪಟ್ಟಿಯಲ್ಲಿ ಹೆಚ್ಚು ಜನ ಭಾರತೀಯರು ಸೇರಿಕೊಳ್ಳುತ್ತಿರುವ ಹೊತ್ತಿನಲ್ಲಿಯೇ ಜಗತ್ತಿನ ಅತಿ ದೊಡ್ಡ ಸಂಖ್ಯೆಯ ಕಡುಬಡವರು ಭಾರತದಲ್ಲಿಯೇ ಬದುಕುತ್ತಿರುವಂಥ ವೈರುಧ್ಯಗಳು ನಮ್ಮನ್ನು ಬಾಧಿಸುವುದೇ ಇಲ್ಲ. ಜಗತ್ತಿನಲ್ಲಿಯೇ ಅತ್ಯಂತ ತ್ವರಿತವಾಗಿ ಬೆಳೆಯುತ್ತಿರುವ ಆರ್ಥಿಕ ವ್ಯವಸ್ಥೆ ಜಗತ್ತಿನ ಅತೀ ಹೆಚ್ಚು ಅಪೌಷ್ಟಿಕತೆಯಿಂದ ಬಳಲುವ ಮಹಿಳೆಯರು ಹಾಗೂ ಕಂದಮ್ಮಗಳನ್ನು ಸೃಷ್ಟಿಸಿದೆ ಎನ್ನುವುದರ ವೈರುಧ್ಯಗಳು ನಮಗೆ ಅರ್ಥವಾಗುವುದಿಲ್ಲ.

ಭಾರತದ ಸಂದರ್ಭದಲ್ಲಿ ಸಮಾಜವಾದ ಹಾಗೂ ಸೆಕ್ಯುಲರ್‌ವಾದದ ಸಖ್ಯವು ಪ್ರಮುಖವಾದ ಸಂಗತಿಯಾಗಿದೆ. ಸೈದ್ಧಾಂತಿಕವಾಗಿ ಮಾತ್ರವಲ್ಲ ನಿಜಜೀವನದಲ್ಲಿ ಕೂಡ ಆಳವಾದ ಸೆಕ್ಯುಲರ್‌ವಾದಿ ನಡುವಳಿಕೆಯನ್ನು ಅದು ಬೆಳೆಸಿತು. ೧೯೯೦ ರಿಂದೀಚೆಗೆ ಭೀಕರವಾಗಿ ಬೆಳೆಯುತ್ತ ಬಂದಿರುವ ಕೋಮುವಾದದ ವಿರುದ್ಧ ಅರ್ಥಪೂರ್ಣವಾದ ವಿರೋಧ ಬಂದಿದ್ದು ಸಮಾಜವಾದಿ ನೆಲೆಯುಳ್ಳ ವ್ಯಕ್ತಿಗಳಿಂದ, ರಾಜಕೀಯ ಚಿಂತಕರಿಂದ. ಈಗ ಕೋಮುವಾದದ ವಿಕಾರವಾದ ಅಟ್ಟಹಾಸದ ಕಾಲದಲ್ಲಿ ಸೆಕ್ಯುಲರ್‌ವಾದವನ್ನು ಗಟ್ಟಿಗೊಳಿಸದಿದ್ದರೆ ನಮಗೆ ಉಳಿಗಾಲವಿಲ್ಲ. ಸೆಕ್ಯುಲರ್‌ವಾದವೆಂದ ಕೂಡಲೇ ಓ ಇದು ನೆಹರೂ ಮಾದರಿಯ, ಯುರೋಪು ಕೇಂದ್ರಿತ, ಭಾರತೀಯ ಸಮಾಜಕ್ಕೆ ಸೂಕ್ತವಲ್ಲದ ಧೋರಣೆ ಎಂದು ಒಣ ಚರ್ಚೆ ಆರಂಭವಾಗುತ್ತದೆ. ನಾನು ಅನೇಕ ಲೇಖನಗಳಲ್ಲಿ, ಭಾಷಣಗಳಲ್ಲಿ ಈ ನೆಲದ ಸೆಕ್ಯುಲರ್‌ವಾದಿ ಚಿಂತನೆಯೇ ನಮ್ಮ ಸೆಕ್ಯುಲರ್‌ವಾದವಾಗಬೇಕೆಂದು ವಾದಿಸಿದ್ದೇನೆ. ಈ ಬೇರುಗಳಿಗೆ ಆಧುನಿಕ ಸಂದರ್ಭದಲ್ಲಿ ಸಮಾಜವಾದವು ನೀರೆರೆದಿದೆಯಲ್ಲವೆ?



**ಶಾಂತವೇರಿ ಗೋಪಾಲಗೌಡ**

ಮತ್ತೆ ನಾನು ಸಿದ್ಧಾಂತಗಳನ್ನು ಹೇಳುತ್ತಿಲ್ಲ. ಕರ್ನಾಟಕದಲ್ಲಿ ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದದ ಉಚ್ಛ್ರಾಯದ ಕಾಲದಲ್ಲಿ ಸಮಾಜವಾದಿ ತತ್ವಗಳಿಗೆ ಬದ್ಧವಾಗಿ, ಎಲ್ಲವನ್ನೂ ಕಳೆದುಕೊಂಡರೂ ಬದ್ಧರಾಗಿ ಉಳಿದವರಲ್ಲಿ ಬಹುಪಾಲು ಜನ ಮೇಲ್ಜಾತಿಗಳಿಂದ ಬಂದವರು. ಭೂಒಡೆಯರಾಗಿದ್ದ ಮನೆತನಗಳಿಂದ ಬಂದವರು. ಇವರುಗಳ ಬದುಕಿನಲ್ಲಿ ಗಾಢವಾದ ಸೆಕ್ಯುಲರ್‌ವಾದಿ ನಡುವಳಿಕೆ ಅದೆಷ್ಟು ಸಹಜವಾಗಿ ಬಂದಿತು ಎಂದು ನಾನು ಇಂದಿಗೂ ಅಚ್ಚರಿ ಪಡುತ್ತೇನೆ. ಈಗ ನಮ್ಮೆದುರಿಗೆ ಇರುವ ಬಹುದೊಡ್ಡ ಸಮಸ್ಯೆಯೆಂದರೆ ಕೋಮುವಾದವು ನಮ್ಮ ಎಲ್ಲಾ ವರ್ಗಗಳನ್ನು, ಇಡೀ ನಾಗರೀಕ ಸಮುದಾಯವನ್ನು ಆವರಿಸಿಕೊಂಡುಬಿಟ್ಟಿದೆ. ಅದು ಯಾರಲ್ಲಿ ಇರಬಾರದೋ– ಅಂದರೆ ದಲಿತ ಯುವಕರಲ್ಲಿ, ಆಟೋಚಾಲಕರಂಥ ಶ್ರಮಜೀವಿಗಳಲ್ಲಿ, ಹಳ್ಳಿಗಳಲ್ಲಿ ರೈತರಲ್ಲಿ– ಅಲ್ಲಿ ಬಲವಾಗಿ ಬೆಳೆಯುತ್ತಿದೆ. ಇನ್ನು ಶಿಕ್ಷಿತ ಮಧ್ಯಮವರ್ಗವು ಬಿಡಿ. ಅತ್ಯಂತ ನಿರ್ಲಜ್ಜವಾಗಿ ಸಾಮಾಜಿಕ ತಾಣಗಳಲ್ಲಿ ತನ್ನ ಕೋಮುವಾದಿ ವಿಷವನ್ನು ಕಾರಿಕೊಳ್ಳುವ ಹೇಸಿಗೆ ಹುಟ್ಟಿಸುವ ವರ್ಗವಾಗಿದೆ. ಒಂದು ರೀತಿಯಲ್ಲಿ ಸಮಸ್ಯೆ ಆರ್.ಎಸ್.ಎಸ್. ಅಲ್ಲ. ಏಕೆಂದರೆ ಅದು ಹುಟ್ಟಿನಿಂದಲು ಬದಲಾಗದೇ ಹಾಗೇ ಇದೆ. ಸಮಸ್ಯೆಯೆಂದರೆ ನಮ್ಮ ಎಲ್ಲಾ ವರ್ಗಗಳು ಕೋಮುವಾದಿ ಚಿಂತನೆ ಹಾಗೂ ನಡುವಳಿಕೆಗಳನ್ನು ಒಪ್ಪಿಕೊಂಡುಬಿಟ್ಟಿರುವುದಾಗಿದೆ. ಇಂಥ ಸಂದರ್ಭದಲ್ಲಿ ಸಮಾಜವಾದವು ಸೆಕ್ಯುಲರ್‌ವಾದವನ್ನು ಬೆಂಬಲಿಸಬೇಕಿದೆ.

ಕರ್ನಾಟಕವು ಜಾತಿ ಸಮಾಜವಾಗಿ ಪರಿವರ್ತನೆಗೊಂಡಿರುವುದನ್ನು ನಾವು ನಮ್ಮ ಜೀವಮಾನದಲ್ಲಿಯೇ ಕಂಡಿದ್ದೇವೆ. ಒಂದು ಕಡೆಗೆ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಜೀವಂತ ಒಳಸುಳಿಯಾಗಿ ಹರಿದು ಬಂದಿದ್ದ ಜಾತಿವಿರೋಧಿ ನೆಲೆಗಳಿದ್ದರೆ ಇನ್ನೊಂದು ಕಡೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಗಳಾಗಿದ್ದ ಗಾಂಧೀವಾದಿಗಳು, ಸಮಾಜವಾದಿಗಳು, ಕಾರ್ಮಿಕ ಚಳುವಳಿಯ ನೇತಾರರು ಇವರುಗಳ ಜಾತಿವ್ಯವಸ್ಥೆ ವಿರೋಧಿ ನೆಲೆಗಳಿದ್ದವು. ಆದರೆ ಇವುಗಳಿಗೆ ತದ್ವಿರುದ್ಧವಾದ ದಿಕ್ಕಿನಲ್ಲಿ ಕರ್ನಾಟಕ ಸಮಾಜವು ಜಾತಿ ಸಮಾಜವಾಗಿ ಪರಿವರ್ತನೆಗೊಳ್ಳುತ್ತ ಬಂದಿದೆ. ಸದ್ಯದ ಪರಿಸ್ಥಿತಿಯಂತೂ ಭೀಕರವಾಗಿದೆ. ದಲಿತ ಜಾತಿಗೆ ಸೇರಿದ ಅಧಿಕಾರಿಯೊಬ್ಬನು ಕಡುಭ್ರಷ್ಟನಾಗಿ ವಿಚಾರಣೆ ಎದುರಿಸುತ್ತಿದ್ದರೆ ಅವರ ವಿರುದ್ಧ ನಾವು ಏನೂ ಮಾಡುವುದಿಲ್ಲವೆಂದು ಒಬ್ಬ ಮಂತ್ರಿ ಸಾರ್ವಜನಿಕವಾಗಿ ವಾಗ್ದಾನ ಮಾಡುತ್ತಾರೆ. ಒಬ್ಬ ದಕ್ಷ ಅಧಿಕಾರಿ ವೈಯಕ್ತಿಕ ಕಾರಣಗಳಿಂದಾಗಿ ಆತ್ಮಹತ್ಯೆ ಮಾಡಿಕೊಂಡರೆ ಆ ಅಧಿಕಾರಿಯ ಜಾತಿಯನ್ನೇ ಅವಲಂಬಿಸಿದ ರಾಜಕೀಯ ಪಕ್ಷದ ನೇತಾರರು ಇಡೀ ಕರ್ನಾಟಕವನ್ನೇ ಪ್ರಕ್ಷುಬ್ಧಗೊಳಿಸುತ್ತಾರೆ. ಆನಂತರ ಇವರು ಹೇಳಿದ ಹಾಗೆ ಅದು ಕೊಲೆಯಲ್ಲ, ಆತ್ಮಹತ್ಯೆಯೇ ಎಂದು ಸ್ಪಷ್ಟವಾಗುತ್ತ ಬಂದರೂ ಅವರಿಗೆ ಏನೂ ಬಾಧಿಸುವುದಿಲ್ಲ. ಮೊನ್ನೆ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ದಲಿತನಾಗಿದ್ದರಿಂದ ಧ್ವಜಾರೋಹಣ ಮಾಡಬೇಕಾಗಿದ್ದ ವ್ಯಕ್ತಿಯಿಂದ ಆ ಹಕ್ಕನ್ನು ಸವರ್ಣೀಯರು ಕಿತ್ತುಕೊಳ್ಳುತ್ತಾರೆ. ಸಿಗರನಹಳ್ಳಿಯಲ್ಲಿ ದಲಿತರ ಮೇಲೆ ಹೇರಲಾದ ನಿಷೇಧಗಳ ಬಗ್ಗೆ ಕರ್ನಾಟಕದ ಬಲಿಷ್ಠ ಜಾತಿಯೊಂದರ ಎಲ್ಲಾ ಧುರೀಣರು ಪಕ್ಷಾತೀತವಾಗಿ ಮೌನ ವಹಿಸುತ್ತಾರೆ.

ಸಂಶಯವೇ ಬೇಡ. ಕರ್ನಾಟಕವು ಸಂಪೂರ್ಣವಾಗಿ ಜಾತಿಸಮಾಜವಾಗಿಬಿಟ್ಟಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಜಾತಿಬೆಂಬಲ ಬಿಟ್ಟರೆ



ಗುಜರಾತ್‌ನ ಊನಾದಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯದ ವಿರುದ್ಧ ಪ್ರತಿಭಟನೆ

ಇನ್ನಾವುದೇ ಸಿದ್ಧಾಂತವೇ ಇಲ್ಲದ ಕರ್ನಾಟಕದ ರಾಜಕಾರಣ. ಅಲ್ಲದೆ ಒಂದು ಕಾಲದಲ್ಲಿ ಜಾತಿವಿರೋಧ ಹಾಗೂ ಜಾತಿವಿನಾಶಗಳನ್ನು ಪ್ರತಿಪಾದಿಸುತ್ತಿದ್ದ ಸಮಾಜವಾದಿ ಹಾಗೂ ದಲಿತ ಚಳುವಳಿಗಳು ದುರ್ಬಲಗೊಂಡಿರುವುದು. ಈ ಪರಿಸ್ಥಿತಿಯನ್ನು ಸಮಾಜವಾದವು ಹೇಗೆ ಎದುರಿಸಲ್ಲದು ಎನ್ನುವುದಕ್ಕೆ ಸರಳವಾದ ಉತ್ತರಗಳಿಲ್ಲ. ಪ್ರಾಯಶಃ ಒಂದು ಕಾಲದಲ್ಲಿ ಶೂದ್ರ ಶಕ್ತಿಗಳಿಗೆ ರಾಜಕೀಯ ಪ್ರಜ್ಞೆಯನ್ನು ತಂದುಕೊಟ್ಟ ಸಮಾಜವಾದವು ದಲಿತ ಸಮುದಾಯಗಳ ಹೋರಾಟಗಳ ಜೊತೆಗೆ ಗುರುತಿಸಿಕೊಂಡು (ಇತರ ಎಲ್ಲಾ ಪ್ರಗತಿಪರ ಶಕ್ತಿಗಳೊಂದಿಗೆ) ದಲಿತ ಹೋರಾಟವನ್ನು ಜಾತಿ ವಿರೋಧಿ ಹೋರಾಟವನ್ನಾಗಿ ಪರಿವರ್ತಿಸುವುದರ ಮೂಲಕ ಇದು ಸಾಧ್ಯವಾಗಬಹುದು. ರೋಹಿತ ವೇಮುಲನ ಆತ್ಮಹತ್ಯೆಗೆ ಸಂಬಂಧಿಸಿದ ಹೋರಾಟಗಳು ಹಾಗೂ ಇತ್ತೀಚೆಗೆ ದಲಿತರ ಮೇಲಿನ ದೌರ್ಜನ್ಯದ ವಿರುದ್ಧ ಗುಜರಾತಿನಲ್ಲಿ ನಡೆದಿರುವ ಉಗ್ರ ಪ್ರತಿಭಟನೆಗಳು ದಲಿತ ಸಮುದಾಯಗಳ ಹೊಸ ಹೋರಾಟದ ಹೆಜ್ಜೆಗಳಾಗಿವೆ. ಈ ಹೋರಾಟವು ಏಕಕಾಲಕ್ಕೆ ಕೋಮುವಾದದ ವಿರುದ್ಧ ಹಾಗೂ ಜಾತಿಯ ವಿರುದ್ಧದ ಹೋರಾಟವಾಗಿದೆ. ಇದರ ಜೊತೆಗೆ ಸಮರ್ಥವಾಗಿ ಬೆಂಬಲಕ್ಕೆ ನಿಲ್ಲದಿದ್ದರೆ ಭಾರತದ ಯಾವುದೇ ಪ್ರಗತಿಪರ ಸಂಘಟನೆ, ಪಕ್ಷಗಳಿಗೆ ಭವಿಷ್ಯವೇ ಇಲ್ಲ.

ಬಲಪಂಥೀಯ ರಾಜಕೀಯದ ಬಗ್ಗೆ, ಆ ಪಂಥದ ಪಕ್ಷವು ಅಧಿಕಾರಕ್ಕೆ ಬಂದಮೇಲೆ ಆಗುತ್ತಿರುವ ಪರಿಣಾಮಗಳ ಬಗ್ಗೆ ಆಳವಾಗಿ ಚಿಂತಿಸಿ ಬರೆದವರು ಮಾರ್ಕ್ಸವಾದಿ ಚಿಂತಕರಾದ ಐಜಾಜ್ ಅಹಮದ್ ಅವರು (Lineages of the Present ಕೃತಿಯಲ್ಲಿ). ಹಲವು ವರ್ಷಗಳ ಹಿಂದೆ ಬರೆದಾಗ ಅವರು ಭಾರತವು ಇನ್ನೂ ಫ್ಯಾಸಿಸ್ಟ್ ರಾಷ್ಟ್ರವಾಗಿಲ್ಲವೆಂದು ಹೇಳಿದ್ದರು. ಈಗ ಆಗಿದೆ ಎನ್ನುವ ಎಲ್ಲಾ ಲಕ್ಷಣಗಳೂ ಸ್ಪಷ್ಟವಾಗಿವೆ. ದಲಿತರ ಕೊಲೆಗಳ ಬಗ್ಗೆ, ಮಹಿಳೆಯರ ಮಾನಭಂಗದ ಬಗ್ಗೆ ಚಕಾರವೆತ್ತದೆ ವಿದ್ಯಾರ್ಥಿಗಳು "ರಾಷ್ಟ್ರವಿರೋಧಿ"ಗಳ ಬಗ್ಗೆ ಬೀದಿಗಿಳಿಯುತ್ತಾರೆ. ಕ್ರಿಶ್ಚಿಯನ್‌ರನ್ನು ಮಂಗಳೂರಿನ ಚರ್ಚ್‌ಗಳಲ್ಲಿ ಥಳಿಸುವ ಕೆಲಸದ ಉಸ್ತುವಾರಿ ವಹಿಸಿದ್ದ ಪೋಲೀಸ್ ವೀರನೊಬ್ಬನ ಆತ್ಮಹತ್ಯೆಯ ಬಗ್ಗೆ ಪ್ರತಿಭಟಿಸುತ್ತಾರೆ. ಇವರೇ ಫ್ಯಾಸಿಸಂನ ಯುವ ಸೈನಿಕರು. ಇದು ಉತ್ಪ್ರೇಕ್ಷೆಯೆಂದರೂ ನನ್ನ ದೃಷ್ಟಿಯಲ್ಲಿ ಈಗ ನಡೆಯಬೇಕಾದದ್ದು ಫ್ಯಾಸಿಸಂನ ವಿರುದ್ಧ ಅಂತಿಮ ಹೋರಾಟವೇ. ಇದಕ್ಕೆ ಅನುವಾಗುವ ಸಮಾಜವಾದವೇ ಈಗ ಬೇಕಾಗಿರುವುದು.



**(ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿರುವ ರಾಜೇಂದ್ರ ಚೆನ್ನಿಯವರು ನಮ್ಮ ಪ್ರತಿಭಾಶಾಲಿ ಸಂಸ್ಕೃತಿ ಮತ್ತು ರಾಜಕೀಯ ಚಿಂತಕರಲ್ಲೊಬ್ಬರಾಗಿದ್ದಾರೆ)**

# ಪ್ರೀತಿ, ಸಮಾಜವಾದ ಮತ್ತು 'ಹೊಸ ಮನುಷ್ಯ'

**–ಡಾ. ಎ. ಎನ್. ನಾಗರಾಜ್**

**ನ**ಮಗೆ ತಿಳಿದಿರುವಷ್ಟು ಮಟ್ಟಿಗೆ ಎಲ್ಲ ಕಾಲಗಳಲ್ಲೂ ಬಹುತೇಕ ಸಮಾಜಗಳಲ್ಲಿ ಮಾನವರಲ್ಲಿ ಸ್ವಾರ್ಥಿಗಳು, ಇತರರನ್ನು ಶೋಷಿಸುತ್ತಿದ್ದ ಜನಗಳು, ಹಿಂಸೆಯಲ್ಲಿ ಆನಂದ ಕಂಡುಕೊಳ್ಳುತ್ತಿದ್ದ ಜನಗಳು ಅತಿ ಸಾಮಾನ್ಯವಾಗಿದ್ದರು. ರಾಮಾಯಣ ಮಹಾಕಾವ್ಯದ ಕಾಲದಲ್ಲಿ ಕೂಡ ಅಂದಿನ ಸಮಾಜದಲ್ಲಿ ಕೈಕೇಯಿ–ಮಂಥರೆಗಳು, ರಾಕ್ಷಸರು, ಮತ್ತು (ಕಪಿಗಳಲ್ಲೂ) ಸ್ವಾರ್ಥಿಗಳು ಮತ್ತು ಸಮಾಜ ಘಾತಕರುಗಳು ಇದ್ದರು. ಮಹಾಭಾರತ ಕಾಲದಲ್ಲಿ ಕೂಡ ದುರ್ಯೋಧನ ಮತ್ತು ಆತನ ದುಷ್ಟ ತಮ್ಮಂದಿರು, ಸಂಗಡಿಗರು ಮುಂತಾದ ಜನಗಳು ಅತಿ ಸಾಮಾನ್ಯವಾಗಿದ್ದರು. ಈ ಮಹಾಕಾವ್ಯಗಳಲ್ಲಿ ಮತ್ತು ಪುರಾಣಗಳ ಕಥೆಗಳಲ್ಲಿ ಇಂತಹ ಕೆಲವು ಕೆಟ್ಟ ಜನಗಳ ಸಂಹಾರಕ್ಕೆ ದೇವರೇ ಅವತಾರವೆತ್ತಬೇಕಾಯಿತು. ಇಂತಹ ಅವತಾರ ಪುರುಷರೋ ಸ್ತ್ರೀಯರೋ ಕಾಲಕಾಲಕ್ಕೆ ಅನೇಕ ಸಮಾಜಗಳಲ್ಲಿ ಬಂದು ಹೋಗಿದ್ದರೂ, ಬಹುತೇಕ ಮಾನವ ಸಮಾಜಗಳಲ್ಲಿ ಸ್ವಾರ್ಥ, ಹಿಂಸೆ, ಶೋಷಣೆ ಇತ್ಯಾದಿ ನಕಾರಾತ್ಮಕ ಗುಣಗಳು (= 'ಕೆಟ್ಟ ಗುಣಗಳು') ಕಡಿಮೆಯಾದ ಹಾಗೆ ಕಾಣಿಸುವುದಿಲ್ಲ.

ಸ್ವಾರ್ಥ, ಹಿಂಸೆ, ಶೋಷಣೆ ಇವೆಲ್ಲಾ ಸಮಾಜಕ್ಕೆ ಮತ್ತು ಅಂತಹ ಗುಣವುಳ್ಳ ಜನಗಳಿಗೇ ಹಾನಿಕರವಾದ ಗುಣಗಳು. ಅಂತಹ ಗುಣಗಳಿರುವ ಜನಗಳಿಗೆ ಈ ಜನ್ಮದಲ್ಲೋ ಅಥವಾ ಮುಂದಿನ ಜನ್ಮದಲ್ಲೋ (ದೇವರಿಂದ) ಶಿಕ್ಷೆಯಾಗುತ್ತದೆ ಎಂಬ ನಂಬಿಕೆ ಒಂದು ಕಾಲದಲ್ಲಿ ಭಾರತದಲ್ಲಿ ಮಾತ್ರವಲ್ಲ, ಇತರ ಅನೇಕ ಸಮಾಜಗಳಲ್ಲೂ ಪ್ರಧಾನವಾಗಿತ್ತು. ಹಾಗಿದ್ದರೂ ಇಂತಹ ಕೆಟ್ಟ ಗುಣಗಳಿದ್ದ ಜನಗಳೇ ಅನೇಕ ಕಡೆ ರಾಜರುಗಳು, ರಾಜ್ಯಗಳ ಪ್ರಮುಖ ವ್ಯಕ್ತಿಗಳೂ ಆಗಿದ್ದರು, ಈಗಲಂತೂ ನಮ್ಮ ಕಣ್ಣು ಮುಂದೆಯೇ ಅಂತಹ ಜನಗಳೇ ಎಲ್ಲೆಲ್ಲೂ ಅಧಿಕಾರದಲ್ಲಿದ್ದಾರೆ. ಅದರಲ್ಲೂ ಇತ್ತೀಚೆಗೆ ಎಲ್ಲೆಲ್ಲೂ ಪ್ರಬಲವಾಗಿರುವ ಬಂಡವಾಳಶಾಹಿ ವ್ಯವಸ್ಥೆಯಲ್ಲಂತೂ, ಹೆಚ್ಚು ಹೆಚ್ಚು ವಸ್ತುಗಳ ಉತ್ಪಾದನೆಗೆ, ನಂತರ ಅವುಗಳ ಮಾರಾಟಕ್ಕೆ ಇತರರನ್ನ ತುಳಿದು ತಮ್ಮ ವಸ್ತುಗಳ ಉತ್ಪಾದನೆ ಮತ್ತು ಮಾರಾಟವನ್ನು ಹೆಚ್ಚಿಸಿಕೊಂಡು ಹಣವಂತರಾದರೆ, ಅಂತಹ ಸ್ವಾರ್ಥಿಗಳನ್ನು ಕೂಡ ಅನೇಕ ಸಮಾಜಗಳು ಗೌರವಿಸುತ್ತಿವೆ. ಜನಗಳಿಗೆ ಮರುಳು ಮಾಡುವುದಕ್ಕೆ ಆಹಾರ ಪದಾರ್ಥಗಳಲ್ಲಿ ಕೂಡ ಮಾನವರಿಗೆ ಹಾನಿಕರವಾದ ಬಣ್ಣಗಳನ್ನೋ, ಪರಿಮಳ ವಸ್ತುಗಳನ್ನೋ, ರುಚಿ ಹೆಚ್ಚಿಸುವ ಹಾನಿಕರ ರಾಸಾಯನಿಕಗಳನ್ನೋ ಬೆರೆಸಿ, ಜನಗಳ ಆರೋಗ್ಯವನ್ನು ಕೆಡಿಸುವ ರೀತಿಯಲ್ಲಿ ಮೋಸ ಮಾಡಿ, ತಾವು ಉತ್ಪಾದಿಸಿದ ವಸ್ತುಗಳ ಮಾರಾಟವನ್ನು ಹೆಚ್ಚಿಸಿಕೊಂಡು ಅಧಿಕ ಲಾಭವನ್ನು ಗಳಿಸಿಕೊಂಡು, ಗಣ್ಯ ವ್ಯಕ್ತಿಗಳು ಎನ್ನಿಸಿಕೊಳ್ಳುತ್ತಾರೆ, ಹಣವಂತ ಬಂಡವಾಳಗಾರರಾಗುತ್ತಾರೆ. ಬಹುತೇಕ ಸರ್ಕಾರಗಳು ಇಂತಹವರಿಗೆ ಉತ್ತೇಜನ ಕೊಡುವ ಕಾನೂನುಗಳನ್ನು ರಚಿಸುತ್ತವೆ.



**ಸಮಾಜವಾದಿ ಪಕ್ಷದ ಚುನಾವಣಾ ಚಿಹ್ನೆಯಾಗಿದ್ದ ಆಲದ ಮರ**

ಏಕೆಂದರೆ, ಇಂತಹ ಬಂಡವಾಳವುಳ್ಳ ಜನಗಳೇ ಎಲ್ಲ ಪಕ್ಷಗಳಿಗೂ ದೊಡ್ಡ ಪ್ರಮಾಣದಲ್ಲಿ ಹಣ ಕೊಟ್ಟು, ತಮ್ಮ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ವ್ಯಕ್ತಿಗಳನ್ನೇ ಅಭ್ಯರ್ಥಿಗಳನ್ನಾಗಿ ನಿಲ್ಲಿಸಿ ಚುನಾವಣೆಗಳಲ್ಲಿ ಗೆಲ್ಲಿಸುತ್ತಾರೆ.

ಸಮಾನತೆಯುಳ್ಳ, ಬಹುತೇಕ ಜನಗಳಿಗೆ ಹಿತಕರವಾದ, ಸಮಾಜವು ಎಲ್ಲಾದರೂ ಸ್ಥಾಪಿತವಾಗಬೇಕಾದರೆ, ಅಲ್ಲಿರುವ ಬಹುತೇಕ ಮಾನವರಲ್ಲಿ, ಅದರಲ್ಲೂ ಅಧಿಕಾರದಲ್ಲಿರುವವರಲ್ಲಿ ಸ್ವಾರ್ಥ–ಹಿಂಸೆ–ಶೋಷಣೆ ಇತ್ಯಾದಿ ಕೆಟ್ಟ ಗುಣಗಳ ಸ್ಥಾನದಲ್ಲಿ, ಎಲ್ಲ ಮಾನವರನ್ನು, ಪ್ರಾಣಿಗಳನ್ನು, ನೆಲ, ಜಲ, ಮತ್ತು ಪ್ರಕೃತಿಯ ಎಲ್ಲ ರೂಪಗಳನ್ನು ಗೌರವಿಸುವ–ಪ್ರೀತಿಸುವ ಗುಣಗಳು (='ಒಳ್ಳೆಯ ಗುಣಗಳು') ಬೆಳೆದಿರಬೇಕು. ತಮ್ಮ ಹಿತಕ್ಕಾಗಿ ಇತರರ ಹಿತವನ್ನು ಬಲಿಕೊಡುವ ಪ್ರವೃತ್ತಿ, ಪ್ರಕೃತಿಯಲ್ಲಿ ಕಾಡನ್ನು, ಪ್ರಾಣಿಗಳನ್ನು, ಭೂಮಿಯನ್ನು, ಬೆಳೆಯುವ ಆಹಾರ ಇತ್ಯಾದಿಗಳನ್ನು ತಾವು ಉತ್ಪಾದಿಸಿದ ವಸ್ತುಗಳ ಮಾರಾಟಕ್ಕಾಗಿ ಕಲುಷಿತಗೊಳಿಸುವ ಪ್ರವೃತ್ತಿ ಇತ್ಯಾದಿ ಸಮಾಜ ವಿರೋಧಿ ಗುಣಗಳು ಅಪರೂಪವಾಗಿರಬೇಕು. ಮಾನವರು, ಮತ್ತು ಪ್ರಕೃತಿಯ ಇತರ ರೂಪಗಳು ಮಾನವರಷ್ಟೇ ಸೃಷ್ಟಿಯ ಮುಖ್ಯ ಭಾಗಗಳು, ಇವೆಲ್ಲವುಗಳನ್ನೂ ಕಾಪಾಡುವ ಹೊಣೆ, ಮಾನವರನ್ನು ಕಾಪಾಡಬೇಕಾದ ಹೊಣೆಯಷ್ಟೇ ಮುಖ್ಯವಾದದ್ದು ಎಂಬ ಅರಿವು ಬಹುತೇಕ ಜನಗಳಲ್ಲಿ ಮೂಡಿರಬೇಕು. ಅಂತಹ ಅರಿವಿರುವ ಜನಗಳೇ ಆಳುವ ವರ್ಗಗಳಲ್ಲಿ ಹೆಚ್ಚಿಕೊಂಡಿರಬೇಕು.

ಇವೆಲ್ಲ ಸಾಧ್ಯವಾಗಬೇಕಾದರೆ ಒಳ್ಳೆಯ ಗುಣಗಳನ್ನು ಪ್ರತಿಯೊಬ್ಬರೂ


ತಮ್ಮಲ್ಲಿ ಬೆಳೆಸಿಕೊಳ್ಳಲು ಪ್ರಯತ್ನಿಸುವುದು ಅತಿ ಮುಖ್ಯವಾದ ಮೊದಲ ಹೆಜ್ಜೆ. ಹಾಗೆ ಬೆಳೆಸಿಕೊಳ್ಳುವುದಕ್ಕೆ ಬೇಕಾದ ವೈಜ್ಞಾನಿಕ ಮಾಹಿತಿಗಳು ಮತ್ತು ತಂತ್ರಜ್ಞಾನವು, ಈಗ ಮನಶ್ಶಾಸ್ತ್ರಜ್ಞರಿಗೆ ಮಾತ್ರವಲ್ಲ ಸಾಧಾರಣ ಜನತೆಗೂ ಕೂಡ ಲಭ್ಯವಿದೆ.

ಮಾನವರ ಒಳ್ಳೆಯ ಅಥವಾ ಕೆಟ್ಟ ಗುಣಗಳಿಗೆ ಅನುಗುಣವಾಗಿ ಅವರುಗಳ ನರಮಂಡಲಗಳ ರಚನೆಗಳು ರೂಪಿತವಾಗುತ್ತದೆ. ಆ ರಚನೆಗಳೇ ಅವರ ಮುಂದಿನ ನಡೆವಳಿಕೆಗಳನ್ನೂ ಸಾಮಾನ್ಯವಾಗಿ ನಿರ್ಧರಿಸುತ್ತವೆ. ಉದಾಹರಣೆಗೆ: ಕೋಪಿಷ್ಟರ, ಸ್ವಾರ್ಥಿಗಳ, ಹಿಂಸಕರ ಅಥವಾ ಎಲ್ಲರನ್ನೂ ಸಂಶಯದಿಂದ ನೋಡುವವರ ವಿಶಿಷ್ಟ ನರಮಂಡಲಗಳ ರಚನೆಯು, ಅವರು ತಮ್ಮ ನಡೆವಳಿಕೆಗಳಿಂದ ಕೆಟ್ಟ ಪರಿಣಾಮಗಳನ್ನು ಅನುಭವಿಸಿದರೂ, ತಮ್ಮ ಕೆಟ್ಟ ಸ್ವಭಾವಗಳನ್ನು ಮುಂದುವರೆಸುವಂತೆ ಪ್ರೇರೇಪಿಸುತ್ತದೆ. ಅವರಿಗೆ ತಮ್ಮ ಕೆಟ್ಟ ಗುಣಗಳನ್ನು ಬದಲಾಯಿಸಿಕೊಳ್ಳುವುದು ಕಷ್ಟವಾಗುತ್ತದೆ. ಆದರೆ ಅಂತಹ ಜನಗಳು, ಪ್ರಾಯೋಗಿಕವಾಗಿ ಧ್ಯಾನ ಮಾಡುವುದನ್ನು, ಇತರರಿಗೆ ಸಹಾಯ ಮಾಡುವುದನ್ನು ಮತ್ತು ಸಣ್ಣ-ಪುಟ್ಟ ಒಳ್ಳೆಯ ಕೆಲಸಗಳನ್ನು ಮಾಡುವುದನ್ನು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಂಡರೆ, ಅವರುಗಳ ಕೆಟ್ಟ ಸ್ವಭಾವ-ಪ್ರೇರಕ ನರಮಂಡಲದ ರಚನೆಗಳು ನಿಧಾನವಾಗಿ ಒಳ್ಳೆಯ ಸ್ವಭಾವ-ಪ್ರೇರಕ ನರಮಂಡಲಗಳಾಗಿ ಬದಲಾಗುತ್ತವೆ. ಬಹು ಕಾಲ ನಿಲ್ಲುವ ಆನಂದವನ್ನು ಕೊಡುವ ಪ್ರೀತಿ-ಸ್ನೇಹಗಳಿಗಿಂತ, ಸಾಧನಗಳನ್ನು ಕೊಂಡು ಕೂಡಿಟ್ಟುಕೊಂಡು ಬಳಸುವುದು ಜೀವನದ ಮುಖ್ಯ ಧ್ಯೇಯವೆಂದು ಪ್ರತಿಬಿಂಬಿಸುತ್ತಿರುವ ಮಾಧ್ಯಮಗಳ ಮಧ್ಯೆ ಬಾಳುತ್ತಿರುವವರ ಕೆಟ್ಟ-ಸ್ವಭಾವ ಪ್ರೇರಕ ನರಮಂಡಲಗಳು ಕೂಡ ಹೀಗೆ ಬದಲಾಗುವುದು ಸಾಧ್ಯ.

ಹೀಗೆ ತಮ್ಮ ಕೆಟ್ಟ ಗುಣಗಳನ್ನು ಸಂಪೂರ್ಣವಾಗಿ ಬದಲಾಯಿಸಿಕೊಂಡವರಿಗೆ (ಅಥವಾ ಮೊದಲಿನಿಂದಲೇ ಒಳ್ಳೆಯ ಗುಣಗಳುಳ್ಳವರಿಗೆ) ಇತರರನ್ನು ಶೋಷಿಸುವುದು ಅಸಾಧ್ಯವಾಗುತ್ತದೆ. ಪ್ರಕೃತಿಯ ಎಲ್ಲ ರೂಪಗಳೂ ನಮ್ಮ ವ್ಯಕ್ತಿತ್ವದ ಒಂದು ಭಾಗವೆಂದು ಅರಿತುಕೊಂಡಿರುವ ಅಂತಹ ಜನಗಳು ಎಲ್ಲ ಜೀವಿಗಳನ್ನೂ ಮತ್ತು ಎಲ್ಲ ವಸ್ತುಗಳನ್ನೂ ಪ್ರೀತಿಸುವರು. ಕಾಡು, ನದಿ-ಕೆರೆ-ಸಮುದ್ರ-ಭೂಮಿ-ಗಾಳಿ ಗಳನ್ನು ಕಲುಷಿತಗೊಳಿಸುವ ಯಾವ ಕೆಲಸವನ್ನೂ ಅವರು ಮಾಡಲಾರರು. ಇತರರು ಹಸಿದುಕೊಂಡಿರುವಾಗ ತಾವು ಬಹು ಮಹಡಿ ಮನೆಗಳನ್ನು ಕಟ್ಟಿಕೊಂಡು, ಅನೇಕ ಕಾರುಗಳನ್ನಿಟ್ಟುಕೊಂಡು, ಐಷಾರಾಮಿ ಜೀವನವನ್ನು ನಡೆಸಲಾರರು. ಅವರೇ ನಿಜವಾದ ಸಮಾಜವಾದಿಗಳು.

ಆದ್ದರಿಂದ ನಮ್ಮ ಪ್ರೀತಿಸುವ ಶಕ್ತಿಯನ್ನು ಮತ್ತು ಇತರ ಒಳ್ಳೆಯ ಗುಣಗಳನ್ನು ನಾವೇ ಬೆಳೆಸಿಕೊಳ್ಳುವುದು, ಜೊತೆಜೊತೆಗೇ ಅವುಗಳನ್ನು ಇತರರು ಕಲಿಯುವುದಕ್ಕೆ ಸಹಾಯ ಮಾಡುವುದು, ಒಂದು ಸಮಾನತೆ-ಪ್ರಧಾನವಾದ ಸಮಾಜವನ್ನು ಕಟ್ಟಲು ಬಯಸುವ ಎಲ್ಲರೂ ಮಾಡಬೇಕಾದ ಕನಿಷ್ಟ ಕೆಲಸ. ನಮ್ಮ ಒಳ್ಳೆಯ ಗುಣಗಳು ಮತ್ತು ಪ್ರೀತಿಪೂರ್ವಕ ನಡೆವಳಿಕೆಗಳು, ನಮ್ಮ ಸಂಪರ್ಕದಲ್ಲಿರುವ ಕೆಲವರಾದರೂ ತಮ್ಮ ಸ್ವಾರ್ಥ ಮತ್ತು ಇತರ ಕೆಟ್ಟ ಗುಣಗಳನ್ನು ಕಡಿಮೆ ಮಾಡಿಕೊಳ್ಳುವುದಕ್ಕೆ ಸಹಾಯಕವಾಗುತ್ತದೆ. ಒಳ್ಳೆಯ ವಿದ್ಯಾಭ್ಯಾಸ ಕ್ರಮದಲ್ಲಿ ಮಕ್ಕಳಿಗೆ ಒಳ್ಳೆಯ ಗುಣಗಳನ್ನು ಕಲಿಸುವುದು ಸಾಧ್ಯ. ಹದಿಹರೆಯದಲ್ಲಿ, ಅಥವಾ ವಯಸ್ಸಾದ ಮೇಲೆ ಕೂಡ ಹಿಂಸಾತ್ಮಕ ಮತ್ತು ಹಾನಿಕರ ಕೃತ್ಯಗಳಲ್ಲಿ ತೊಡಗುವ ಜನಗಳಲ್ಲಿ ಕೆಲವರನ್ನಾದರೂ ಸಮಾಜಕ್ಕೆ ಉಪಯುಕ್ತ ವ್ಯಕ್ತಿಗಳನ್ನಾಗಿ ಪರಿವರ್ತಿಸುವುದು ಪ್ರೀತಿಸುವ ಶಕ್ತಿಯುಳ್ಳ ವ್ಯಕ್ತಿಗಳಿಂದ ಮತ್ತು ಗುಂಪುಗಳಿಂದ ಮಾತ್ರ ಸಾಧ್ಯವೇ ಹೊರತು, ದ್ವೇಷ ಪ್ರಧಾನವಾದ ಶಿಕ್ಷೆಗಳಿಂದಲ್ಲ ಎನ್ನುವುದನ್ನು ಅನೇಕ ವೈಜ್ಞಾನಿಕ ಸಂಶೋಧನೆಗಳು ರುಜುವಾತು ಮಾಡಿವೆ. ಒಳ್ಳೆಯ ಗುಣಗಳನ್ನು ಹಲವಾರು ರೀತಿಯಲ್ಲಿ ಹೆಚ್ಚು ಜನರಿಗೆ ಕಲಿಸುವುದೇ ಎಲ್ಲ ಮಾಧ್ಯಮಗಳ ಮೊದಲ ಆದ್ಯತೆಯಾಗಬೇಕು. 'ಹೊಸ ಮನುಷ್ಯ'ದಂತಹ ಆದರ್ಶ ಪತ್ರಿಕೆಗಳು ಇಂತಹ ಹೊಸ ಮನುಷ್ಯರನ್ನು ಸೃಷ್ಟಿಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಬಹುದು.

ಇವೆಲ್ಲ ಒಂದು ಪೀಳಿಗೆಯಲ್ಲೇ ಮುಗಿಯುವ ಕೆಲಸಗಳಲ್ಲ. ಆದರೆ ಹೆಚ್ಚು ಹೆಚ್ಚು ಒಳ್ಳೆಯ ಕೆಲಸಗಳನ್ನು, ಅವು ತಕ್ಷಣದಲ್ಲಿ ಸಂಪೂರ್ಣವಾಗಿ ಫಲವನ್ನು ಕೊಡದಿದ್ದರೂ, ನಾವು ಮಾಡುತ್ತಲೇ ಇದ್ದರೆ ಅದು ಸಾಧ್ಯವಾಗುವ ಸಾಧ್ಯತೆಗಳು ಹೆಚ್ಚುತ್ತವೆ. ಇದೇ ಎಲ್ಲ ಸಮಾಜವಾದಿಗಳ ಅತಿ ಮುಖ್ಯವಾದ ಕೆಲಸ. ಈ ಪ್ರಕ್ರಿಯೆಯಲ್ಲಿ ಭಾಗವಹಿಸುವವರಲ್ಲಿ ಧನ್ಯತೆಯ ಭಾವನೆಯೇ ಪ್ರಧಾನವಾಗಿ ಅವರ ಜೀವನದಲ್ಲಿ ಆನಂದ-ತೃಪ್ತಿಗಳು ಹೆಚ್ಚುವುದರಲ್ಲಿ ಅನುಮಾನವೇ ಇಲ್ಲ.



**( ವಿಶ್ವ ಆರೋಗ್ಯ ಸಂಸ್ಥೆಯಲ್ಲಿ ಆಹಾರವಿಜ್ಞಾನಿಯಾಗಿದ್ದ ಡಾ. ನಾಗರಾಜ್ ಬಹುಕಾಲ ಅಲ್ಲಿರಲಾಗದೆ ನೈಸರ್ಗಿಕ ಬದುಕನ್ನು ಅರಸಿ ಭಾರತಕ್ಕೆ ಬಂದು ಈಗ ತೀರ್ಥಹಳ್ಳಿಯ ಬಳಿ ಭೀಮನಕಟ್ಟೆಯಲ್ಲಿ ನೆಲೆಸಿದ್ದಾರೆ).**

---


**೬ನೇ ಪುಟದಿಂದ**

ಒಂದೆರಡು ವೈಚಾರಿಕ ಪುಸ್ತಕಗಳನ್ನಿಟ್ಟುಕೊಂಡಿದ್ದ ಜೆರುಸಲೇಂನ ಟ್ಯಾಕ್ಸಿ ಡ್ರೈವರ್ ತುಂಬ ಪ್ರಬುದ್ಧನಂತೆ ಕಂಡ. ಮಾತು ನಿಧಾನವಾಗಿ ಇಸ್ರೇಲ್-ಪ್ಯಾಲೆಸ್ತೀನ್ ವಿಷಯದ ಕಡೆಗೆ ತಿರುಗಿತು. ಅಮೆರಿಕಾಗೆ ಬರುವ ಮುಂಚೆ ಈತ ಜೆರುಸಲೇಂನಲ್ಲಿ ಹೈಸ್ಕೂಲ್ ಟೀಚರ್ ಆಗಿದ್ದನಂತೆ. ತಾನು ಪಾಠ ಮಾಡುವಾಗ ಧಾರ್ಮಿಕ ಸಾಮರಸ್ಯದ ವಿಚಾರ ಬಂದಾಗ ಭಾರತದ ಉದಾಹರಣೆ ಕೊಡುತ್ತಿದ್ದನಂತೆ. ಭಾರತ ನಮಗೆ ಮಾದರಿಯಾಗಬೇಕು. ಅಲ್ಲಿ ಎಲ್ಲ ಧರ್ಮದ ಜನರು ಸಾಮರಸ್ಯದಿಂದ ಬದುಕಿ ಸಂತೋಷವಾಗಿ ಇದ್ದಾರೆ ಎಂದೇ ನಂಬಿಕೊಂಡಿದ್ದು, ಮಕ್ಕಳಿಗೂ ಅದನ್ನೇ ಹೇಳಿಕೊಡುತ್ತಿದ್ದನಂತೆ. ಈ ಮಾತು ಕೇಳಿ, ಭಾರವಾಗಿದ್ದ ನನ್ನ ಮನಸ್ಸು ಹಗುರವಾಗಿ, ತುಂಬು ಕೃತಜ್ಞತೆಗಳೊಂದಿಗೆ ಅವನನ್ನು ಬೀಳ್ಕೊಟ್ಟೆ.

ಇನ್ನು, ಕೆಲವೇ 'ಸಂಪ್ರದಾಯವಾದಿ'ಗಳ ಕಡುಹಠಕ್ಕೆ ಕಟ್ಟುಬಿದ್ದು ತಮ್ಮ ಸುತ್ತಲೂ ಭಯದ ವಾತಾವರಣವನ್ನು ಸೃಷ್ಟಿಸಿಕೊಳ್ಳುತ್ತಿರುವ ಅಮೆರಿಕನ್ನರನ್ನು ನೋಡಿ ಅನುಕಂಪ ಮೂಡುತ್ತದೆ. ಮನುಷ್ಯ ಮನುಷ್ಯರ ಮಧ್ಯೆ ದ್ವೇಷ ತಂದು ತುಂಬುತ್ತಿರುವ ಈ ಹೊತ್ತಿನಲ್ಲಿ ಅಮೆರಿಕಾದ 'ಬಂದೂಕು ಸಂಸ್ಕೃತಿ' ಮತ್ತು ಅದಕ್ಕಿರುವ ಬೆಂಬಲ ಒಂದು ದುರದೃಷ್ಟಕರ ಸಂಗತಿ. ಬಂದೂಕುಗಳ ಮೇಲಿನ ನಿರ್ಬಂಧವನ್ನು ಕಿತ್ತೊಗೆಯಬೇಕು ಎಂದು ಗಟ್ಟಿ ಧ್ವನಿಯಲ್ಲಿ ಪ್ರತಿಪಾದಿಸುವ ಈ 'ಕನ್ಸರ್ವೇಟೀವ್'ಗಳು ಅವೇ ಬಂದೂಕುಗಳಿಂದಾಗಿ ಭಯದ ನೆರಳಲ್ಲಿ ಬದುಕಬೇಕಾದ ಸಂದಿಗ್ಧತೆಯಲ್ಲಿದ್ದಾರೆ. ಇಂಥವರು ಹೆಚ್ಚಿರುವ ಟೆಕ್ಸಾಸ್ ರಾಜ್ಯದಲ್ಲಿ ಇರುವ ನನ್ನ ಯುನಿವರ್ಸಿಟಿಯು, ವಿದ್ಯಾರ್ಥಿಗಳು ಕ್ಯಾಂಪಸ್ಸಿಗೆ ಗನ್ನುಗಳನ್ನು ತರಬಾರದೆಂಬ ನಿರ್ಬಂಧವನ್ನು ಕಳೆದ ವರ್ಷ ತೆಗೆದುಹಾಕಿತು. ಅದಾಗಿ ಕೆಲವು ದಿನಗಳಲ್ಲಿ ವಿದ್ಯಾರ್ಥಿಯೊಬ್ಬನ ಹೆಗಲಲ್ಲಿದ್ದ ಕ್ಯಾಮೆರಾ ಟ್ರೈಪಾಡೊಂದನ್ನು 'ದಾಳಿಕೋರ ಆಯುಧ' ಎಂದು ಭಾವಿಸಿ ಭಯಗೊಂಡ ಯಾರೋ ಪೋಲೀಸರಿಗೆ ತಿಳಿಸಿದರು. ನೋಡ ನೋಡುತ್ತಿದ್ದಂತೆಯೇ ಮೂರು ಪೋಲಿಸ್ ಹೆಲಿಕ್ಯಾಪ್ಟರ್‌ಗಳೂ, ಪೋಲಿಸ್ ಕಾರುಗಳೂ ಶಸ್ತ್ರಸಜ್ಜಿತ ಪೋಲಿಸರೂ ಜಮಾಯಿಸಿಬಿಟ್ಟರು. ಕ್ಲಾಸ್‌ರೂಂಗಳಲ್ಲಿ ನಡೆಯುತ್ತಿದ್ದ ಲೆಕ್ಚರ್‌ಗಳು ಬಂದಾದವು. ಎಲ್ಲಾ Lock down ಆಗಿ ಹೋಗಿ ನಿಜ ಸಂಗತಿ ಗೊತ್ತಾದಾಗ ಎಲ್ಲರೂ ಮುಜುಗರಕ್ಕೆ ಒಳಗಾಗುವಂತಾಯಿತು.

ಇನ್ನೊಮ್ಮೆ, ರಸ್ತೆಯಲ್ಲಿ ಮಿತಿಗಿಂತ ಕೊಂಚ ಅಧಿಕ ವೇಗದಲ್ಲಿ ಡ್ರೈವ್ ಮಾಡುತ್ತಿದ್ದ ನನ್ನನ್ನು ತಡೆದು ನಿಲ್ಲಿಸಿದ ಪೋಲಿಸರು, ನನ್ನ ಬಳಿ ಮಾರಕ ಶಸ್ತ್ರಾಸ್ತ್ರವಿರಬಹುದೆಂಬ ಅನುಮಾನದಲ್ಲಿ ಹತ್ತಿರ ಬಂದು ಮಾತನಾಡಿಸುವ ಮೊದಲು ತೆಗೆದುಕೊಂಡ ಎಚ್ಚರಿಕೆ, ಪಡುತ್ತಿದ್ದ ಭಯ ನನಗೆ ಅತಿ ವಿಚಿತ್ರವಾಗಿ ಕಂಡಿತು. ಇಷ್ಟು ಭಯದಲ್ಲಿ ಭಾರತೀಯರು ಖಂಡಿತಾ ಬದುಕುತ್ತಿಲ್ಲ. ಇದಕ್ಕೆ ಮುಖ್ಯ ಕಾರಣ ಭಾರತದಲ್ಲಿನ ನಮ್ಮ ಜೀವನ ಅತ್ಯಂತ ಸರಳವಾಗಿದ್ದು, ಪರಸ್ಪರ ವಿಶ್ವಾಸಾರ್ಹವಾಗಿದೆ. ಅಮೆರಿಕಾದ ಭೌತಿಕ ಸುಖಗಳು ಸಾಗರದಾಚೆಗಿನ ನಮ್ಮವರಿಗೆ ಎಷ್ಟೇ ಚೆಂದವಾಗಿ ಕಂಡರೂ ಸುಖ, ನೆಮ್ಮದಿಗಳನ್ನು ನಮ್ಮ ದೇಶದಲ್ಲಿ ಪಡೆಯುವಷ್ಟು ಸುಲಭವಾಗಿ ಅಮೆರಿಕಾದಲ್ಲಿ ಪಡೆಯಲು ಅಸಾಧ್ಯ ಎಂದು ನನಗೆ ಯಾವಾಗಲೂ ಅನ್ನಿಸುತ್ತಾ ಇರುತ್ತದೆ.

ಅಮೆರಿಕಾ ಒಬ್ಬ ಭಾರತೀಯನ ಸಂಕುಚಿತ ದೃಷ್ಟಿಕೋನಗಳನ್ನು ವಿಸ್ತಾರಗೊಳಿಸಬಲ್ಲದು. ಜಗತ್ತಿನ ಅನೇಕಾನೇಕ ಸಾಧ್ಯತೆಗಳ ಕಲ್ಪನೆಗಳನ್ನು ಕಟ್ಟಿಕೊಡಬಲ್ಲದು. ಆದರೆ ಎಂದಿಗೂ ಇದು ನನ್ನ ಮನೆ ಎಂಬ ಸಮಾಧಾನವನ್ನು ಕೊಡಲಾರದು ಎಂದೇ ನನಗನ್ನಿಸುತ್ತದೆ. ನನ್ನ ಪಾಲಿಗಂತೂ ಭಾರತವನ್ನು ನನಗೆ ಇನ್ನಷ್ಟು ಹತ್ತಿರಕ್ಕೆ ತಂದುಕೊಟ್ಟಿದೆ ಅಮೆರಿಕಾ.



**(ಈಗ ಅಮೆರಿಕಾದ ಟೆಕ್ಸಾಸ್‌ನಲ್ಲಿ ಸ್ನಾತಕೋತ್ತರ ಇಂಜಿನಿಯರಿಂಗ್ ಪದವಿಗಾಗಿ (ದುಡಿಮೆಯ ಜೊತೆಗೆ)ಅಭ್ಯಾಸ ಮಾಡುತ್ತಿರುವ ಅವಿನಾಶ್ ಮೂಲತಃ ಶಿವಮೊಗ್ಗದ ಹುಡುಗ)**

೭ನೇ ಪುಟದಿಂದ)

ಇವರು ಅರಣ್ಯ ಹಕ್ಕು ಕಾಯ್ದೆ ಅಡಿ ಅರ್ಜಿ ಸಲ್ಲಿಸಿರುವುದೇ ಇಲ್ಲ. ಏಕೆಂದರೆ ಈ ಕಾಯ್ದೆ ಪ್ರಕಾರ ಗರಿಷ್ಠ ೧೦ ಎಕರೆ ಭೂಮಿಯನ್ನು ಮಾತ್ರ ಮಂಜೂರು ಮಾಡಬಹುದು. ಅದೂ ಬದುಕಿಗಾಗಿ ಸಾಗುವಳಿ ಮಾಡಿಕೊಂಡಿದ್ದರೆ ಮಾತ್ರ. ಬೇರೆ ೧೦ ಎಕರೆ ಜಮೀನು ಇಟ್ಟುಕೊಂಡು ಈ ಕಾಯ್ದೆ ಅಡಿ ಮತ್ತಷ್ಟು ಭೂಮಿಗೆ ಅರ್ಜಿ ಸಲ್ಲಿಸುವಂತಿಲ್ಲ. ಹಾಗಾಗಿ ಒತ್ತುವರಿ ತೆರವಿಗೆಂದು ಬರುವ ಅರಣ್ಯ ಅಧಿಕಾರಿಗಳ ವಿರುದ್ಧ ಸಣ್ಣ ಸಾಗುವಳಿದಾರರನ್ನು ಪ್ರತಿಭಟನೆಗಿಳಿಸುವುದೇ ಇವರಿಗೆ ಸುಲಭ ಮಾರ್ಗ. ಆದರೆ ಕಾಯ್ದೆಯ ಉರುಳು ಬಿಗಿಯಾಗುತ್ತಿದೆ. ಒಂದೆಡೆ ಸಮಾಜ ಪರಿವರ್ತನ ಸಮುದಾಯದ ಎಸ್.ಆರ್. ಹಿರೇಮಠ್ ಅವರು ಅರಣ್ಯ ಭೂಕಬಳಿಕೆಗಳನ್ನು ತೆರವುಗೊಳಿಸುವಂತೆ ಹೈಕೋರ್ಟಿಗೆ ಸಲ್ಲಿಸಿರುವ ಅರ್ಜಿ, ಮತ್ತೊಂದೆಡೆ ಭೂಕಬಳಿಕೆ ತೆರವು ಕಾಯ್ದೆ ಕಟ್ಟುನಿಟ್ಟಾಗಿ ಜಾರಿಗೆ ಬರುತ್ತಿರುವುದು. ಹಾಗಾಗಿ, ಇರುವಷ್ಟು ದಿನ ಭೂಮಿ ಇವರ ಕೈಯಲ್ಲಿ ಉಳಿದಷ್ಟೇ ಲಾಭ.

ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಅತಿ ಹೆಚ್ಚು, ಎಂದರೆ ೮೫ ಸಾವಿರ ಅರ್ಜಿಗಳು ಸಲ್ಲಿಕೆಯಾಗಿವೆ. ಫಾರಂ ನಂ. ೫೦, ೫೩ ಅಡಿ ಈ ಮೊದಲೇ ಅರ್ಜಿ ಸಲ್ಲಿಸಿದವರು, ಇನ್ನೂ ಭೂಮಿ ಹಕ್ಕು ಸಿಗದ ಮುಳುಗಡೆ ಸಂತ್ರಸ್ತರು, ಅರಣ್ಯ ಸಂರಕ್ಷಣಾ ಕಾಯ್ದೆ ೧೯೮೦ ಜಾರಿಯಾಗುವ ಮುನ್ನ ೧೯೭೮ಕ್ಕಿಂತ ಹಿಂದೆ ಸಾಗುವಳಿ ಮಾಡುತ್ತಿದ್ದವರು ಎಲ್ಲರೂ ಇದರಲ್ಲಿ ಸೇರಿದ್ದಾರೆ. ಇನ್ನೂ ಬಹಳಷ್ಟು ಜನರಿಗೆ ತಾವು ಉಳುಮೆ ಮಾಡುತ್ತಿರುವ ಭೂಮಿ ಅರಣ್ಯವೋ, ಗೋಮಾಳವೋ, ಕಂದಾಯ ಜಮೀನೋ ಎಂದು ಗೊತ್ತಿಲ್ಲದವರೂ ಇದ್ದಾರೆ.



ಸಣ್ಣ ಸಾಗುವಳಿದಾರರಿಗೆ ಭೂಮಿ ಹಕ್ಕು ನೀಡುವ ಪರವಾಗಿ ಮಾತನಾಡುವುದರೊಂದಿಗೆ ಕಂದಾಯ ಸಚಿವರು ಬದುಕಿನ ಅಗತ್ಯಕ್ಕಿಂತ ಹೆಚ್ಚು ಸಾಗುವಳಿ ಮಾಡಿ ಅರಣ್ಯ ನಾಶ ಮಾಡಿರುವವರ ವಿರುದ್ಧವೂ ನಿಲ್ಲಬೇಕಾದ ತುರ್ತು ಅಗತ್ಯವಿದೆ.

**(ಲೇಖಕರೂ, ಪತ್ರಕರ್ತರೂ ಆದ ಹೊನ್ನಾಳಿ ಚಂದ್ರಶೇಖರ್ ಶಿವಮೊಗ್ಗದ ರಂಗಭೂಮಿ ಚಟುವಟಿಕೆಗಳ ಕೇಂದ್ರಬಿಂದುವೂ ಹೌದು)**

## ಸಾಹಿತ್ಯ, ಸಂಗೀತ ವೈಚಾರಿಕತೆ ಇತ್ಯಾದಿ: ಎರಡು ಪುಸ್ತಕಗಳು




' **ರಾ**ಗ ಮಾಲಿಕಾ' ಮೈಸೂರಿನ ಟಿ.ಎಸ್. ವೇಣುಗೋಪಾಲ್–ಶೈಲಜಾ ದಂಪತಿಗಳು ಸಿದ್ಧಪಡಿಸಿ ಪ್ರಕಾಶನ ಮಾಡುತ್ತಿರುವ ಪ್ರಸಿದ್ಧ ಸಂಗೀತಗಾರರು ಮತ್ತು ಸಂಗೀತ ರಸಗ್ರಹಣ ಕುರಿತ ಪುಸ್ತಕಗಳ ಮಾಲಿಕೆ. ಈ ಮಾಲಿಕೆಯ ಏಳನೇ ಕುಸುಮ ಮಾಲಿ ಎಂದೇ ಜನಪ್ರಿಯರಾಗಿದ್ದ ಅಪ್ರತಿಮ ಪ್ರತಿಭಾಶಾಲಿ ಕೊಳಲುವಾದಕ ಟಿ.ಆರ್ ಮಹಾಲಿಂಗಂ ಕುರಿತು ಸಿದ್ಧಪಡಿಸಿರುವ 'ಭೃಂಗಿ ನಡೆಯ ಮಾಲಿ' ಪುಸ್ತಕ.

ಮಹಾಲಿಂಗಂ ಅವರ ಸಂಗೀತ ಪ್ರತಿಭೆ ಎಷ್ಟು ಅಪ್ರತಿಮವಾದದ್ದೋ ಅಷ್ಟೇ ವಿಚಿತ್ರವಾದದ್ದು ಅವರ ವ್ಯಕ್ತಿತ್ವ. ಮೂಲತಃ ತಮಿಳ್ನಾಡಿನವರಾದ ಮಹಾಲಿಂಗಂ ತಾವು ಸಾವನ್ನಪ್ಪುವವರೆಗೆ ಬಹುಕಾಲ ಬೆಂಗಳೂರಿನಲ್ಲಿ ನೆಲೆಸಿದ್ದವರು. ಅಪಾರ ಅಭಿಮಾನಿ ಸ್ನೇಹಿತರ ಮತ್ತು ಕೇಳುಗರ ಬಳಗವನ್ನು ಹೊಂದಿದ್ದರೂ ತಮ್ಮ ತಿಕ್ಕಲುತನಗಳಿಂದಾಗಿ 'ಒಂಟಿ' ಜೀವನಕ್ಕೆ ಪಕ್ಕಾದವರು. ಕುಡಿತದ ಮೊರೆ ಹೋದವರು. ಬಾಲ ಪ್ರತಿಭೆಯಾದ ಅವರನ್ನು ಅವರ ತಂದೆ ಕುಟುಂಬದ ಜೀವನೋಪಾಯಕ್ಕಾಗಿ ಬಳಸಿಕೊಂಡು ಅವರ ಬಾಲ್ಯವನ್ನೇ ಕಿತ್ತುಕೊಂಡ ಬಗ್ಗೆ ಅವರಿಗೆ ಆಳವಾದ ಬೇಸರವಿತ್ತು ಮತ್ತು ಅದೇ ಅವರ ಕುಡಿತ ಮತ್ತು ತಮ್ಮ ಅಭಿಮಾನಿಗಳ ಅಸಮಾಧಾನಗಳಿಗೆ ಕಾರಣವಾಗುತ್ತಿದ್ದ ಸಂಗೀತ ಕಛೇರಿಗಳಿಗೆ ಸಂಬಂಧಪಟ್ಟ 'ಅಶಿಸ್ತಿ'ನ ವರ್ತನೆಗಳಿಗೆ ಕಾರಣವಿರಬೇಕೆಂಬ ಸೂಚನೆ ಈ ಪುಸ್ತಕದಲ್ಲಿ ದೊರೆಯುತ್ತದೆ.

ವ್ಯಕ್ತಿತ್ವದ ಈ ಎಲ್ಲ ವಕ್ರತೆಗಳ ಹೊರತಾಗಿಯೂ ಅವರು 'ಲಹರಿ'ಯಲ್ಲಿದ್ದಾಗ ಪ್ರದರ್ಶಿಸುತ್ತಿದ್ದ ಅಪೂರ್ವ ಸಂಗೀತ ಪ್ರತಿಭೆ ಅವರನ್ನು ನಮ್ಮ ಕಾಲದ ಅತಿ ವಿಶಿಷ್ಟ ಕೊಳಲುವಾದಕರನ್ನಾಗಿ ಮಾಡಿದೆ. ಮಾಲಿಯವರ ಬದುಕಿನ ಈ ಎಲ್ಲ ಮಗ್ಗುಲುಗಳನ್ನೂ ಅವರ ಕಾಲದ ಹಿರಿಯ ಸಂಗೀತಗಾರರು, ಸುಪ್ರಸಿದ್ಧ ಪಕ್ಕವಾದ್ಯ ಕಲಾವಿದರು, ಅವರ ಆತ್ಮೀಯ ಗೆಳೆಯರು, ಶಿಷ್ಯರು ಮತ್ತು ರಸಿಕ ಕೇಳುಗರ ಸಂದರ್ಶನ ಮತ್ತು ಬರಹಗಳ ಮೂಲಕ ಸಂಪಾದಕ ದ್ವಯರು ಬಹು ಆತ್ಮೀಯವಾಗಿ ಕಟ್ಟಿಕೊಡುತ್ತಾರೆ. ಹಾಗೆ ನೋಡಿದರೆ ಈ ಪುಸ್ತಕವನ್ನು ಒಂದು ವಿಚಿತ್ರ ಪ್ರತಿಭೆಯ ಕುತೂಹಲಕರ ಜೀವನ ಕಥನದಂತೆಯೂ ಓದಿ ಆನಂದಿಸಬಹುದಾಗಿದೆ. ಇಲ್ಲಿ ಸಂಗ್ರಹಿಸಲಾಗಿರುವ ಮಾಲಿ ಅವರ ಬದುಕಿನ ಮತ್ತು ಸಂಗೀತ ಕಛೇರಿಗಳ ಹಾಗೂ ಇಲ್ಲಿನ ಕಥನಕಾರರ ಸಮೃದ್ಧ ಭಾವಚಿತ್ರಗಳ ಸೊಗಸು ಈ ಕೃತಿಯನ್ನು ಇನ್ನಷ್ಟು ಆತ್ಮೀಯಗೊಳಿಸುತ್ತದೆ. ಇದಕ್ಕಾಗಿ ಈ ಪುಸ್ತಕದ ವಿನ್ಯಾಸಕಾರರಾದ ಕೆ.ಜಿ. ಸಚ್ಚಿದಾನಂದರನ್ನು ಅಭಿನಂದಿಸಬೇಕಿದೆ. ಆದರೆ ಅವರು ಈ ಪುಸ್ತಕದ ಮುಖಪುಟವನ್ನು ಖಾಲಿ ಬಿಟ್ಟಿರುವುದರ ಮರ್ಮವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ! ಇನ್ನು ಇಲ್ಲಿನ ಬರಹಗಳನ್ನು ಆಹ್ಲಾದಕರ ರೀತಿಯಲ್ಲಿ ಕನ್ನಡಕ್ಕೆ ತಂದಿರುವ ವೇಣು–ಶೈಲಜಾರನ್ನು ಇಲ್ಲಿ ಅದಕ್ಕಾಗಿಯೂ ಅಭಿನಂದಿಸಬೇಕಿದೆ.

ಕೊನೆಯದಾಗಿ: ಈ ಪುಸ್ತಕಕ್ಕೆ ಭೃಂಗಿ ನಡೆ ಎಂಬ ಶೀರ್ಷಿಕೆ ಒದಗಿ ಬಂದಿರುವುದು ಮಾಲಿಯವರ ಕೊಳಲು ವಾದನದ ನಡೆ ಶಿವನ ಆಸ್ಥಾನದ ಮೂರು ಕಾಲುಗಳ ಭೃಂಗಿಯ ನರ್ತನದ ವಿಚಿತ್ರ ನಡೆಯನ್ನು ಹೋಲುವುದರಿಂದ ಅಂತೆ. ಅದನ್ನು ಗುರುತಿಸಿ ಈ ಕೃತಿಗೆ ಈ ಹೆಸರಿಟ್ಟವರು ಸಾಹಿತಿ ದೇವನೂರ ಮಹಾದೇವ ಅವರಂತೆ. ಅವರ ಈ ಸಂಗೀತ ಪ್ರಜ್ಞೆ ಮೆಚ್ಚುವಂತಹದ್ದೇ. ಆದರೆ ಸಂಪಾದಕರು ಇದನ್ನು ಸುಮ್ಮನೆ ಒಪ್ಪಿಕೊಳ್ಳದೆ ದೇವನೂರರ ಸಾಹಿತ್ಯವೂ ಭೃಂಗಿಯ ನರ್ತನದಂತೆ ಅನಿರೀಕ್ಷಿತ ನಡೆಗಳಿಂದ ಕೂಡಿದ್ದು ಎಂದು ಹೇಳಿರುವುದು–ಮಾಲಿಯವರ ಅಮಲಿನ ವಿಚಿತ್ರ ವರ್ತನೆಗಳಂತೆಯೇ–ಸ್ವಲ್ಪ ಅತಿಯಾಯಿತೆನ್ನಿಸುತ್ತದೆ!





**ಮ**ಹಾರಾಷ್ಟ್ರದಲ್ಲಿ ಹತ್ಯೆಯಾದ ವಿಚಾರವಾದಿ ನರೇಂದ್ರ ದಾಬೋಲ್ಕರ್ ನೇತೃತ್ವದಲ್ಲಿ ಸಿದ್ಧವಾದ ಮೌಢ್ಯಾಚರಣೆ ನಿಷೇಧ ಕಾಯಿದೆಯ ಮಾದರಿಯಲ್ಲಿ ಕರ್ನಾಟಕದಲ್ಲೂ ಅಂತಹುದೊಂದು ಕಾಯ್ದೆಯನ್ನು ಜಾರಿಗೆ ತರಲು ಹಲವು ಪ್ರಗತಿಪರ ಚಿಂತಕರ ಮತ್ತು ಕೆಲ ಮಠಾಧೀಶರ ಪ್ರೇರಣೆಯಿಂದ ಕರ್ನಾಟಕ ಸರ್ಕಾರವೂ ಎರಡು ವರ್ಷಗಳಿಂದ ಪ್ರಯತ್ನಿಸುತ್ತಿದೆ. ಕಾಯ್ದೆಯ ಕರಡೂ ಸಿದ್ಧವಾಗಿ ಶಾಸನ ಸಭೆಯ ಅನುಮೋದನೆಗಾಗಿ ಕಾಯುತ್ತಿದೆ. ಆದರೆ ಆಡಳಿತ ಮತ್ತು ವಿರೋಧ ಪಕ್ಷಗಳೆರಡಕ್ಕೂ ಸೇರಿದ ಕೆಲ ಜನವರ್ಗಗಳ ಆಕ್ಷೇಪಣೆ ಮತ್ತು ವಿರೋಧಗಳ ನಡುವೆ ಅದು ಸ್ಥಗಿತಗೊಂಡಿದೆ. ಈ ಸನ್ನಿವೇಶದ ಹಿನ್ನೆಲೆಯಲ್ಲಿ, ಈ ಕಾಯ್ದೆ ರೂಪಿಸುವಲ್ಲಿ ಸಲಹೆ–ಮಾರ್ಗದರ್ಶನ ನೀಡಿದ ನಾಡಿನ ಹಿರಿಯ ನ್ಯಾಯವೇತ್ತರೂ, ವೈಚಾರಿಕರೂ ಆದ ಕೋಚೆ (ಕೋ. ಚೆನ್ನಬಸಪ್ಪ) ಅವರು ಈ ಕಾಯಿದೆ ಜಾರಿಯ ಮಹತ್ವದ ಜೊತೆಗೇ ಅದನ್ನು ಜಾರಿಗೊಳಿಸುವಲ್ಲಿ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳು ಹಾಗೂ ಕಾಯ್ದೆ ಜಾರಿಗೆ ಬಂದಮೇಲೂ ಅದರ ಅನುಭವದ ಆಧಾರದ ಮೇಲೆ ಅದರಲ್ಲಿ ಬದಲಾವಣೆಗಳನ್ನು ಮಾಡಲು ಇರಬೇಕಾದ ಮುಕ್ತ ಮನಸ್ಸಿನ ಅಗತ್ಯವನ್ನು ವಿವರಿಸುವ ಮೌಢ್ಯಾಚರಣೆ ನಿಷೇಧ ಕಾಯ್ದೆ ಔಚಿತ್ಯ ಎಂಬ ಕಿರುಪುಸ್ತಕವನ್ನು ಪ್ರಕಟಿಸಿದ್ದಾರೆ. ಕೃತಿಯ ಮುನ್ನುಡಿಕಾರರಾದ ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಕೆ.ಸಿದ್ದಪ್ಪನವರು ಬಹು ಸಮರ್ಪಕವಾಗಿ ವಿವರಿಸಿರುವಂತೆ ಈ ಪುಸ್ತಕ ನ್ಯಾಯಶಾಸ್ತ್ರ, ತತ್ವಜ್ಞಾನ ಮತ್ತು ವೈಜ್ಞಾನಿಕ ಚಿಂತನೆಗಳಿಂದ ಮುಪ್ಪುರಿಗೊಂಡ ಒಂದು ಪ್ರಬುದ್ಧ ಕೃತಿಯಾಗಿದ್ದು, ಈ ಕಾಯ್ದೆಯ ಜಾರಿಯ ಬಗ್ಗೆ ಅತಿ ಉತ್ಸುಕರಾಗಿರುವ ಮತ್ತು ತೀವ್ರ ಪೂರ್ವಾಗ್ರಹಗಳನ್ನು ಹೊಂದಿರುವವ ಇಬ್ಬರೂ ಓದಬೇಕಾದ ವಿಚಾರಪೂರ್ಣ ಪುಸ್ತಕವಾಗಿದೆ.

**–ಡಿಎಸ್ಸೆನ್**

## ಪುಸ್ತಕಾವಲೋಕನ

ಪು: **ಭೂಮಿಯನ್ನು ಹಂಚಿಕೊಳ್ಳುವ ಬಗೆಗಳು**...(ಆಧುನಿಕತೆ, ಅಭಿವೃದ್ಧಿ, ಸಾಮಾಜಿಕ ನ್ಯಾಯ ಕುರಿತ ಬರಹಗಳು) ಲೇ: **ಡಿ.ಎಸ್. ನಾಗಭೂಷಣ** ಪ್ರ: **ಸಂವಹನ, ಮೈಸೂರು–೧** ಪು: **೩೫೨ ಬೆಲೆ: ರೂ. ೨೮೦/–**

# ಸಮಕಾಲೀನ ಸಂಕೀರ್ಣ ವಾಸ್ತವಗಳ ವಸ್ತುನಿಷ್ಠ ವಿಶ್ಲೇಷಣೆ




**ವಿ**ಚಿತ್ರ ವೈರುಧ್ಯಗಳ ವರ್ತಮಾನವೊಂದರಲ್ಲಿ ಬದುಕುತ್ತಿದ್ದೇವೆ. ಬದಲಾವಣೆಯ ಬಿರುಗಾಳಿಯ ಕೇಂದ್ರದೊಳಗೆ (eye of the storm) ಇರುವ ನಮಗೆ, ಇಂತಹದೊಂದು ವರ್ತಮಾನದ ವಾಸ್ತವವನ್ನು ಗ್ರಹಿಸಲು ಅಥವಾ ಸರಳವಾಗಿ ವಿವರಿಸಲು ಸಾಧ್ಯವಾಗುತ್ತಿಲ್ಲ. ಇಂದು ಆಗುತ್ತಿರುವ ಬದಲಾವಣೆಗಳ ಕುರಿತಾಗಿ ನಮ್ಮ ನಿಲುವುಗಳೇನು ಎನ್ನುವುದನ್ನು ವಿರೋಧಾಭಾಸಗಳೊಳಗೆ ಸಿಲುಕಿಕೊಳ್ಳದೆ ಹೇಳಲು ನಮಗಾಗುತ್ತಿಲ್ಲ. ಇವೆಲ್ಲವುಗಳ ನಡುವೆ ನನಗೆ ಕೆಲವು ವರ್ಷಗಳಿಂದ ಕುತೂಹಲಕರವಾಗಿ ಕಾಣುತ್ತಿರುವುದು ಕರ್ನಾಟಕದ ಪ್ರಗತಿಪರರು ಈ ವರ್ತಮಾನಕ್ಕೆ ಪ್ರತಿಕ್ರಿಯಿಸುತ್ತಿರುವ ಎರಡು ರೀತಿ. ಹೆಚ್ಚು ಸೂಕ್ಷ್ಮಮತಿಗಳಾದವರು ವಿಷಾದದ ದನಿಯಲ್ಲಿ ಹಾಗೂ ಮಿಕ್ಕವರು ೬೦–೭೦ರ ದಶಕದ ಕನಸುಗಳು ಕಣ್ಮರೆಯಾದವೆಂದು ಸೂತಕದ ದನಿಯಲ್ಲಿ ಮಾತನಾಡುತ್ತಾರೆ. ಎರಡೂ ಗುಂಪುಗಳವರ ಮಾತುಗಳಲ್ಲಿ ಅಸಹಾಯಕತೆಯ ಛಾಯೆ ದಟ್ಟವಾಗಿದೆ. ಅವರ ವಿವರಣೆಗಳು ಸಹ ಮನವೊಪ್ಪುವ ರೀತಿಯವುಗಳಾಗಿಲ್ಲ.

ಪ್ರಸ್ತುತ ಸಂಕಲನದ ಲೇಖನಗಳು ನಾನಿಲ್ಲಿ ಗುರುತಿಸುತ್ತಿರುವ ಪ್ರವೃತ್ತಿಗೆ ಅಪವಾದವೆಂದು ಹೇಳಲು ನನಗೆ ಯಾವ ಹಿಂಜರಿಕೆಯೂ ಇಲ್ಲ. ನಮ್ಮ ವರ್ತಮಾನವನ್ನು ಅದರ ಎಲ್ಲ ಸಂಕೀರ್ಣತೆಗಳೊಡನೆ ಅವರು ಗ್ರಹಿಸಬಲ್ಲರು. ತಮ್ಮ ವಿಶ್ಲೇಷಣೆ ವಸ್ತುನಿಷ್ಠವಾಗಿರುವಂತೆ ಎಚ್ಚರ ವಹಿಸಬಲ್ಲರು. ತಮ್ಮನ್ನು ಸಮಾಜವಾದಿಯೆಂದು ನಿಸ್ಸಂಕೋಚವಾಗಿ ಗುರುತಿಸಿಕೊಳ್ಳುವಾಗಲೂ ನಾಗಭೂಷಣರ ಸೈದ್ಧಾಂತಿಕ ಪ್ರಜ್ಞೆ ಕಪ್ಪು ಕನ್ನಡಕವಾಗುತ್ತಿಲ್ಲ. ವಾಸ್ತವವನ್ನು ವಿರೂಪಗೊಳಿಸುತ್ತಿಲ್ಲ. ನಮ್ಮ ಕಾಲದ ಸ್ಥಳೀಯ, ರಾಷ್ಟ್ರೀಯ ಮತ್ತು ಜಾಗತಿಕ ಬೆಳವಣಿಗೆಗಳನ್ನು, ಅವುಗಳ ನಡುವಿನ ಸಂಬಂಧಗಳನ್ನು ಗುರುತಿಸಿಕೊಳ್ಳುತ್ತಲೇ ಅವರು ಅನಾವರಣಗೊಳಿಸುತ್ತಾರೆ.

ಹಾಗಾಗಿಯೆ ಜಾಗತೀಕರಣವನ್ನು ಚರ್ಚಿಸುವಾಗ ತಮ್ಮ ವಿರೋಧದ ನೆಲೆಗಳನ್ನು ನಾಗಭೂಷಣ ಅವರು ಮತ್ತೆ ಮತ್ತೆ ಪರೀಕ್ಷಿಸಿಕೊಳ್ಳುತ್ತಾರೆ. ಬಂಗಾಳದ ಕಮ್ಯುನಿಸ್ಟರ ಕುರಿತಾಗಿ ಬರೆಯುವಾಗ ಇಲ್ಲವೆ ಮಾವೊವಾದಿಗಳ ಬಗ್ಗೆ ಸಹಾನುಭೂತಿ ತೋರಿಸುವ ಅರುಂಧತಿ ರಾಯ್ ಅವರ ರಾಜಕಾರಣವನ್ನು ವಿಶ್ಲೇಷಿಸುವಾಗ ಯಾವುದೆ ಮಮಕಾರವಿಲ್ಲದೆ ಎಡಪಂಥೀಯ ರಾಜಕಾರಣದ ಹಲವು ಮಾದರಿಗಳ ಮಿತಿಗಳನ್ನು ತೋರಿಸುತ್ತಾರೆ. ೨೦೦೮ರ ಆರ್ಥಿಕ ಕುಸಿತಕ್ಕೆ ಕಾರಣವಾದ ಅಡಮಾನ (mortgage) ಚಟುವಟಿಕೆಗಳನ್ನು ಜಾಗತಿಕ ಹಣಕಾಸು ಸಂಸ್ಥೆಗಳು ಹೇಗೆ ನಡೆಸಿದವು ಎನ್ನುವುದರ ಅನಾವರಣವನ್ನು ಮಾಡುತ್ತಾರೆ. ನಮ್ಮ ಕಾಲದ ಬಹುಮುಖ್ಯ ಚರ್ಚೆಯ ವಿಚಾರಗಳಾದ ರಾಷ್ಟ್ರೀಯತೆ, ಸೆಕ್ಯುಲರಿಸಮ್ ಅಥವಾ ಧರ್ಮನಿರಪೇಕ್ಷತೆ, ಧರ್ಮ, ಮತಾಂತರ, ಅಭಿವೃದ್ಧಿಯ ರಾಜಕಾರಣ, ಭಯೋತ್ಪಾದನೆ, ಮೌಢ್ಯ ಇವೆಲ್ಲವುಗಳ ಕಡೆಗೆ ತಮ್ಮ ದೃಷ್ಟಿಯನ್ನು ಹರಿಸುತ್ತಾರೆ. ಇವುಗಳ ಜೊತೆಗೆ ನಮ್ಮ ನಾಡಿನ ಮುಖ್ಯ ಚಳುವಳಿಗಳಾದ ರೈತ ಮತ್ತು ದಲಿತ ಹೋರಾಟಗಳನ್ನು ತಮ್ಮ ಅನುಭವದ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾರೆ. ಅವರ ಈ ವಿಷಯ ವ್ಯಾಪ್ತಿ ಮೂರನೆಯ ವಿಶ್ವದ ಅತ್ಯುತ್ತಮ ಸಾರ್ವಜನಿಕ ಬುದ್ಧಿಜೀವಿಗಳ (public intellectuals) ಶಕ್ತಿಯನ್ನು ಪ್ರತಿಫಲಿಸುವಂತಹುದು. ನಾಗಭೂಷಣರ ವಿಶ್ಲೇಷಣೆಯಲ್ಲಿ ನಮ್ಮ ನಡುವೆ ಸ್ಥಳೀಯವಾಗಿ ನಡೆಯುತ್ತಿರುವ ಬೆಳವಣಿಗೆಗಳನ್ನು ಜಾಗತಿಕ ಬೆಳವಣಿಗೆಗಳೊಡನೆ ಸಮರ್ಥವಾಗಿ ಜೋಡಿಸುವ ಮತ್ತು ಎರಡಕ್ಕೂ ಸೈದ್ಧಾಂತಿಕ ಚರ್ಚೆಯ ಚೌಕಟ್ಟನ್ನು ಒದಗಿಸುವ ಅಪರೂಪದ ಶಕ್ತಿಯಿದೆ. ಇದು ಇಂದು ಕನ್ನಡ ಪ್ರಗತಿಪರ ಪ್ರಪಂಚದಲ್ಲಿ ವಿರಳವಾಗಿ ಕಾಣಸಿಗುವ ಗುಣ ಕೆಲವೊಮ್ಮೆ ಕಂಬಾರ ಅಥವಾ ದೇವನೂರರಂತಹವರು ಪ್ರತಿಮೆಗಳ ಮೂಲಕ ಒಳನೋಟವೊಂದನ್ನು ಕೊಡುವಲ್ಲಿ ಯಶಸ್ವಿಯಾಗಬಹುದು. ಆದರೆ ವಾಸ್ತವದ ವಿವರಗಳನ್ನು ವಸ್ತುನಿಷ್ಠವಾಗಿ ಜೋಡಿಸಿ, ವಿಶ್ಲೇಷಣೆಯನ್ನು ಕಟ್ಟಿಕೊಡಬಲ್ಲ ಶಕ್ತಿ ಇಂದು ಅಪರೂಪವಾಗುತ್ತಿದೆ. ಇಲ್ಲಿ ಸಂಕಲಿತವಾಗಿರುವ ನಾಗಭೂಷಣ ಅವರ ಬರಹಗಳು ಆ ಗುಣವನ್ನು ಹೊಂದಿವೆ. ಆ ಕಾರಣದಿಂದಲೆ ವೈರುಧ್ಯಗಳಿಂದ ಕೂಡಿರುವ ಸಮಕಾಲೀನ ಸಂಕೀರ್ಣ ವಾಸ್ತವ ಇಲ್ಲಿ ನಮಗೆ ಗೋಚರವಾಗುತ್ತದೆ.

ಇಲ್ಲಿ ನಾನು ಮೂರು ಅಂಶಗಳನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸಬಯಸುತ್ತೇನೆ. ಈ ಅಂಶಗಳು ನನಗೆ ಇಲ್ಲಿ ವಿಶೇಷವಾಗಿ ಪ್ರಸ್ತಾಪಿಸಬೇಕು ಎಂದು ಅನ್ನಿಸಿದ ಕೆಲವು ಲೇಖನಗಳಿಗೆ ಸಂಬಂಧಿಸಿದವು. ಬೌದ್ಧಿಕತೆ, ರಾಜಕಾರಣ ಮತ್ತು ದಾರ್ಶನಿಕತೆಗೆ ಸಂಬಂಧಿಸಿದ ಈ ಮೂರು ಅಂಶಗಳು ಕನ್ನಡದ ಓದುಗರಿಗೂ ತುಂಬ ಪ್ರಸ್ತುತವಾದ ವಿಚಾರಗಳನ್ನು ಎತ್ತುತ್ತಿವೆ ಎಂದು ಭಾವಿಸಿದ್ದೇನೆ. ಮೊದಲಿಗೆ, ಎಸ್.ಎನ್. ಬಾಲಗಂಗಾಧರ ಅವರ ಮೇಲಿನ 'ಜಾತಿ ವ್ಯವಸ್ಥೆ ಎಲ್ಲಿದೆ? ಇಲ್ಲಿದೆ, ಇಲ್ಲಿದೆ!' ಎಂಬ ಲೇಖನ. ಬೌದ್ಧಿಕ ವಂಚನೆಯ ಜೊತೆಗೆ ಬಾಲಗಂಗಾಧರ ಅವರ ಅಸಹನೆ ಮತ್ತು ಗೂಂಡಾ ಪ್ರವೃತ್ತಿಯನ್ನು ನಾಗಭೂಷಣ ಅವರು ಈ ಪ್ರಬಂಧದಲ್ಲಿ ಸ್ಪಷ್ಟವಾಗಿ ದಾಖಲಿಸುತ್ತಾರೆ. ಬಾಲಗಂಗಾಧರ ಅವರ ಬರವಣಿಗೆಗಳ ಸೂಕ್ತ ಚರ್ಚೆ ಇನ್ನೂ ಕನ್ನಡ ಬೌದ್ಧಿಕ ವಲಯಗಳಲ್ಲಿ ಆಗಿಲ್ಲ. ಮುಂದೊಂದು ದಿನ ಆ ಚರ್ಚೆ ನಡೆದಾಗ ಬಾಲಗಂಗಾಧರ ಅವರ ವೈಚಾರಿಕ ಅಸಹನೆಯ ಜೊತೆಗೆ ವಿಶ್ಲೇಷಣೆಯ ಟೊಳ್ಳುತನವೂ ಹೊರಬರುತ್ತವೆ ಎನ್ನುವ ವಿಶ್ವಾಸ ನನ್ನದು.

ಎರಡನೆಯದಾಗಿ, *ಅಹಿಂದ*ದ ಅಧಿಕಾರ ರಾಜಕಾರಣ ಮತ್ತು ಸಿದ್ಧರಾಮಯ್ಯನವರ ಕುರಿತಾದ ಲೇಖನಗಳು ನಮ್ಮ ಕಾಲದ ದುರಂತ ಕಥನವೊಂದರ ಚಿತ್ರಣವಾಗಿದೆ. ಕಳೆದ ಅರ್ಧ ಶತಮಾನದ ಹಿಂದುಳಿದ ವರ್ಗಗಳ ರಾಜಕೀಯ ಹೋರಾಟಗಳು ಹೊಸ ಸಾಮಾಜಿಕ ಪರ್ಯಾಯಗಳನ್ನು ಸೃಷ್ಟಿಸದೆ ಹಳೆಯ ವ್ಯವಸ್ಥೆಯೊಳಗೆಯೇ ರಾಜಕೀಯ ಅಧಿಕಾರ ಗಳಿಸಲು ಸೀಮಿತವಾಗುತ್ತಿವೆ. ಈ ಹಿನ್ನೆಲೆಯಲ್ಲಿ ಸಿದ್ಧರಾಮಯ್ಯನವರ ರಾಜಕಾರಣದ ಸಾಧ್ಯತೆಗಳ ಮಿತಿಗಳನ್ನು, ಇಂದು ಅವರು ನಡೆದುಕೊಳ್ಳುತ್ತಿರುವ ರೀತಿಯನ್ನು ೨೦೦೬ರಲ್ಲಿಯೇ, ಹತ್ತು ವರ್ಷಗಳ ಹಿಂದೆಯೆ, ನಾಗಭೂಷಣ ಅವರು ನಿರೀಕ್ಷಿಸುತ್ತಾರೆ. ಆ ಕಾರಣದಿಂದಲೇ *ಅಹಿಂದದ* ಕುರಿತಾದ ಎರಡೂ ಲೇಖನಗಳು ತುಂಬ prescient ಆದವು.

ಇಂತಹ ನಿರಾಸೆಗಳ ಹಿನ್ನೆಲೆಯಲ್ಲಿಯೆ ನಾಗಭೂಷಣ ಅವರ ಚಿಂತನೆ ಮತ್ತು ಸಂವೇದನೆಗಳ ಹಿಂದಿನ ಬಹುಮುಖ್ಯ ಪ್ರೇರಣೆಯನ್ನು ಪ್ರಸ್ತಾಪಿಸಬೇಕು. ಅದೇನೆಂದರೆ ಸಮಾಜವಾದಿ ನಾಗಭೂಷಣ ಅವರ ಚಿಂತನೆಯಲ್ಲಿ ಮತ್ತು ಚಿಂತನಕ್ರಮದಲ್ಲಿ ಗಾಂಧಿ ಪಡೆದಿರುವ ಸ್ಥಾನ. ಸಾಮಾನ್ಯವಾಗಿ ಎಡಪಂಥೀಯರು ಗಾಂಧೀಜಿಯವರನ್ನು ಸಂಪ್ರದಾಯವಾದಿ ಬೂರ್ಜ್ವಾ ಎಂದೆ ಪರಿಗಣಿಸುವುದು. ಇದಕ್ಕೆ ಅಪವಾದವೆಂದರೆ ಲೋಹಿಯಾ ಸಮಾಜವಾದಿಗಳು ಮಾತ್ರ. ಕನ್ನಡದ ಸಂದರ್ಭದಲ್ಲಿ ಹಲವು ಖ್ಯಾತನಾಮರೂ ಸೇರಿದಂತೆ ಬಹುತೇಕ ಎಲ್ಲರೂ ದಕ್ಕಿಸಿಕೊಂಡಿರುವುದು ಸಾಮಾನ್ಯ ತಿಳುವಳಿಕೆಯ ಗಾಂಧಿಯನ್ನು ಮಾತ್ರ. ಆದರೆ ನಾಗಭೂಷಣ ಅವರು ನಿರ್ದಿಷ್ಟವಾಗಿ 'ಹಿಂದ್‌ಸ್ವರಾಜ್' ಕೃತಿಯ ರಚನಾಕಾರ ಗಾಂಧಿಯಿಂದ ನೈತಿಕ ಮತ್ತು ಬೌದ್ಧಿಕ ಸ್ಫೂರ್ತಿ ಪಡೆದಿದ್ದಾರೆ.

ಗಾಂಧೀಜಿಯವರಿಂದ ನಾಗಭೂಷಣ ಅವರು ಪಡೆಯುವ ಆಧುನಿಕ ನಾಗರಿಕತೆಯ ಕುರಿತಾದ ಬೌದ್ಧಿಕ ಪ್ರೇರಣೆ ಅವರ ವಿಶ್ಲೇಷಣೆಯೊಳಗೂ ಇಳಿಯುತ್ತದೆ. ಇದಕ್ಕೆ ನಿದರ್ಶನಗಳಾಗಿ ಇಂದಿನ ಜಾಗತೀಕರಣವನ್ನು ಆಧುನಿಕ ನಾಗರಿಕತೆಯ ತಾರ್ಕಿಕ ಅಂತ್ಯ ಎಂದು ನಾಗಭೂಷಣ ಅವರು ಹೇಳುವುದನ್ನು ಅಥವಾ ಸಿದ್ಧರಾಮಯ್ಯನವರ ಮಿತಿಗಳನ್ನು ಗುರುತಿಸುತ್ತ ಇವುಗಳು ಹೇಗೆ ರಾಜಕೀಯದ ಅನಾಧ್ಯಾತ್ಮೀಕರಣದ ಫಲವಾಗಿದೆ ಎಂದು ತೋರಿಸುವುದನ್ನೇ ಗಮನಿಸಿ. ಇವು typical ಆದ ಸಮಾಜವಾದಿ ವಿಶ್ಲೇಷಣೆಗಳಲ್ಲ. ಇಂದಿನ ಉದಾರವಾದಿ ಪ್ರಜಾಪ್ರಭುತ್ವ ಮತ್ತು ಮಾರುಕಟ್ಟೆ ವ್ಯವಸ್ಥೆಯ ಸಂದರ್ಭದಲ್ಲಿ 'ಹಿಂದ್‌ಸ್ವರಾಜ್' ಕೃತಿಯ ಗಾಂಧೀಜಿಯವರ ಪ್ರಸ್ತುತತೆಯ ಬಗ್ಗೆ ಪ್ರಶ್ನೆಗಳನ್ನು ಎತ್ತುವವರ ಸಂಖ್ಯೆ ಕಡಿಮೆಯೇನಿಲ್ಲ. ಅದಕ್ಕೆ ಉತ್ತರಗಳು ನಾಗಭೂಷಣರ ಲೇಖನಗಳಲ್ಲಿ ಇದೆ ಎಂದು ನನ್ನ ನಂಬಿಕೆ.

**–ಪೃಥ್ವಿ ದತ್ತ ಚಂದ್ರ ಶೋಭಿ**

**(ಪುಸ್ತಕಕ್ಕೆ ಬರೆದಿರುವ ಮುನ್ನುಡಿಯ ಮಾತುಗಳಿಂದ)**

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



**–ಬೀರಣ್ಣ ಯಡಳ್ಳಿ**
ಸಿವಿಲ್ ಕಂಟ್ರಾಕ್ಟದಾರರು
ಉಪ್ಪಿನ ಬೆಟಗೇರಿ ಗ್ರಾಮ
ಧಾರವಾಡ ತಾ.

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



**-ಜಿ.ಎಸ್. ಜಯದೇವ**
ದೀನಬಂಧು ಟ್ರಸ್ಟ್
ಚಾಮರಾಜನಗರ

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



–ಆಡಳಿತ ಮಂಡಳಿ ಸದಸ್ಯರು
ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್ (ರಿ)
ಎ.ಪಿ.ಎಂ.ಸಿ. ರಸ್ತೆ
ಗೋಕಾಕ (ಬೆಳಗಾವಿ ಜಿ.)

## ತಿಂಗಳ ಸಾಲುಗಳು...



ಭೌತವಾದಿ ನಾಗರೀಕತೆಯಲ್ಲಿ ಮನುಷ್ಯ ಒಳ್ಳೆಯವನಾಗಿರಲು ಯಾವುದೇ ಕಾರಣ ಅಥವಾ ಪ್ರೇರಣೆ ಇಲ್ಲವಾಗಿದೆ... ಆದುದರಿಂದ ಒಳ್ಳೆಯತನದ ಪ್ರೇರಣೆಗಳಿಗಾಗಿ ಮನುಷ್ಯ ಭೌತವಾದವನ್ನು ಮೀರಿ ಹೋಗಬೇಕಿದೆ.. ಆಗ ಮಾತ್ರ ವ್ಯಕ್ತಿಗೆ ತಾನು ಮಾರ್ಗವು ಹೇಗೋ ಗುರಿಯೂ ಆಗಿದ್ದೇನೆ ಎಂಬ ತಿಳಿವು ಉಂಟಾಗುತ್ತದೆ.

-ಜಯಪ್ರಕಾಶ್ ನಾರಾಯಣ್

ಪತ್ರಿಕೆಗೆ ಶುಭ ಕೋರುತ್ತಾ...

–ಸಿ. ಪ್ರಶಾಂತ್
ದೀಪಾ
ಕು. ಅನಘ
ಬೆಂಗಳೂರು

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper** RNI No. KARKAN/2012/47568
Rgd No. KA/SK/SMG-1209/2016-18

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)